# ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

# ರಾಜಕೀಯ ಬೆಳವಣಿಗೆಗಳ ಬಗ್ಗೆ ವರದಿ

**(ಸೆಪ್ಟೆಂಬರ್ 17–19, 2016 ನವದೆಹಲಿಯಲ್ಲಿ ನಡೆದ
ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ್ದು)**

ಪ್ರಕಟಣೆ :
**ಸಿಪಿಐ(ಎಂ), ರಾಜ್ಯ ಸಮಿತಿ,**
ಇಎಂಎಸ್ ಭವನ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು – 86

# ರಾಜಕೀಯ ಬೆಳವಣಿಗೆಗಳ ಬಗ್ಗೆ ವರದಿ

## (ಸೆಪ್ಟೆಂಬರ್ 17–19, 2016 ನವದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ್ದು)

# ಅಂತರ್ರಾಷ್ಟ್ರೀಯ ಪರಿಸ್ಥಿತಿ

ಪಕ್ಷದ 21ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರಮುಖ ಬೆಳವಣಿಗೆಗಳ ಬಗ್ಗೆ ಚರ್ಚಿಸಿ ಅವುಗಳ ಬಗ್ಗೆ ಅಂದಾಜು ಮಾಡಲು ಸಾಧ್ಯವಾಗಿಲ್ಲ. ಅದಕ್ಕಿರುವ ಎರಡು ಪ್ರಮುಖ ಕಾರಣಗಳಲ್ಲಿ ಮೊದಲನೆಯದು, ಪಕ್ಷದ ಮಹಾಧಿವೇಶನದ ತೀರ್ಮಾನದಲ್ಲಿ ನಿರ್ಧರಿಸಲಾಗಿದ್ದ ಕಾಲಮಿತಿಯಲ್ಲಿ ಸಂಘಟನಾ ಪ್ಲೀನಂ ನಡೆಸುವುದಾಗಿದ್ದರೆ, ಎರಡನೆಯ ಕಾರಣವು ಈ ಅವಧಿಯಲ್ಲಿ ಪಕ್ಷದ ಭದ್ರಕೋಟೆಗಳಾದ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿನ ಚುನಾವಣೆಗಳು. ನಮ್ಮ ಈ ಕೊರತೆಯನ್ನು ಇದೇ ಅವಧಿಯಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ  ಗುರುತಿಸಿದ್ದೆವು. ಇತ್ತೀಚಿನ ಕೆಲವು ಕೇಂದ್ರ ಸಮಿತಿಯ ಸಭೆಗಳಲ್ಲಿ ಪೂರ್ವ ನಿಯೋಜಿತ ಕಾರಣಗಳಿಗಾಗಿ ರಾಷ್ಟ್ರೀಯ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಮೊದಲೇ ನೀಡಲಾದ ಟಿಪ್ಪಣಿಗಳನ್ನು ಕೂಡ ಚರ್ಚಿಸಲು ಸಾಧ್ಯವಾಗಲಿಲ್ಲ. ಹಿಂದಿನ ಕೇಂದ್ರ ಸಮಿತಿಯ ಸಭೆಯಲ್ಲಿ ಸಾಧ್ಯವಾದಷ್ಟು ಬೇಗ ಇದನ್ನು ಸರಿಪಡಿಸಲೇಬೇಕೆಂದು ನಿರ್ಣಯಿಸಲಾಗಿತ್ತು. ಹೀಗಾಗಿ 21ನೇ ಮಹಾಧಿವೇಶನದ ನಂತರದ ಅವಧಿಯ ಹಲವು ಪ್ರಮುಖ ಬೆಳವಣಿಗೆಗಳನ್ನು ಇಲ್ಲಿ ವಿಮರ್ಶಿಸಲಾಗಿದೆ.

**ಜಾಗತಿಕ ಆರ್ಥಿಕ ಬಿಕ್ಕಟ್ಟು :**

ಪ್ರಸಕ್ತ ಜಾಗತಿಕ ಆರ್ಥಿಕ ಬಿಕ್ಕಟ್ಟು 2008ರ ಆರ್ಥಿಕ ಕುಸಿತದೊಂದಿಗೆ ಪ್ರಾರಂಭವಾಗಿದ್ದು. ಅದು ಇನ್ನಷ್ಟು ತೀವ್ರಗೊಳ್ಳುತ್ತಾ ಮುಂದುವರಿಯುತ್ತದೆ ಎಂದು ನಾವು 20ನೇ ಮಹಾಧಿವೇಶನದ ಸೈದ್ಧಾಂತಿಕ ವಿಷಯಗಳ ಮೇಲಿನ ನಿರ್ಣಯ ಹಾಗೂ 21ನೇ ಮಹಾಧಿವೇಶನದ ರಾಜಕೀಯ ನಿರ್ಣಯಗಳಲ್ಲಿ ಗುರುತಿಸಿದ್ದೆವು. ಈ ಬಿಕ್ಕಟ್ಟಿನಿಂದ ಹೊರ ಬರಲು ಜಾಗತಿಕ ಬಂಡವಾಳವು ನಡೆಸುವ ಎಲ್ಲಾ ಪ್ರಯತ್ನಗಳಿಂದ ಈ ಬಿಕ್ಕಟ್ಟು ಇನ್ನೂ ತೀವ್ರಗೊಳ್ಳುತ್ತದೆ. ಮಿತವ್ಯಯದ ಹೆಸರಿನಲ್ಲಿ ದುಡಿಯುವ ಜನರ ಶೋಷಣೆಯನ್ನು ನಿರ್ದಯವಾಗಿ ನಡೆಸುತ್ತಿರುವ ಇತ್ತೀಚಿನ ಕ್ರಮಗಳೂ ಕೂಡ ಬಿಕ್ಕಟ್ಟಿನಿಂದ ಹೊರ ಬರಲು ಜಾಗತಿಕ ಬಂಡವಾಳವು ನಡೆಸುತ್ತಿರುವ ಪ್ರಯತ್ನವಾಗಿದ್ದು ಅದೂ ಕೂಡ ಫಲಕಾರಿಯಾಗುತ್ತಿಲ್ಲ. ಬಿಕ್ಕಟ್ಟಿನಿಂದ ಹೊರ ಬರುವುದಕ್ಕಾಗಿ, ಜಾಗತಿಕ ಬಂಡವಾಳವು ಜನರನ್ನು ಶೋಷಿಸುವುದನ್ನು ತೀವ್ರಗೊಳಿಸುತ್ತಾ ಆದಿಮ ಶೇಖರಣೆಯ (ಪ್ರಿಮಿಟಿವ್ ಅಕ್ಯುಮುಲೇಶನ್) ಲೂಟಿಕೋರ ಪ್ರಕ್ರಿಯೆಯನ್ನು ಹರಿಯಬಿಡುತ್ತದೆ.

ಇದರ ಒಟ್ಟಾರೆ ಪರಿಣಾಮವೆಂದರೆ ನವ–ಉದಾರೀಕರಣದ ಮಾದರಿಯ ಜಾಗತೀಕರಣದ ಅಂತರ್ಗತವಾದ ಪ್ರವೃತ್ತಿಗೆ ಒತ್ತಾಸೆ ಕೊಡುತ್ತಾ ಆರ್ಥಿಕ ಅಸಮಾನತೆಯನ್ನು ವಿಸ್ತರಿಸುತ್ತಾ ಹೋಗುವುದು. ಇದರ ಪರಿಣಾಮವಾಗಿ ಆಂತರಿಕ ಬೇಡಿಕೆಯು ಜಾಗತಿಕ ಆರ್ಥಿಕದಲ್ಲಿಯೂ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿಯೂ ಸತತವಾಗಿ ಇಳಿಯುತ್ತಿದ್ದು ಇದರಿಂದಾಗಿ ಆರ್ಥಿಕ ಪ್ರಗತಿ ಮತ್ತು ಬೆಳವಣಿಗೆ ಕುಸಿಯುತ್ತಿದೆ. ಈ ನಿರಂತರ ಕುಸಿಯುವಿಕೆಯಿಂದಾಗಿ ದೊಡ್ಡ ಜನಸಮುದಾಯದ ಖರೀದಿಸುವ

ಶಕ್ತಿಯಲ್ಲಿ ಇಳಿಮುಖವಾಗಿ ಇರುವುದರಿಂದಾಗಿ ಆದಾಯ ಮತ್ತು ಸಂಪತ್ತಿನ ಅಸಮಾನತೆಯ ಮಟ್ಟವು ಅಪಾಯಕಾರಿ ಹಂತವನ್ನು ತಲುಪುತ್ತಿದೆ. 'ಮೆಕೆನ್ಸಿ ಗ್ಲೋಬಲ್ ಇನ್ಸ್‌ಟಿಟ್ಯೂಟ್'ನ ಅಂದಾಜಿನ ಪ್ರಕಾರ ಈ ಎಂಟು ವರ್ಷಗಳ ಅವಧಿಯಲ್ಲಿ ಅಮೇರಿಕಾದ ಜನಸಂಖ್ಯೆಯ ಶೇಕಡಾ 81ರಷ್ಟು ಜನರ ಒಟ್ಟು ಆದಾಯದ ಮಟ್ಟವು ಏರಿಕೆಯಾಗಿಲ್ಲ, ಬದಲಿಗೆ ಇಳಿಮುಖವಾಗಿದೆ. ಇದು ಇಟಲಿಯಲ್ಲಿ ಶೇ.97, ಬ್ರಿಟನ್ನಿನಲ್ಲಿ ಶೇ.70, ಫ್ರಾನ್ಸ್‌ನಲ್ಲಿ ಶೇ.60ರಷ್ಟು ಇದೆ. ಜನರ ಖರೀದಿಸುವ ಶಕ್ತಿಯು ಇಳಿಮುಖವಾಗುತ್ತಿರುವಾಗಲೇ ಲಾಭವು ಏರುತ್ತಿರುವುದು ನಿಚ್ಚಳವಾಗಿದೆ. ಇದರಿಂದಾಗಿ ಉತ್ಪಾದಿತ ಸರಕುಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸುವಲ್ಲಿ ವಿಫಲವಾಗಿ ಬಂಡವಾಳಶಾಹಿಯ ಸಾಂಪ್ರದಾಯಿಕ ಬೆಳವಣಿಗೆಯ ಪದ್ಧತಿಯು ವಿಫಲವಾಗುತ್ತಿದೆ.

ಅಂತರ ರಾಷ್ಟ್ರೀಯ ಹಣಕಾಸು ನಿಧಿಯ 2016ರ ಕಣ್ಣೋಟವು, ಜಾಗತಿಕ ಆರ್ಥಿಕ ಕಾರ್ಯಸೂಚಿಯು 'ತೀರಾ ಸುದೀರ್ಘವಾದ ನಿಧಾನ' ಗತಿಯಲ್ಲಿದೆ ಎಂದು ಬಣ್ಣಿಸಿದೆ. ಇದರ 2017ರ ಅಂದಾಜಿನಂತೆ ಜಾಗತಿಕ ಬೆಳವಣಿಗೆಯು ಶೇಕಡಾ 3.4ರಷ್ಟು ಇಳಿಮುಖವಾಗಲಿವೆ. ಇದು ಬಹಳ ಕೃತಕವಾಗಿ ಹಿಗ್ಗಿಸಿದ ಅಂದಾಜಾಗಿ ಕಂಡು ಬರುತ್ತಿದೆ. ವಿಶ್ವ ಬ್ಯಾಂಕಿನ ಇತ್ತೀಚಿನ ಜಾಗತಿಕ ಆರ್ಥಿಕ ಕಣ್ಣೋಟದ ವರದಿಯಂತೆ ಜಾಗತಿಕ ಬೆಳವಣಿಗೆಯ ಮುನ್ನೋಟವು ಜನವರಿ 2016ರಕ್ಕೆ ಶೇಕಡಾ 2.9 ರಷ್ಟು ಇದ್ದದ್ದನ್ನು ಜೂನ್ 2016ಕ್ಕೆ 2.4ಕ್ಕೆ ಇಳಿಕೆ ಮಾಡಿದೆ.

ಈ ಇಳಿಮುಖಕ್ಕೆ ಹೂಡಿಕೆಯಲ್ಲಿನ ಕೊರತೆ ಹಾಗೂ ರಫ್ತಿನ ನಿಧಾನಗತಿಯ ಬೆಳವಣಿಗೆಯು ಎರಡು ಪ್ರಮುಖ ಕಾರಣಗಳೆಂದು ವಿಶ್ವ ಬ್ಯಾಂಕ್ ಗುರುತಿಸಿದೆ. ಬಹುಸಂಖ್ಯಾತ ಜನರ ಖರೀದಿಸುವ ಶಕ್ತಿಯ ಆಧಾರಿತ ಸ್ವದೇಶಿ ಬೇಡಿಕೆಯು ಮೇಲಿನ ಎರಡು ಅಂಕಿಗಳಿಗೆ ಪೂರಕವಾಗಿರುವುದು ಸ್ಪಷ್ಟವಿದೆ.

ಅಮೇರಿಕಾದ ಆರ್ಥಿಕತೆಯ ಬೆಳವಣಿಗೆಯ ದರವು ಜನವರಿ 2016ಕ್ಕೆ ಅಂದಾಜು ಮಾಡಲಾಗಿದ್ದಕ್ಕಿಂತಲೂ ಶೇಕಡಾ 0.81ರಷ್ಟು ಕಡಿಮೆ ಇರಲಿದೆ. ಇದರ ಒಟ್ಟಾರೆ ಬೆಳವಣಿಗೆಯ ದರ ಶೇಕಡಾ 2ಕ್ಕಿಂತಲೂ ಕಡಿಮೆ ಇರುವುದೆಂದು ಅಂದಾಜಿಸಲಾಗಿದೆ. ಅಂತರಾಷ್ಟ್ರೀಯ ಹಣಕಾಸು ನಿಧಿಯು 2017ರ ಬೆಳವಣಿಗೆಯನ್ನು ಶೇಕಡಾ 2.20 ಎಂದು ಅಂದಾಜು ಮಾಡಿದೆ. ಯೂರೋಪ್ ಪ್ರದೇಶದಲ್ಲಿ ತೀವ್ರ ಮಿತವ್ಯಯದ ಕ್ರಮಗಳನ್ನು ಜಾರಿಗೊಳಿಸಿದ್ದಾಗಿಯೂ, ಬೆಳವಣಿಗೆಯು ಶೇಕಡಾ 1.6 ಎಂದು ಅಂದಾಜಿಸಲಾಗಿದೆ. ಜಾಗತಿಕ ಬಂಡವಾಳದ ಕಾಯಂ ಮೂರನೇ ಧ್ರುವವಾದ ಜಪಾನ್, 'ಅಬೆನೊಮಿಕ್ಸ್' ಎಂಬ ( ಪ್ರಧಾನಿ ರೆಂಜೂ ಅಬೆಯ ಆರ್ಥಿಕ ನೀತಿಗಳ) ವರ್ಣರಂಜಿತ ಪ್ರಚಾರದ ನಡುವೆಯೂ ಶೇಕಡಾ 0.5ರಷ್ಟು ಬೆಳವಣಿಗೆಯನ್ನು ಮಾತ್ರ ಅಂದಾಜಿಸಲಾಗಿದೆ. ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿಯ ಅಂದಾಜಿನ ಪ್ರಕಾರ ಈ ಬೆಳವಣಿಗೆಯು ಕೇವಲ ಶೇಕಡಾ 0.2 ಆಗಲಿದೆ.

ಜಾಗತಿಕ ಬಂಡವಾಳದ ಈ ಮೂರು ಪ್ರಮುಖ ಕ್ಷೇತ್ರಗಳಲ್ಲಿ ಉತ್ಪಾದನೆಯಲ್ಲಿ ಬೆಳವಣಿಗೆ ಇಲ್ಲದಿರುವುದನ್ನು, ಸ್ಥಳೀಯ ಬೇಡಿಕೆಯ ಕುಸಿತದಿಂದ ಗುರುತಿಸಬಹುದಾಗಿದೆ.

## ಬೆಳೆಯುತ್ತಿರುವ ನಿರುದ್ಯೋಗ

ಈ ಕಡಿಮೆ ದರದ ಬೆಳವಣಿಗೆ ಮತ್ತು ಮುಂದುವರೆಯುತ್ತಿರುವ ಬಿಕ್ಕಟ್ಟಿನ ಸಾಮಾನ್ಯ ಪರಿಣಾಮವೆಂದರೆ, ಯುವಜನತೆಯಲ್ಲಿ ನಿರುದ್ಯೋಗದ ಮಟ್ಟವು ಅತಿಯಾಗಿ ಹೆಚ್ಚುತ್ತಿರುವುದು. ಅಮೇರಿಕಾದ ಪ್ರಸಕ್ತ ಅಧ್ಯಕ್ಷೀಯ ಚುನಾವಣೆಯು ಈ ಬೆಳೆಯುತ್ತಿರುವ ನಿರುದ್ಯೋಗದ ಮೂಲ ವಿಷಯದಲ್ಲಿ ಕೇಂದ್ರೀಕೃತವಾಗುತ್ತಿದೆ. ಯುರೋಪಿಯನ್ ಕೂಟದಿಂದ ಬ್ರಿಟನ್ ಹೊರಬರಲು ಕೈಗೊಂಡ

ನಿರ್ಣಯದ ಹಿಂದೆಯೂ  ಕುಂಠಿತಗೊಳಿಸುತ್ತಿರುವ ಆರ್ಥಿಕದಲ್ಲಿ ಈ ಬೆಳೆಯುತ್ತಿರುವ ಯುವಕರ ನಿರುದ್ಯೋಗದ ಮಟ್ಟವು ಪ್ರಮುಖ ಕಾರಣವಾಗಿದೆ.

ಆಂತರಿಕ ಬೇಡಿಕೆಯ ಮಟ್ಟವನ್ನು ಹತ್ತಿಕ್ಕಿ, ಲಾಭಗಳಿಕೆಯನ್ನು ಹೆಚ್ಚಿಸುವ ಈ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿರುವ ವೈರುಧ್ಯವು ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಇದನ್ನು ವಿಶ್ವ ಬ್ಯಾಂಕ್ "ಎದುರ್ಗಾಳಿ" (Headwinds) ಎಂದು ಗುರುತಿಸಿದ್ದು ಅದರ ಪರಿಣಾಮವನ್ನು ಕೀಳಂದಾಜು ಮಾಡಿದ್ದರಿಂದಾಗಿ, ಬೆಳವಣಿಗೆಯ ದರದ ಬಗ್ಗೆ ಹಾಗೂ ಜಾಗತಿಕ ಬಿಕ್ಕಟ್ಟಿನಿಂದ ಹೊರಬರುವ ಸಾಧ್ಯತೆ ಬಗೆಗಿನ ಅದರ ಭವಿಷ್ಯ ನುಡಿ ಸತ್ಯದಿಂದ ದೂರವಾಗಿದೆ.

## ಶ್ರೀಮಂತರನ್ನು ಸಮೃದ್ಧಗೊಳಿಸುತ್ತಾ, ಬಡವರನ್ನು ನಿರ್ಗತಿಗೊಳಿಸುವುದು

20ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ಗುರುತಿಸಿರುವಂತೆ, ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಜಾಗತೀಕರಣ ಮುಖಾಂತರ ನವ ಉದಾರೀಕರಣ ಪ್ರಕ್ರಿಯೆಯ ಮೂಲ ಉದ್ದೇಶವು ಲಾಭವನ್ನು ಹೆಚ್ಚಿಸಿಕೊಳ್ಳುವುದೇ ಆಗಿದೆ. ಈ ಬಿಕ್ಕಟ್ಟಿನ ಅವಧಿಯಲ್ಲಿ ಹಣಕಾಸು ಸಂಸ್ಥೆಗಳ ಸಾಲ ವಿತರಣೆಯ ದೊಡ್ಡ ಭಾಗವು ಕಾರ್ಪೊರೇಟ್ ವಲಯಕ್ಕೆ ಹೋಗಿದೆ. ಹಿಂದೆ ಇದು  ಕುಟುಂಬಗಳ ಖರೀದಿಸುವ ಶಕ್ತಿ ಹೆಚ್ಚಲು ದೊರಕುತ್ತಿತ್ತು.

2010 ರಿಂದೀಚೆಗೆ ಅಭಿವೃದ್ಧಿಶೀಲ ದೇಶಗಳ ಆರ್ಥಿಕತೆ ಮತ್ತು ಮಾರುಕಟ್ಟೆಯಲ್ಲಿನ ಹಣಕಾಸೇತರ ಖಾಸಗಿ ವಿಭಾಗ, ಒಟ್ಟು ಕಾರ್ಪೊರೇಟ್ ಕ್ಷೇತ್ರಕ್ಕೆ ದೊರೆತಿರುವುದರ ಸಾಲ ಸೌಲಭ್ಯದ ಹೆಚ್ಚಳದ ಮುಕ್ಕಾಲು ಭಾಗವನ್ನು ಪಡೆದಿದೆ. ಈ ಕಾರ್ಪೊರೇಟ್‌ಗಳ ಬ್ಯಾಲೆನ್ಸ್ ಶೀಟ್ ಗಳು ಬ್ಯಾಂಕಿಂಗ್ ವ್ಯವಸ್ಥೆಯ ಆರೋಗ್ಯಕ್ಕೆ ಪ್ರತಿಕೂಲ ಪರಿಣಾಮ ಬೀರುವಂತಿವೆ. (ಭಾರತದಲ್ಲಿಯೂ ನಾವು ಜಾಗತಿಕ ಬಂಡವಾಳಶಾಹಿಯ ಈ ಪ್ರವೃತ್ತಿಯ ಜೊತೆಗೆ ಮೋದಿ ಸರ್ಕಾರ ಅನುಸರಿಸುತ್ತಿರುವ ಚಮಚಾ ಬಂಡವಾಶಾಹಿ ವ್ಯವಸ್ಥೆಯನ್ನು ಗಮನಿಸಬಹುದಾಗಿದೆ.)

ಕಾರ್ಪೊರೇಟ್‌ಗಳಿಗೆ ಅವರ ಲಾಭವನ್ನು ಹೆಚ್ಚಿಸಲು ಈ ರೀತಿಯ ದೊಡ್ಡ ಸಾಲಗಳನ್ನು ನೀಡುವುದರ ಜೊತೆಗೆ ತನ್ನ ಅಧಿಕಾರಿಗಳಿಗೆ ಭಾರೀ ವೇತನ ಪಾವತಿಯನ್ನು ಮುಂದುವರೆಸುತ್ತಿರುವುದರಿಂದಾಗಿ ಡೊಯಿಶ್ ಬ್ಯಾಂಕ್ ಈಗ ಜಾಗತಿಕ ಹಣಕಾಸು ಸ್ಥಿರತೆಯನ್ನು ತೀವ್ರ ಅಪಾಯಕ್ಕೆ ತೆರೆದಿಡುತ್ತಿದೆ ಎಂದು ಅಂತರಾಷ್ಟ್ರೀಯ ಹಣಕಾಸು ನಿಧಿಯ ವರದಿ ಗುರುತಿಸಿದೆ. ಅದರಂತೆ ಈ ಬ್ಯಾಂಕಿನ ಬಂಡವಾಳದ ಮಟ್ಟ ಶೇಕಡಾ 3ಕ್ಕಿಂತ ಕಡಿಮೆಯಾಗಿದೆ. ಸುಮಾರು ಎಪ್ಪತ್ತು ಟ್ರಿಲಿಯನ್ ಅಮೇರಿಕನ್ ಡಾಲರ್ ಅಂದರೆ ಸರಿಸುಮಾರು ಜಾಗತಿಕ ಜಿಡಿಪಿಯಷ್ಟು ಹಣಕಾಸು ತೆರೆದಿರುವಿಕೆಯಿಂದ ಅದರ ಆಸ್ತಿಗಳು ಅಪಾಯದ ಅಂಚಿಗೆ ಸಿಲುಕಿವೆ. ಇಟಲಿಯ ಬ್ಯಾಂಕುಗಳು 5,360 ಶತಕೋಟಿ ಯೂರೋ ಗಳಷ್ಟು ವಸೂಲಾಗದ ಸಾಲಗಳನ್ನು ತೆಗೆದಿರಿಸಿವೆ. ಗ್ರೀಸ್‌ನಲ್ಲಿ ಶೇಕಡಾ 35ರಷ್ಟು ಸಾಲವನ್ನು ಅನುತ್ಪಾದಕ ಅಂದರೆ ವಸೂಲಾಗದ ಸಾಲವೆಂದು ವರ್ಗೀಕರಿಸಲಾಗಿದೆ. ಇದರ ಪರಿಣಾಮವಾಗಿ, ಅನೇಕ ಯುರೋಪಿಯನ್ ದೇಶಗಳು 'ಸಾರ್ವಭೌಮ ಸಾಲ'ದಿಂದ ಕುಂಠಿತವಾಗಿವೆ. ನಾವು 20 ಮತ್ತು 21ನೇ ಮಹಾಧಿವೇಶನದಲ್ಲಿ ವಿಶ್ಲೇಷಿಸಿದಂತೆ ಜಾಗತಿಕ ಬಂಡವಾಳವು ತನ್ನ ಬಿಕ್ಕಟ್ಟಿನಿಂದ ಹೊರಬರುವುದಕ್ಕಾಗಿ ಕಾರ್ಪೊರೇಟ್ ದಿವಾಳಿತನವನ್ನು 'ಸಾರ್ವಭೌಮ ದಿವಾಳಿ'ತನವಾಗಿ ಮಾರ್ಪಾಡು ಮಾಡುತ್ತದೆ ಎಂಬುದು ಸಂಪೂರ್ಣವಾಗಿ ಸಾಬೀತಾಗಿದೆ. ಸ್ಪೇನ್‌ನ ರಾಷ್ಟ್ರೀಯ ಸಾಲವು ಅದರ ಉತ್ಪಾದನೆಯ ಶೇಕಡಾ 100ಕ್ಕಿಂತ ಹೆಚ್ಚಾಗಿದ್ದು ಇದು 20ನೇ ಶತಮಾನದ ಪ್ರಾರಂಭದಿಂದೀಚೆಗಿನ ಅತಿ ಹೆಚ್ಚಿನ ರಾಷ್ಟ್ರೀಯ ಸಾಲ. ಗ್ರೀಸ್‌ನ

ಸಾಲವು ಅದರ ಜಿಡಿಪಿಯ ಶೇಕಡಾ 170ರಷ್ಟಿದೆ. ಇದು ಯುರೋಪಿಯನ್ ಬ್ಯಾಂಕ್‌ಗಳು ನೀಡಿದ 440 ಶತಕೋಟಿ ಡಾಲರ್‌ನ ಬೈಲೌಟ್ ಪ್ಯಾಕೇಜು ಕೊಟ್ಟ ಮೇಲೂ ಇರುವ ಸ್ಥಿತಿ. ಇದರ ಶೇಕಡಾ 95ರಷ್ಟನ್ನು ಈ ಬ್ಯಾಂಕುಗಳ ಮತ್ತು ಖಾಸಗಿ ಹೂಡಿಕೆದಾರರ ಸಾಲ ಮರುಪಾವತಿಗೆ ಬಳಸಲಾಗಿದೆ. ಮಿತವ್ಯಯದ ಕ್ರಮಗಳಿಂದಾಗಿ ಆರ್ಥಿಕತೆಯು ಕುಂಠಿತವಾಗಿವೆ. 2016ರಲ್ಲಿ ನಿರುದ್ಯೋಗದ ಪ್ರಮಾಣ ಶೇಕಡಾ 24 ಇದ್ದು ಅದರಲ್ಲಿ ಯುವಕರ ನಿರುದ್ಯೋಗದ ಪ್ರಮಾಣ ಶೇಕಡಾ 50ರಷ್ಟಿದೆ. ವೇತನಗಳು ಶೇಕಡಾ 24ರಷ್ಟು ಕಡಿತಗೊಂಡಿವೆ ಹಾಗೂ ಕನಿಷ್ಟ ವೇತನವನ್ನು ಶೇಕಡಾ 22ರಷ್ಟು ಕಡಿಮೆ ಮಾಡಲಾಗಿದ್ದು, ಬಡವರ ನಿವೃತ್ತಿ ವೇತನವನ್ನೂ ಹೀಗೆ ಕಡಿತಗೊಳಿಸಲಾಗಿದೆ.

ಒಟ್ಟಾರೆಯಾಗಿ ಜಾಗತಿಕ ಬಂಡವಾಳಶಾಹಿ ಆರ್ಥಿಕತೆಯು, ಬಂಡವಾಳಶಾಹಿ ಆಂತರಿಕ ಬಿಕ್ಕಟ್ಟಿನಿಂದ ಹೊರಬರುವಲ್ಲಿ ವಿಫಲವಾಗಿದೆ. ನಾವು 20 ಮತ್ತು 21ನೇ ಮಹಾಧಿವೇಶನದಲ್ಲಿ ಗುರುತಿಸಿದಂತೆ ಈಗಿರುವ ಬಿಕ್ಕಟ್ಟಿನ ತೀವ್ರತೆಯ ಕಾರಣಕ್ಕಾಗಿ ಬಂಡವಾಳಶಾಹಿಯು ತನ್ನಷ್ಟಕ್ಕೆ ತಾನು ಕುಸಿದು ಬೀಳುವುದಿಲ್ಲ. ರಾಜಕೀಯ ಪರ್ಯಾಯ ಇಲ್ಲದೇ ಇರುವ ಹಿನ್ನೆಲೆಯಲ್ಲಿ ಬಂಡವಾಳಶಾಹಿಯು ಈ ಬಿಕ್ಕಟ್ಟಿನಿಂದ ಹೊರ ಬರುವುದಕ್ಕಾಗಿ ಜನರ ಶೋಷಣೆಯನ್ನು ತೀವ್ರಗೊಳಿಸುತ್ತದೆ. ಈ ಬಿಕ್ಕಟ್ಟು ಹೀಗೆ ಮುಂದುವರಿಯುವುದರಿಂದ, ಮತ್ತೊಮ್ಮೆ ಜಾಗತಿಕ ಆರ್ಥಿಕ ಕುಸಿತ ಉಂಟಾಗುವ ಸಂಭವವಿದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಹಣಕಾಸು ಮತ್ತು ಬ್ಯಾಂಕಿಂಗ್ ವ್ಯವಸ್ಥೆ ಈಗಿರುವ ಆಪಾಯಕಾರಿ ಪರಿಸ್ಥಿತಿಯಿಂದ ಪೂರ್ಣ ಕುಸಿತದ ಸಾಧ್ಯತೆ ಹೆಚ್ಚಾಗಿದೆ.

## ಜಾಗತಿಕ ಯಜಮಾನಿಕೆಯನ್ನು ಕ್ರೋಢೀಕರಿಸುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಪ್ರಯತ್ನಗಳು

ಈ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿಯು ಮಿಲಿಟರಿ ಮಧ್ಯ ಪ್ರವೇಶ ಹಾಗೂ ಆಕ್ರಮಣಶಿಲತೆ ಈ ಎರಡರ ಮೂಲಕವೂ ಮತ್ತು, ದ್ವಿಪಕ್ಷೀಯ ಹಾಗೂ ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳ ಮೂಲಕ ತನ್ನ ಜಾಗತಿಕ ಯಜಮಾನಿಕೆಯನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತಿದ್ದು ಅದು ಅದಕ್ಕೆ ಆರ್ಥಿಕ ಲಾಭ ಹಾಗೂ ಪುನಶ್ಚೇತನಗಳಿಗೆ ಸಹಾಯ ಮಾಡುತ್ತದೆ.

## ವ್ಯಾಪಾರ ಒಪ್ಪಂದಗಳು

ಟ್ರಾನ್ಸ್–ಫೆಸಿಫಿಕ್ ಸಹಭಾಗಿತ್ವ ಒಪ್ಪಂದಕ್ಕೆ (ಟಿಪಿಪಿ) ಅಮೇರಿಕಾ ಸಹಿ ಮಾಡಿರುವುದನ್ನು ಈ ತಲೆಮಾರಿನ ದೊಡ್ಡ ವ್ಯಾಪಾರ ಒಪ್ಪಂದ ಎಂದು ಪ್ರಶಂಸಿಸಲಾಗಿದೆ. ಶಾಂತಸಾಗರದ ಅಂಚಿನ ಹನ್ನೆರಡು ದೇಶಗಳು ಅಮೇರಿಕಾದ ನೇತೃತ್ವದಲ್ಲಿವೆ. ಈ ಒಪ್ಪಂದವು ವಿಶ್ವ ಆರ್ಥಿಕತೆಯ ಶೇ.40ರಷ್ಟನ್ನು ಒಳಗೊಳ್ಳುತ್ತವೆ. 5 ವರ್ಷಗಳ ರಹಸ್ಯ ಸಮಾಲೋಚನೆಗಳ ನಂತರ ಈ ಒಪ್ಪಂದವು ಹೊರಬಿದ್ದಿದೆ. ಇದು ಅಮೇರಿಕಾ ಕಾರ್ಪೋರೇಟ್‌ಗಳ ಪರವಾದ ಒಪ್ಪಂದ. ಟಿಪಿಪಿ ವಲಯದಲ್ಲಿನ ಸಾರ್ವಭೌಮ ಸರ್ಕಾರಗಳ ದೇಶೀಯ ನೀತಿಗಳಿಂದ ತಮಗೆ ನಷ್ಟವಾದರೆ, ಆ ಸರಕಾರಗಳನ್ನು ಕೋರ್ಟಿಗೆ ಎಳೆಯುವ ಅಧಿಕಾರ ಈ ಒಪ್ಪಂದದ ಪ್ರಕಾರ ಅಮೇರಿಕನ್ ಕಾರ್ಪೋರೇಟುಗಳಿಗೆ ಇರುತ್ತದೆ. ಈ ಒಪ್ಪಂದದಲ್ಲಿರುವ ಇತರ ಹನ್ನೊಂದು ದೇಶಗಳ ಸಾರ್ವಭೌಮತ್ವದ ಮೇಲೆ ನಡೆಯಲಿರುವ ಅತಿಕ್ರಮಣವು ಇದರಿಂದ ಸ್ಪಷ್ಟವಾಗುತ್ತದೆ. ಅಮೇರಿಕಾದ ಕಾರ್ಪೋರೇಟ್‌ಗಳ ಲಾಭಗಳಿಗೆ ಧಕ್ಕೆ ತರುವ – ರಾಷ್ಟ್ರೀಯ ಸರ್ಕಾರದ ನಿಯಮಗಳು, ಕಾನೂನುಗಳು, ಕ್ರಮಗಳು ಮತ್ತು ನ್ಯಾಯಾಂಗದ ತೀರ್ಪುಗಳು – ಹೀಗೆ ಎಲ್ಲಾ ವಿಷಯಗಳ ಬಗೆಗಿನ ವಿವಾದಗಳಲ್ಲೂ, ಒಪ್ಪಂದ ಅಮೇರಿಕಾ ಕಾರ್ಪೋರೇಟ್‌ಗಳಿಗೆ ಆದ್ಯತೆಯನ್ನು ನೀಡುತ್ತದೆ.

ವಾಸ್ತವವಾಗಿ ಕುಸಿತದ ಅಂಚಿನಲ್ಲಿರುವ ಐರೋಪ್ಯ ಒಕ್ಕೂಟದೊಡನೆ ಒಪ್ಪಂದ ಮಾಡಿಕೊಳ್ಳುವ ಅದೇ ಬಗೆಯ ಪ್ರಯತ್ನವನ್ನೂ ಅಮೇರಿಕಾ ಮತ್ತೊಂದೆಡೆ ಮಾಡುತ್ತಿದೆ. ಜರ್ಮನಿ ಮತ್ತು ಫ್ರಾನ್ಸ್ ಎರಡು ಕೂಡಾ ಅಮೇರಿಕಾದ ಇಂತಹ ಒತ್ತಡಕ್ಕೆ ಪ್ರತಿರೋಧ ಒಡ್ಡುತ್ತಿವೆ. ವಾಸ್ತವವಾಗಿ ಅಮೇರಿಕಾವು ಟ್ರಾನ್ಸ್ ಅಟ್ಲಾಂಟಿಕ್ ಮುಕ್ತ ವ್ಯಾಪಾರ ವಲಯ ರಚಿಸಲು ಹಾಗೂ ಎಲ್ಲಾ ಸುಂಕ ಮತ್ತು ನಿಯಂತ್ರಕ ಕ್ರಮಗಳನ್ನು ತೊಡೆದು ಹಾಕುವುದನ್ನು ಈ ಒಪ್ಪಂದದ ಮೂಲಕ ಪಡೆಯುತ್ತದೆ. ಇದು ಯಶಸ್ವಿಯಾದಲ್ಲಿ, ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಭಾರೀ ಲಾಭ ಗಳಿಸುತ್ತವೆ. 2016ರ ಕೊನೆಯೊಳಗೆ ಸಾಧ್ಯವಾಗಬಹುದಾದ ತೀರ್ಮಾನಕ್ಕಾಗಿ ಮಾತುಕತೆಯನ್ನು ಜೀವಂತವಾಗಿಡಲು ಈಗ ಅಮೇರಿಕಾವು ಪ್ರಯತ್ನಿಸುತ್ತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅಮೇರಿಕಾ ಮತ್ತು ಐರೋಪ್ಯ ಒಕ್ಕೂಟ ಒಂದು ಕಡೆ, ಮತ್ತು ಇನ್ನೊಂದು ಕಡೆ ಐರೋಪ್ಯ ಒಕ್ಕೂಟದಲ್ಲಿರುವ ದೇಶಗಳ ಮಧ್ಯೆ ಸ್ಪಷ್ಟವಾದ ವೈರುಧ್ಯಗಳು ಮೇಲ್ನೋಟಕ್ಕೆ ಎದ್ದು ಕಾಣುತ್ತವೆ.

## ಅಂತರ–ಸಾಮ್ರಾಜ್ಯಶಾಹಿ ವೈರುದ್ಯಗಳು

ನಾವು ಗಮನಿಸಿದಂತೆ, ಸಾಮ್ರಾಜ್ಯಶಾಹಿಯ ಆಂತರಿಕ ವೈರುಧ್ಯಗಳನ್ನು ನವ–ಉದಾರವಾದಿ ಜಾಗತೀಕರಣದ ಅಡಿಯಲ್ಲಿ ಕಾಣದಂತೆ ಮಾಡಲಾಗಿದ್ದರೂ ಅವು ಅನೇಕ ರೀತಿಯಲ್ಲಿ ಮೇಲೆದ್ದು ಬರುತ್ತಿರುವುದು ಕಂಡು ಬಂದಿದೆ. ಇದು ಮುಂದುವರಿಯುತ್ತಿರುವ ಬಿಕ್ಕಟ್ಟಿನ ಪರಿಣಾಮವಾಗಿದೆ. ನಾವು ನಮ್ಮ 20ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ಈ ರೀತಿ ಹೇಳಿದ್ದೇವೆ :

> *"ಐ.ಎಫ್.ಸಿ.ಯ ಈ ಯಜಮಾನಿಕೆಯು ಅಧಿಕ ಪ್ರಮಾಣದಲ್ಲಿದ್ದಾಗ್ಯೂ, ಸಾಮ್ರಾಜ್ಯಶಾಹಿಗಳ ನಡುವಣ ವೈರುಧ್ಯಗಳ ಅಂತ್ಯವನ್ನು ಅದು ಸೂಚಿಸುವುದಿಲ್ಲ. ಬಂಡವಾಳಶಾಹಿಯ ಅಸಮಾನ ಅಭಿವೃದ್ಧಿಯ ಮೂಲಭೂತ ನಿಯಮದ ಪ್ರಕಾರವೇ ಇವು ಕೇವಲ ಈಗಿರುವುದಷ್ಟೇ ಅಲ್ಲ. ಭವಿಷ್ಯದಲ್ಲಿಯೂ ಅವು ಖಂಡಿತ ತೀವ್ರಗೊಳ್ಳುತ್ತವೆ. ಬಂಡವಾಳಶಾಹಿ ಕೇಂದ್ರಗಳ ನಡುವೆ ಅವುಗಳ ಭವಿಷ್ಯದ ಪರಸ್ಪರ ಬಲಾಬಲವನ್ನು ಅವಲಂಬಿಸಿ, ಇಂದಿನ ಹಿತಾಸಕ್ತಿಗಳಲ್ಲಿನ ಭಿನ್ನಾಭಿಪ್ರಾಯಕ್ಕೆ ಇದು ಕಾರಣವಾಗುತ್ತದೆ. ಅದು ಇಂದು ವಿಶ್ವದ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವ ಹಿತಾಸಕ್ತಿಗಳಲ್ಲಿನ ಭಿನ್ನಾಭಿಪ್ರಾಯಗಳಲ್ಲಿ ಅಥವಾ ವಿಶ್ವದ ವ್ಯವಸ್ಥೆಯ ಮರು–ಸ್ಥಾಪನೆಯನ್ನು ಅರಸುತ್ತಿರುವಲ್ಲಿ (ಅಂದರೆ ನಿರ್ದಿಷ್ಟ ಕಾರ್ಯ ಕ್ಷೇತ್ರಗಳಲ್ಲಿ ಪ್ರಭಾವಿ ವಲಯಗಳ ಹೊಸ ಮರು–ವಿಭಜನೆ ಮಾಡುವಲ್ಲಿ) ಮತ್ತೆ ಮತ್ತೆ ಪ್ರತಿಫಲಿಸುತ್ತದೆ. ಇದು ಭವಿಷ್ಯದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳ ಮಧ್ಯೆ ಕರೆನ್ಸಿ ಯುದ್ಧದ ರೂಪದಲ್ಲೂ ಪ್ರಕಟವಾಗಬಹುದು."*

"ಅಂತರ–ಸಾಮ್ರಾಜ್ಯಶಾಹಿ ವೈರುಧ್ಯಗಳು ತಮ್ಮ ವಿವಿಧ ರೂಪಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಪ್ರಕಟಗೊಳ್ಳುತ್ತವೆ. ಗರಿಷ್ಠ ಲಾಭಕ್ಕಾಗಿ ಜಾಗತಿಕ ಶೋಷಣೆಯನ್ನು ತೀವ್ರಗೊಳಿಸುವುದಕ್ಕಾಗಿ ಅವು ಪ್ರಸಕ್ತ ಅವಧಿಯಲ್ಲಿ ಮರೆಮಾಚಲ್ಪಟ್ಟಿವೆ." ಎಂದು ನಾವು ತೀರ್ಮಾನಿಸಿದ್ದೇವೆ.

21ನೇ ಮಹಾಧಿವೇಶನದ ಸಂದರ್ಭದಲ್ಲಿ ಗಮನಿಸಿದ ಸಾಮ್ರಾಜ್ಯಶಾಹಿಗಳ ಶಿಬಿರದಲ್ಲಿನ ಐಕ್ಯತೆಯಲ್ಲಿ ಈಗ ಬಿರುಕಿನ ಲಕ್ಷಣಗಳು ಕಂಡು ಬರುತ್ತಿದೆ.

## ಬ್ರೆಕ್ಸಿಟ್

ಐರೋಪ್ಯ ಒಕ್ಕೂಟವು ಅನುಭವಿಸುತ್ತಿರುವ ತೀವ್ರ ಒತ್ತಡಗಳಲ್ಲಿ ಈ ವೈರುಧ್ಯಗಳು ಕಂಡು ಬರುತ್ತಿವೆ. ಯು.ಕೆ.(ಬ್ರಿಟನ್)ಯಲ್ಲಿ ಬ್ರೆಕ್ಸಿಟ್‌ನ ಪ್ರಚಾರ ಹಾಗೂ ಅದರ ಅಂತಿಮ ಪರಿಣಾಮಗಳು ಈ ದಿಕ್ಕಿನ ಸೂಚನೆಯಾಗಿವೆ. ಬ್ರಿಟನ್ನಿನ ಶೇ.52ರಷ್ಟು ಜನರು ಐರೋಪ್ಯ ಒಕ್ಕೂಟದ ವಿರುದ್ಧ ಮತ

ಚಲಾಯಿಸಿದ್ದಾರೆ. ಜಾಗತಿಕ ಹಣಕಾಸು ಮತ್ತು ಬಹುರಾಷ್ಟ್ರೀಯ ಹಣಕಾಸು ಸಂಸ್ಥೆಗಳ ತೀವ್ರ ಒತ್ತಡಗಳ ನಡುವೆಯೂ ಇದು ನಡೆದಿದೆ. ಇದಲ್ಲದೇ ಅಮೇರಿಕಾದ ಅಧ್ಯಕ್ಷ ಒಬಾಮ ಅವರು ನೇರವಾಗಿ ಐರೋಪ್ಯ ಒಕ್ಕೂಟದಿಂದ ಬ್ರಿಟನ್ನಿನ ನಿರ್ಗಮನದ ವಿರುದ್ಧ ಪ್ರಚಾರ ಮಾಡಿದ್ದಾರೆ. ಬ್ರಿಟಿಷ್ ರಾಷ್ಟ್ರೀಯ ಸಾರ್ವಭೌಮತ್ವದ ಮೇಲೆ ಸವಾರಿ ಮಾಡುವ ಸೂಪರ್ ಪ್ರಭುತ್ವವಾಗಿ ಐರೋಪ್ಯ ಒಕ್ಕೂಟವನ್ನು ಬ್ರಿಟನ್ನಿನ ಬಹುತೇಕ ಜನತೆ, ಅದರಲ್ಲೂ ಪ್ರಮುಖವಾಗಿ ಬಡವರು ಪರಿಭಾವಿಸಿದ್ದಾರೆ. ಮಿತವ್ಯಯದ ನೀತಿಗಳು ಮತ್ತು ಬೆಳೆಯುತ್ತಿರುವ ಅಸಮಾನತೆಯ ಜೊತೆಗೆ ಅಧಿಕಾರ, ಸಂಪತ್ತು ಮತ್ತು ಸೌಲಭ್ಯಗಳನ್ನು ಕೆಲವೇ ಶ್ರೀಮಂತರು ಅನುಭವಿಸುತ್ತಿರುವುದರ ವಿರುದ್ಧವಾಗಿರುವುದರ ಪ್ರತಿಫಲನವೇ ಬ್ರೆಕ್ಸಿಟ್ ಫಲಿತಾಂಶದಲ್ಲಿ ಆಗಿರುವುದು.

ಸಾಂಪ್ರದಾಯಿಕ ಉದ್ಯೋಗಾವಕಾಶಗಳ ನಷ್ಟದ ಹಿನ್ನೆಲೆಯಲ್ಲಿ ಆಂಗ್ಲ ಕಾರ್ಮಿಕ ವರ್ಗ ತನ್ನ ಪ್ರತಿರೋಧವನ್ನೂ ಹೀಗೆ ಪ್ರಕಟಿಸಿದೆ. ಕಮ್ಯೂನಿಸ್ಟ್ ಮತ್ತು ಎಡಪಕ್ಷಗಳು ಐರೋಪ್ಯ ಒಕ್ಕೂಟದಿಂದ ಹೊರ ಬರಲು ಪ್ರಚಾರ ನಡೆಸಿದವು. ಈ ಪ್ರಚಾರದಲ್ಲಿ ಕಾರ್ಮಿಕ ವರ್ಗವು ಕಷ್ಟಪಟ್ಟು ಗಳಿಸಿದ ಹಕ್ಕುಗಳು ಮತ್ತು ಅವರ ಜೀವನದ ಮೇಲೆ ಆಗುವ ವಿನಾಶಕಾರಿ ಪರಿಣಾಮಗಳನ್ನು ಎತ್ತಿ ತೋರಿಸಿದವು. ಬಲಪಂಥೀಯ ಶಕ್ತಿಗಳು ಕೂಡಾ ಐರೋಪ್ಯ ಒಕ್ಕೂಟದಿಂದ  ಹೊರಬರುವುದನ್ನು ಬೆಂಬಲಿಸಿ ಮತ ಚಲಾಯಿಸಿದವು. ಆದರೆ ಅವರು ನೀಡಿದ ಕಾರಣಗಳೆಂದರೆ, ಜನಾಂಗೀಯ ದ್ವೇಷ, ವಲಸೆಗಾರರಿಂದ ಉದ್ಯೋಗದ ನಷ್ಟ, ಬ್ರಿಟೀಷ್ ಸಂಸ್ಕೃತಿಯ ಮೇಲೆ ವಲಸೆಗಾರರ ದಾಳಿ.

ಅಂತರರಾಷ್ಟ್ರೀಯ ಹಣಕಾಸು ಮತ್ತು ಐರೋಪ್ಯ ಒಕ್ಕೂಟದ ಪ್ರಚಾರ ಕ್ರಮಗಳ ಮಧ್ಯೆಯು ಬ್ರೆಕ್ಸಿಟ್ ತೀರ್ಮಾನದ ನಂತರದಲ್ಲಿ, ನಿರುದ್ಯೋಗದ ದರದಲ್ಲಿ ಗಣನೀಯವಾದ ಏರಿಕೆ ಕಂಡು ಬರಲಿಲ್ಲ. ಅದು ಶೇಕಡಾ 4.9ರಷ್ಟಿದ್ದು ಕಡಿಮೆಯೂ ಆಗಲಿಲ್ಲ.

ಐರೋಪ್ಯ ಒಕ್ಕೂಟದ ಜಿಡಿಪಿಯ ಶೇಕಡಾ 15ಕ್ಕೂ ಹೆಚ್ಚು, ಹಣಕಾಸಿನ ಸೇವೆ ಚಟುವಟಿಕೆಗಳ ಶೇಕಡಾ 25ರಷ್ಟು ಹಾಗೂ ಶೇರು ಮಾರುಕಟ್ಟೆಯ ಬಂಡವಾಳದ ಶೇಕಡಾ 30ರಷ್ಟು ಪಾಲು ಬ್ರಿಟನ್ನಿನದ್ದು ಇದೆ. ಬ್ರೆಕ್ಸಿಟ್ ಫಲಿತಾಂಶದ ಫಲವಾಗಿ ಐರೋಪ್ಯ ಒಕ್ಕೂಟದ  ಜೊತೆಗೆ ದ್ವಿಪಕ್ಷೀಯ ಒಪ್ಪಂದಗಳ ಮೂಲಕ ಸಂಬಂಧದಲ್ಲಿ ಬದಲಾವಣೆಗಳನ್ನು ತರುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ. ಬ್ರಿಟನ್ನಿನ ಪೌಂಡ್‌ನ ಮೌಲ್ಯದ ಏರುಪೇರು ಈಗ ಹೆಚ್ಚು ಕಡಿಮೆ ಸ್ಥಿರಗೊಂಡಿದೆ. ಆದರೆ ಆರ್ಥಿಕ ಸ್ಥಿರತೆ ಇನ್ನೂ ಮರೀಚಿಕೆಯಾಗಿದೆ. ಅನೇಕ ಸಮಸ್ಯೆಗಳು ಮತ್ತು ಅಸ್ಥಿರಗೊಳಿಸುವ ಅಂಶಗಳು ಮಾತುಕತೆಯ ಹಂತದಲ್ಲಿ ಹೊರಬರಲಿದ್ದು ಕೆಲವು ತಿಂಗಳುಗಳವರೆಗೆ ಮುಂದುವರೆಯಲಿವೆ. ಜಾಗತಿಕ ಆರ್ಥಿಕತೆ ಮತ್ತು ಯುರೋಪಿನ ಆರ್ಥಿಕತೆಯಲ್ಲಿ, ಯುರೋಪಿನ ಪ್ರಮುಖ ಶಕ್ತಿರಾಷ್ಟ್ರಗಳ  ಮತ್ತು ಬ್ರಿಟನ್ನಿನ ಪಾಲಿಗಾಗಿ ನಡೆಯುವ ತಿಕ್ಕಾಟಗಳು ಮುಂದುವರೆಯುತ್ತವೆ.

ಸ್ವಾಭಾವಿಕವಾಗಿ ಬ್ರೆಕ್ಸಿಟ್ ಮತ ಬ್ರಿಟನಿನಲ್ಲಿ ರಾಜಕೀಯ ಪ್ರಕ್ಷುಬ್ಧತೆಯನ್ನು ಸೃಷ್ಟಿಸಿದೆ. ಇದರಿಂದ ಪ್ರಧಾನಮಂತ್ರಿ ಡೇವಿಡ್ ಕ್ಯಾಮರೂನ್ ರಾಜೀನಾಮೆ ನೀಡಬೇಕಾಯಿತು ಹಾಗೂ ಹೊಸ ಕನ್ಸರ್ವೇಟಿವ್ ಪ್ರಧಾನಮಂತ್ರಿಯಾಗಿ ಥೆರೆಸಾ ಮೇ ಪ್ರಮಾಣವಚನ ಸ್ವೀಕರಿಸಿದರು. ಲೇಬರ್ ಪಕ್ಷದ ನಾಯಕ ಜೆರೆಮಿ ಕಾರ್ಬಿನ್ ಅವರ ನಾಯಕತ್ವ, ಟೋನಿ ಬ್ಲೇರ್‌ನ ನಾಯಕತ್ವದ 'ಹೊಸ ಲೇಬರ್' ಪಂಥದ ಪ್ರಬಲ ಅನುಯಾಯಿಗಳ ತೀವ್ರ ದಾಳಿಗೆ ಗುರಿಯಾಗಿದ್ದು, ಲೇಬರ್ ಪಕ್ಷ ಸಹ ಬಿಕ್ಕಟ್ಟಿನಲ್ಲಿದೆ.

## ಬಲಪಂಥದತ್ತ ರಾಜಕೀಯ ತಿರುವು

ಮುಂದುವರಿದ ಆರ್ಥಿಕ ಬಿಕ್ಕಟ್ಟು ಅನೇಕ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿನ ರಾಜಕೀಯದ ಮೇಲೆ ಪ್ರಭಾವ ಬೀರಿ ಬಲಪಂಥೀಯ ರಾಜಕೀಯದ ಉದಯಕ್ಕೆ ಎಡೆ ಮಾಡಿಕೊಟ್ಟಿದೆ.

ನವಂಬರ್‌ನಲ್ಲಿ ನಡೆಯಲಿರುವ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಟ್ರಂಪ್ ಹಾಗೂ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿ ಹಿಲರಿ ಕ್ಲಿಂಟನ್ ಹೊರಹೊಮ್ಮಿದ್ದಾರೆ. ಇತ್ತೀಚಿನ ಅಮೆರಿಕಾದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಪಕ್ಷದ ನೆಲೆಯ ಹೊರಗಡೆಯ ವ್ಯಕ್ತಿಯೊಬ್ಬ ಪಕ್ಷದ ಉಮೇದುವಾರನಾಗಿ ಆಯ್ಕೆಯಾಗಿರುವವರಲ್ಲಿ ಡೊನಾಲ್ಡ್ ಟ್ರಂಪ್ ಮೊದಲನೆಯವರು. ಆರ್ಥಿಕ ಮುಗ್ಗಟ್ಟಿನ ಪರಿಣಾಮದಿಂದಾಗಿ ಉಂಟಾಗಿರುವ ವ್ಯಾಪಕ ಅತೃಪ್ತಿಯ ಬೆನ್ನ ಏರಿ, ದೊಡ್ಡ ಉದ್ದಿಮೆದಾರರ ಹಿತಾಸಕ್ತಿಯ ಪರವಾಗಿ ಮತ್ತು ಜನಾಂಗೀಯ, ಧಾರ್ಮಿಕ ಹಾಗೂ ವರ್ಣಭೇದ ಸಮಸ್ಯೆಗಳ ಆಧಾರದಲ್ಲಿ ಜನರನ್ನು ವಿಭಜಿಸುವ ಕಟುವಾದ ಅಲ್ಪಸಂಖ್ಯಾತ ವಿರೋಧಿ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ಡೆಮಾಕ್ರಾಟಿಕ್ ಪಕ್ಷವು ತೀವ್ರ ಸೆಣಸಾಟ ಕಂಡಿತು. ಸ್ವಘೋಷಿತ ಪ್ರಜಾಸತ್ತಾತ್ಮಕ ಸಮಾಜವಾದಿ ಬರ್ನಿ ಸ್ಯಾಂಡರ್ಸ್ ಮುಕ್ತ ವ್ಯಾಪಾರ ಒಪ್ಪಂದಗಳು ಮತ್ತು ಪಶ್ಚಿಮ ಏಶಿಯಾದಲ್ಲಿನ ಯುದ್ಧದಂತಹ ವಿಷಯದಲ್ಲಿ ತೀವ್ರಗಾಮಿ ನಿಲುವುಗಳನ್ನು ತೆಗೆದುಕೊಂಡರೆ, ಅತ್ತ ಹಿಲರಿ ಕ್ಲಿಂಟನ್ ದೊಡ್ಡ ಉದ್ದಿಮೆದಾರರಿಗೆ ಹತ್ತಿರದವರಾಗಿ ಆಕ್ರಮಣಕಾರಿ ವಿದೇಶಾಂಗ ನೀತಿಯ ಪರವಹಿಸಿದರು. ಆದರೆ ಸ್ಯಾಂಡರ್ಸ್ ಪ್ರಚಾರ ವೈಖರಿಯು ಪಡೆದ ವ್ಯಾಪಕ ಬೆಂಬಲದಿಂದಾಗಿ ಹಿಲರಿ ತನ್ನ ನಿಲುವುಗಳನ್ನು ಅನಿವಾರ್ಯವಾಗಿ ಬದಲಾಯಿಸಿಕೊಳ್ಳಲೇಬೇಕಾಯಿತು.

ಅಮೆರಿಕಾದ ಜನರಲ್ಲಿ ಮಡುಗಟ್ಟಿದ್ದ ವ್ಯಾಪಕ ಕ್ಷೋಭೆಯ ಪ್ರತೀಕವಾಗಿ ಡೊನಾಲ್ಡ್ ಟ್ರಂಪ್ ಮೇಲಕ್ಕೆ ಬಂದಿದ್ದಾರೆ. 1960ರ ನಾಗರಿಕ ಹಕ್ಕುಗಳ ಚಳುವಳಿಯ ನಂತರದಲ್ಲಿ ಅಮೆರಿಕಾ ಕಂಡ ಅತ್ಯಂತ ಕ್ರೂರ ವರ್ಣಭೇದ ದಾಳಿಗಳ ಹಿನ್ನೆಲೆಯಲ್ಲಿ ಅಲ್ಲಿ ಚುನಾವಣಾ ಪ್ರಕ್ರಿಯೆಗಳು ನಡೆಯುತ್ತಿವೆ. ಕರಿಯರ ಮೇಲಿನ ಇಂತಹ ದಾಳಿಗಳಲ್ಲಿ ಆರೋಪ ಹೊತ್ತಿರುವ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಗಳನ್ನು ಶಿಕ್ಷೆಗೆ ಒಳಪಡಿಸುತ್ತಿಲ್ಲ. ಇದು ಅಲ್ಲಿಯ ಆಫ್ರೋ–ಅಮೆರಿಕನ್ನರಲ್ಲಿ ತೀವ್ರ ಅತೃಪ್ತಿಗೆ ಕಾರಣವಾಗಿದೆ. "ಕರಿಯರ ಜೀವಗಳೂ ಮುಖ್ಯ"(ಬ್ಲ್ಯಾಕ್ ಲೈವ್ಸ್ ಮ್ಯಾಟರ್) ಎಂಬ ಚಳುವಳಿ ಹೆಚ್ಚಿನ ಬೆಂಬಲ ಗಳಿಸುತ್ತಿದೆ.

2014ರ ಯೂರೋಪಿನ ಸಂಸತ್ತಿನ ಚುನಾವಣೆಗಳಲ್ಲಿ ಬಲಪಂಥೀಯ ಪಕ್ಷಗಳು ನಾಲ್ಕನೇ ಒಂದು ಭಾಗದ ಸ್ಥಾನಗಳನ್ನು ಪಡೆದಾಗಲೇ ಯೂರೋಪ್ ಬಲಪಂಥದ ಕಡೆ ವಾಲಿದ್ದು ಸ್ಪಷ್ಟವಾಗಿದೆ. ಯೂರೋಪಿನ ಅನೇಕ ದೇಶಗಳಲ್ಲಿ, ಚುನಾವಣೆಗಳಲ್ಲಿ ಎಡ ಮತ್ತು ಬಲಗಳ ನಡುವೆ ತೀವ್ರ ಸ್ಪರ್ಧೆಯುಂಟಾಗಿ ಬಲಪಂಥೀಯರು ಗೆಲ್ಲದಿದ್ದಾಗ್ಯೂ ಮುನ್ನಡೆ ಸಾಧಿಸಿದ್ದಾರೆ. 2015ರ ಸ್ಪೈನ್‌ನ ಚುನಾವಣೆಯಲ್ಲಿ ಅತಂತ್ರ ಸ್ಥಿತಿ ಉಂಟಾಯಿತು. ನಂತರದ 2016ರ ಚುನಾವಣೆಯಲ್ಲಿ ಯಾರೊಬ್ಬರೂ ಸ್ಪಷ್ಟವಾಗಿ ಗೆಲ್ಲಲಾಗದಿದ್ದರೂ ಬಲಪಂಥೀಯ ಕನ್ಸರ್ವೇಟಿವ್ ಪಕ್ಷ 14 ಸ್ಥಾನಗಳನ್ನು ಹೆಚ್ಚು ಪಡೆದು ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕಟುವಾದ 'ಮಿತವ್ಯಯದ ಕ್ರಮಗಳ' (ಆಸ್ಟೆರಿಟಿ ಮೆಝರ್ಸ್) ಜಾರಿಯ ವಿರುದ್ಧ ಕಾರ್ಮಿಕ ವರ್ಗದ ಪ್ರತಿರೋಧದಿಂದ ಹೊರಹೊಮ್ಮಿದ ಹೊಸ ಒಕ್ಕೂಟ 'ಪೊಡೆಮಸ್' ಪ್ರತಿಶತ ಮೂರರಷ್ಟು ಮತಗಳನ್ನು ಕಳೆದುಕೊಂಡರೂ ಮೊದಲಿದ್ದ ಸ್ಥಾನಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ನೆದರ್‌ಲ್ಯಾಂಡಿನಲ್ಲಿ ಕನ್ಸರ್ವೇಟಿವ್ ಪಕ್ಷವು ಮತ್ತೆ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಫ್ರಾನ್ಸಿನಲ್ಲಿ, ಬೆಳೆಯುತ್ತಿರುವ ಜನಾಂಗೀಯ ಕ್ಷೋಭೆ ಮತ್ತು ಉದ್ವಿಗ್ನತೆಗಳಿಂದಾಗಿ ಬಲಪಂಥೀಯ ಶಕ್ತಿಗಳು ಜಯಗಳಿಸುತ್ತಿವೆ. ಇತ್ತೀಚಿನ 'ಬುರ್ಕಿನಿ ಬ್ಯಾನ್' ವಿವಾದವು ಜನಾಂಗೀಯ–ಧಾರ್ಮಿಕ ಒಡಕನ್ನು ಇನ್ನೂ ಆಳವಾಗಿಸಿದೆ. ಪೋಲ್ಯಾಂಡ್‌ನಂತಹ ದೇಶಗಳಲ್ಲಿ ಬಲಪಂಥೀಯರು ಚುನಾವಣೆಗಳಲ್ಲಿ ಮೇಲುಗೈ ಪಡೆಯುತ್ತಿದ್ದಾರೆ.

ಜರ್ಮನಿಯು ಬಲಪಂಥೀಯ ರಾಜಕೀಯದತ್ತ ವಾಲುತ್ತಿದೆ. ಜರ್ಮನಿಯ ರಾಜ್ಯಗಳೊಂದರ ಇತ್ತೀಚಿನ ಚುನಾವಣೆಯಲ್ಲಿ ಸೋಶಿಯಲಿಸ್ಟ್ ಡೆಮಾಕ್ರಾಟ್ ನಂತರ ಬಲಪಂಥೀಯ ಜನ–ಮರುಳು

‘ಆಲ್ಟರ್ನೇಟಿವ್ ಫಾರ್ ಜರ್ಮನಿ’(ಎ.ಎಫ್.ಡಿ–ಜರ್ಮನಿಗೊಂದು ಪರ್ಯಾಯ) ಎರಡನೇ ಸ್ಥಾನ ಪಡೆದಿದೆ. ಎಂಜೆಲಾ ಮರ್ಕೆಲ್ ಅವರ ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಯೂನಿಯನ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಈ ವಿಜಯದ ನಂತರ ಮೂರು ರಾಜ್ಯಗಳಲ್ಲಿ ಎ.ಎಫ್.ಡಿ ಜಯ ಸಾಧಿಸಿದೆ. ಈಗ ಜರ್ಮನಿಯ 16 ರಾಜ್ಯಗಳ ಸಂಸತ್ತಿನಲ್ಲಿ 9 ರಾಜ್ಯಗಳಲ್ಲಿ ಎ.ಎಫ್.ಡಿ ಅಸ್ತಿತ್ವ ಹೊಂದಿದೆ. ಮುಂದಿನ ಒಕ್ಕೂಟ ಚುನಾವಣೆಗಳಲ್ಲಿ ಅದು ಉತ್ತಮ ಸಾಧನೆ ಮಾಡುವ ಹಾದಿಯಲ್ಲಿದೆ.

## ಪ್ರತಿರೋಧದ ಅಲೆಗಳು

ಪಾರಂಪರಿಕ ಸೋಶಿಯಲ್ ಡೆಮಾಕ್ರಾಟ್ಸ್ ಮತ್ತು ಕನ್ಸರ್ವೇಟಿವ್ಸ್ ಎರಡೂ ಅದೇ ನವ–ಉದಾರೀಕರಣ ನೀತಿಗಳನ್ನು ಅನುಸರಿಸುತ್ತಿರುವುದರಿಂದ, ಜನಸಮುದಾಯವು ಈ ರೀತಿಯ ಪಕ್ಷಗಳಿಗೆ ಒಂದು ಕಾರ್ಯಸಾಧ್ಯವಾದ ಪರ್ಯಾಯಕ್ಕಾಗಿ ಹುಡುಕುತ್ತಿದ್ದಾರೆ. ಆ ಖಂಡದಲ್ಲಿ ಹೊಸ ಶಕ್ತಿಗಳು ಮತ್ತು ಪಕ್ಷಗಳು, ಎಡ ಮತ್ತು ಬಲ, ಜನ್ಮತಾಳುತ್ತಿವೆ. ಉದಾಹರಣೆಗೆ, ನೆದರ್‌ಲ್ಯಾಂಡಿನಲ್ಲಿ ಪಾರಂಪರಿಕ ಸೋಶಿಯಲ್ ಡೆಮಾಕ್ರಾಟ್ಸ್ ಇತ್ತೀಚಿನ ಚುನಾವಣೆಗಳಲ್ಲಿ ಆರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದರೆ ಹೊಸತಾಗಿ ಹುಟ್ಟಿಕೊಂಡ ಸೊಶಿಯಲಿಸ್ಟ್ಸ್ ಮತ್ತು ಸೋಶಿಯಲ್ ಲಿಬರಲ್ಸ್ ಮೇಲುಗೈ ಪಡೆದಿವೆ. ‘ದಿ 5 ಸ್ಟಾರ್’ ಚಳುವಳಿಯು ಇಟಲಿಯಲ್ಲಿ ಮೇಲುಗೈ ಪಡೆದು ರೋಮ್‌ನ ಮೇಯರ್ ಚುನಾವಣೆಯಲ್ಲಿ ಗೆಲುವು ಸಾಧಿಸಿದೆ. ಯೂರೋಪಿನ ರಾಜಕೀಯದಲ್ಲಿ ತೀವ್ರ ಮಂಥನ ನಡೆಯುತ್ತಿದೆ. ಫ್ರಾನ್ಸ್‌ನಲ್ಲಿ ಇದರ ಪ್ರತಿಫಲನ ಕಾಣಬಹುದು. ಅಲ್ಲಿ ಅನೇಕ ಪ್ರಾಂತಗಳಲ್ಲಿ ಮೇಲುಗೈ ಪಡೆಯುತ್ತಿದ್ದ ಜನಮರುಳು ತೀವ್ರ ಬಲಪಂಥೀಯ ಮೇರಿ ಪೆ ಲೆನ್ ಅವರ ಪಕ್ಷವನ್ನು ಮತದಾರರು ಪ್ರಜ್ಞಾಪೂರ್ವಕವಾಗಿ ಸೋಲಿಸಿದರು. ನವ ಉದಾರವಾದಿ ದಾಳಿಗಳ ವಿರುದ್ಧ ಗಟ್ಟಿಯಾಗಿ ನಿಲ್ಲುವ ಹಾಗೂ ತಮ್ಮ ಬದುಕನ್ನು ರಕ್ಷಿಸಬಲ್ಲ ನಿಜವಾದ ಪಕ್ಷಗಳು ಮತ್ತು ಶಕ್ತಿಗಳತ್ತ ಜನ ನೋಡುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕೆಲವು ಹೊಸ ಎಡ ಗುಂಪುಗಳು ಮತ್ತು ವೇದಿಕೆಗಳು ತಲೆ ಎತ್ತುತ್ತಿವೆ.

## ಟರ್ಕಿಯಲ್ಲಿ ಕ್ಷಿಪ್ರಕ್ರಾಂತಿಗೆ ಸೋಲು

ಟರ್ಕಿಯ ಅಧ್ಯಕ್ಷ ಎರ್ಡೋಗನ್ ಮತ್ತವರ ಸರ್ಕಾರದ ವಿರುದ್ಧ ನಡೆದ ಜುಲೈ 15, 2016ರ ಕ್ಷಿಪ್ರಕ್ರಾಂತಿಯ ಸೋಲು ದೇಶದ ಮೇಲಿನ ಎರ್ಡೋಗನ್ ಅವರ ಹಿಡಿತವನ್ನು ಇನ್ನೂ ಗಟ್ಟಿಗೊಳಿಸಿದೆ. ಆ ಕ್ಷಿಪ್ರಕ್ರಾಂತಿಯಲ್ಲಿ ಭಾಗವಹಿಸಿದ 200ಕ್ಕೂ ಹೆಚ್ಚಿನ ಜನರು ಸರ್ಕಾರದ ದಾಳಿಯಲ್ಲಿ ಹತರಾಗಿದ್ದಾರೆ. ನ್ಯಾಯಾಂಗ, ಸಶಸ್ತ್ರ ಪಡೆಗಳು, ಮಾಧ್ಯಮ ಹಾಗೂ ಇನ್ನಿತರ ಜನವಿಭಾಗಗಳನ್ನೂ ಒಳಗೊಂಡಂತೆ ಸಾವಿರಾರು ಜನರನ್ನು ಬಂಧಿಸಲಾಗಿದೆ.

ತನ್ನ ದೇಶ ಹಾಗೂ ಸೇನೆಯ ಮೇಲಿನ ಕಪಿಮುಷ್ಠಿಯನ್ನು ಬಲಪಡಿಸಿಕೊಳ್ಳುವ ಜತೆಯಲ್ಲೇ ಎರ್ಡೋಗನ್ ಆ ಪ್ರದೇಶದಲ್ಲಿ ಟರ್ಕಿಯ ಹಿತಾಸಕ್ತಿಯನ್ನು ಮುಂದುವರೆಸುವ ದಿಕ್ಕಿನಲ್ಲಿ ರಷ್ಯಾ ಮತ್ತು ಅಮೆರಿಕಾ ಇಬ್ಬರ ಜತೆಯೂ ಸಂಬಂಧಗಳನ್ನು ಮುಂದುವರಿಸಿದ್ದಾರೆ. ಟರ್ಕಿಯು ನ್ಯಾಟೊದಿಂದ ಹೊರಬರಬೇಕೆಂದು ರಷ್ಯಾ ಬಯಸಿದರೆ, ಅಮೆರಿಕಾವು ಸಿರಿಯಾದಲ್ಲಿನ ಟರ್ಕಿಯ ಸೇನಾ ಮಧ್ಯಪ್ರವೇಶಕ್ಕೆ ಸಮ್ಮತಿಸಿದೆ. ಮುಂದಿನ ದಿನಗಳಲ್ಲಿ ಇದು ಆ ಪ್ರದೇಶದಲ್ಲಿ ಹೇಗೆ ತಿರುವು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಕಾದು ನೋಡಬೇಕಿದೆ.

## ಅಮೆರಿಕಾದ ಸೇನಾ ತಂತ್ರಗಳು

ಜಗತ್ತಿನ ಮೇಲಿನ ತನ್ನ ಯಜಮಾನಿಕೆಯನ್ನು ಬಲಗೊಳಿಸಿಕೊಳ್ಳುವ ಯತ್ನದಲ್ಲಿ, ಅಮೆರಿಕಾವು ಪಶ್ಚಿಮ ಏಶಿಯಾದಲ್ಲಿನ ತನ್ನ ಮಿಲಿಟರಿ ಮಧ್ಯಪ್ರವೇಶಗಳಲ್ಲದೇ, ರಷ್ಯಾವನ್ನು ಎದುರಿಸಲು ಗಮನ

ಕೇಂದ್ರೀಕರಿಸಿದೆ ಹಾಗೂ ಚೀನಾವನ್ನು ಹದ್ದುಬಸ್ತಿನಲ್ಲಿಡುವ ತನ್ನ ಯುದ್ಧವ್ಯೂಹದ ಗುರಿಯನ್ನು ಬಲಪಡಿಸಿಕೊಳ್ಳುತ್ತಿದೆ.

## ಪೂರ್ವದತ್ತ ನ್ಯಾಟೋ ಮುನ್ನುಗ್ಗುತ್ತಿದೆ

ಬಾಲ್ಟಿಕ್ ದೇಶಗಳು ಮತ್ತು ಪೂರ್ವ ಪೋಲ್ಯಾಂಡಿನಲ್ಲಿ ನ್ಯಾಟೋ ಮಿಲಿಟರಿ ಪಡೆಗಳನ್ನು ಸಜ್ಜುಗೊಳಿಸಬೇಕೆಂದು, ಜುಲೈ 2016ರ ನ್ಯಾಟೋದ ವಾರ್ಸಾ ಶೃಂಗ ಸಭೆಯಲ್ಲಿ ಮೊಟ್ಟಮೊದಲ ಬಾರಿಗೆ ನಿರ್ಧರಿಸಲಾಗಿದೆ. ಸಹಜವಾಗಿ ಇದು ರಷ್ಯಾವನ್ನು ಕೆರಳಿಸಿದೆ ಮತ್ತು ಅದರ ಪರಿಣಾಮವಾಗಿ ಎರಡೂ ಕಡೆಯವರು ವಾಯುಪಡೆ ಮತ್ತು ನೌಕಾಪಡೆಗಳು ಗಸ್ತು ತಿರುಗುವುದನ್ನು ಹೆಚ್ಚಿಸಿದ್ದಾರೆ. ನ್ಯಾಟೋವು ರೊಮೇನಿಯಾದಲ್ಲಿ ಹೊಸ ಕ್ಷಿಪಣಿಜಾಲವನ್ನು ನೆಲೆಗೊಳಿಸಿದೆ ಹಾಗೂ ಮತ್ತೊಂದನ್ನು 2018ರ ವೇಳೆಗೆ ಪೋಲ್ಯಾಂಡಿನಲ್ಲಿ ನೆಲೆಗೊಳಿಸುವ ನಿರೀಕ್ಷೆ ಇದೆ. ಇದು, ಅಣ್ವಸ್ತ್ರ ಬಳಕೆಯ ಅಪಾಯವನ್ನು ತಡೆಯಲು ಉದ್ದೇಶಿಸಿದ 1987ರ ಮಧ್ಯಮ–ದೂರದ ಗುರಿಯ ಅಣ್ವಸ್ತ್ರ ಪಡೆಗಳ (ಇಂಟರ್ಮೀಡಿಯಟ್ ರೇಂಜ್ ನ್ಯೂಕ್ಲಿಯರ್ ಫೋರ್ಸಸ್) ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿದೆ. ಮೂರು ಬಾಲ್ಟಿಕ್ ದೇಶಗಳಾದ ಎಸ್ತೋನಿಯಾ, ಲಾತ್ವಿಯಾ ಮತ್ತು ಲಿಥ್ವೇನಿಯಾಗಳಲ್ಲಿ ನ್ಯಾಟೋವು ಸಮರ ಪಡೆಗಳನ್ನು ಸಜ್ಜುಗೊಳಿಸಿದೆ.

ಯುಕ್ರೇನಿನಲ್ಲಿ ಕುದಿಬಿಂದು ಸ್ಥಿತಿ ಮುಂದುವರಿದಿದೆ. ಯುಕ್ರೇನಿನ ಫ್ಯಾಸಿಸ್ಟ್ ಮಾದರಿ ಸರ್ಕಾರಕ್ಕೆ ಅಮೆರಿಕ ಸಂಪೂರ್ಣ ಬೆಂಬಲ ನೀಡಿದೆ ಮತ್ತು ಕ್ರಿಮಿಯಾ ರಷ್ಯಾಕ್ಕೆ ಸೇರಬೇಕೆಂಬ ಆಯ್ಕೆಯ ಸ್ವಾತಂತ್ರ್ಯದ ಬಗ್ಗೆ ಸುತಾರಾಂ ಒಪ್ಪುತ್ತಿಲ್ಲ.

## ಪಶ್ಚಿಮ ಏಶಿಯಾ ಮತ್ತು ಮಧ್ಯ ಪ್ರಾಚ್ಯ

ಅಮೆರಿಕಾ ತನ್ನ ಬಹುತೇಕ ಸೇನಾ ಪಡೆಗಳನ್ನು ಇರಾಕ್ ಮತ್ತು ಆಫ್ಘಾನಿಸ್ತಾನದಿಂದ ಹಿಂತೆಗೆದುಕೊಳ್ಳಲೇಬೇಕಾಯಿತು ಮತ್ತು ಸಿರಿಯಾದಲ್ಲಿ ನೇರವಾಗಿ ಮಧ್ಯಪ್ರವೇಶ ಮಾಡಲಾಗಲಿಲ್ಲವಾದರೂ, ಆ ಪ್ರದೇಶದಲ್ಲಿ ತನ್ನ ಆಕ್ರಮಣಕಾರಿ ಸಮರತಂತ್ರವನ್ನು ಮುಂದುವರಿಸಿದೆ. ನಾಲ್ಕು ವರ್ಷಗಳ ರಕ್ತಸಿಕ್ತ ಕದನದ ನಂತರ, ಅಮೆರಿಕಾ ಬೆಂಬಲಿತ ಸೌದಿ ಅರೇಬಿಯಾ ಮತ್ತು ಟರ್ಕಿಯಂತಹ ಸಿರಿಯಾದ ಅಸ್ಸಾದ್–ವಿರೋಧಿ ಶಕ್ತಿಗಳು ಅಸ್ಸಾದನನ್ನು ಅಧಿಕಾರದಿಂದ ಕಿತ್ತೆಸೆಯಲು ವಿಫಲವಾದವು. ಆದರೆ, ಈ ಪ್ರಕ್ರಿಯೆಯಲ್ಲಿ ಹುಟ್ಟಿಕೊಂಡ ಇಸ್ಲಾಮಿಕ್ ಸ್ಟೇಟ್(ಐಎಸ್) ಅರಾಜಕತೆಯನ್ನು ಸೃಷ್ಟಿಮಾಡಿತು. ಅಸ್ಸಾದ್‌ಗೆ ರಷ್ಯಾ ನೀಡಿದ ಬೆಂಬಲದಿಂದಾಗಿ ರಣರಂಗದಲ್ಲಿ ಸೇನೆಯ ಬಲಾಬಲದಲ್ಲಿ ವ್ಯತ್ಯಾಸವಾಯಿತು. ಇರಾನಿನ ಸಂಪೂರ್ಣ ಬೆಂಬಲ ಸಿಕ್ಕ ಮೇಲಂತೂ ಅಸ್ಸಾದ್‌ನ ಸ್ಥಿತಿ ಇನ್ನೂ ಉತ್ತಮಗೊಂಡಿತು. ಅಂತಿಮವಾಗಿ ಅಸ್ಸಾದನನ್ನು ಅಧಿಕಾರದಿಂದ ಕಿತ್ತೆಸೆಯುವ ತನ್ನ ಯತ್ನವನ್ನು ಅಮೆರಿಕಾವು ಕೈಬಿಡಬೇಕಾಯಿತು. ಈಗದು, ಐಎಸ್ ವಿರುದ್ಧ ಹೋರಾಡಲು ರಷ್ಯಾ ಜತೆ ಸಂಧಾನ ನಡೆಸಬೇಕಾದ ಬಲವಂತಕ್ಕೆ ಸಿಲುಕಿತು.

ಈ ಅವಧಿಯಲ್ಲಿನ ಅನೇಕ ವಿಷಯಗಳು, ಬಹು ಮುಖ್ಯವಾಗಿ ಯುಕ್ರೇನಿನ ಬೆಳವಣಿಗೆಗಳು ರಷ್ಯಾ ಮತ್ತು ಅಮೆರಿಕಾ–ನ್ಯಾಟೋ ನಡುವೆ ತೀಕ್ಷ್ಣ ಕ್ಷೋಭೆಗೆ ಮತ್ತು ತಿಕ್ಕಾಟಗಳಿಗೆ ಕಾರಣವಾದವು.

ಆ ಪ್ರದೇಶದ ಮೇಲಿನ ತನ್ನ ನಿಯಂತ್ರಣ ಬಲಪಡಿಸುವುದನ್ನು ಅಮೆರಿಕಾ–ಇಸ್ರೇಲ್ ಕೂಟ ಮುಂದುವರಿಸಿದೆ. ಪ್ಯಾಲೆಸ್ತೀನರು ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಜಲ ಸಂಪನ್ಮೂಲಗಳನ್ನು ಪಡೆಯದಂತೆ ಹಿಂಡಿ ಹಿಪ್ಪೆ ಮಾಡುವ ಮತ್ತು ಇಸ್ರೇಲಿ ಸೈನಿಕರು ಅವರ ಮೇಲೆ ದಾಳಿ ನಡೆಸುವ ಯತ್ನಗಳು ಮುಂದುವರಿಯುತ್ತಿವೆ. ಪಕ್ಕದ ಯೆಮೆನ್‌ನಲ್ಲಿ ಅಮೆರಿಕಾ ಮತ್ತು ನ್ಯಾಟೋ ಕೂಟದ ಬೆಂಬಲ ಪಡೆದ ಸೌದಿ ಅರೇಬಿಯಾ ನೇತೃತ್ವದ ಯುದ್ಧವು ವಸ್ತುತಃ ಯೆಮೆನಿ ಸಮಾಜವನ್ನು ನಾಶಮಾಡಿದೆ.

## ನಿರಾಶ್ರಿತರ ಬಿಕ್ಕಟ್ಟು

ಅಮೆರಿಕಾದ ಸಾಮ್ರಾಜ್ಯಶಾಹಿ ಮಿಲಿಟರಿ ಹಸ್ತಕ್ಷೇಪಗಳು ಆ ಪ್ರದೇಶದ ಅನೇಕ ದೇಶಗಳಲ್ಲಿ ಸಾಮಾಜಿಕ ಸ್ಥಿರತೆ ಮತ್ತು ನಾಗರಿಕ ಸಮಾಜವನ್ನು ಗಂಭೀರವಾಗಿ ಛಿದ್ರಗೊಳಿಸಿವೆ. ಜನರು ಅಪಾರ ಕಷ್ಟನಷ್ಟಗಳಿಗೆ, ಸಂಕಟ ಮತ್ತು ಅಭದ್ರತೆಗಳಿಗೆ ತುತ್ತಾಗಿದ್ದಾರೆ. ಇರಾಕ್ ಯುದ್ಧದ ನಂತರ ಮತ್ತು ಈಗಿನ ಸಿರಿಯಾ ಕದನವು ಇಡೀ ಪ್ರದೇಶವನ್ನು ಸಂಕುಚಿತ ಪಂಗಡಗಳಾಗಿ ಒಡೆದು ಛಿದ್ರವಾಗಿಸುತ್ತಿದೆ. ಇದು ಅಗಾಧ ಮಾನವೀಯ ಸಮಸ್ಯೆಯನ್ನು ಹುಟ್ಟುಹಾಕಿ ಸಾವಿರಾರು ಜನರು ಈ ನೆಲದಿಂದ ವಲಸೆ ಹೋಗುವಂತಾಗಿದೆ. ತಮ್ಮ ಯುದ್ಧಪೀಡಿತ ತಾಯ್ನಾಡನ್ನು ಬಿಟ್ಟು ಹೋಗುವ ಯತ್ನದಲ್ಲಿ ನೂರಾರು ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ವಲಸೆಯ ಪ್ರವಾಹ ಯೂರೋಪಿನಲ್ಲಿ ಸಮಸ್ಯೆಯನ್ನು ಸೃಷ್ಟಿಸಿದೆ ಮತ್ತು ಬಂಡವಾಳ ಹರಿವಿಗೆ ಗಡಿಗಳನ್ನು ಮುಕ್ತವಾಗಿ ತೆರೆಯುವುದರಿಂದ ಮಾತ್ರವೇ ಸಮೃದ್ಧಿಯನ್ನು ತರಲು ಸಾಧ್ಯ ಎಂಬ ಹಣಕಾಸು ಬಂಡವಳಿಗರ ಸಮರ್ಥನೆಗಳ ಟೊಳ್ಳುತನವನ್ನು ಬಟಾಬಯಲು ಮಾಡಿದೆ. 2015ರಲ್ಲಿ ಜರ್ಮನಿಯು ಹತ್ತು ಲಕ್ಷ ನಿರಾಶ್ರಿತರನ್ನು ಬರಮಾಡಿಕೊಂಡಿರುವಾಗ ಇತರ ಯೂರೋಪಿಯನ್ ದೇಶಗಳು ಸುಲಭವಾಗಿ ಒಪ್ಪುತ್ತಿಲ್ಲ ಅಥವಾ ಬರಮಾಡಿಕೊಳ್ಳಲು ನಿರಾಕರಿಸುತ್ತಿದ್ದಾವೆ. ಇದು ಯೂರೋಪಿಯನ್ ದೇಶಗಳೊಳಗೆ ಅಂತರ್ ವೈರುಧ್ಯಗಳನ್ನು ತೀವ್ರಗೊಳಿಸುತ್ತಿದೆ ಮತ್ತು ತೀವ್ರ ಬಲಪಂಥೀಯ ವಲಸೆ–ವಿರೋಧಿ ಶಕ್ತಿಗಳು ಬಲಗೊಳ್ಳುವಂತೆ ಮಾಡಿದೆ.

## ಹೆಚ್ಚುತ್ತಿರುವ ಸೈನಿಕ ಪ್ರವೃತ್ತಿಗಳು

ನಮ್ಮ ಪಕ್ಷದ ಹಿಂದಿನ ಮಹಾಧಿವೇಶನಗಳಲ್ಲಿನ ನಿರ್ಣಯಗಳಲ್ಲಿ ಟಿಪ್ಪಣಿ ಮಾಡಿದಂತೆ, ಅಮೆರಿಕಾ ಮತ್ತು ಇತರೆ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಹೆಚ್ಚುತ್ತಿರುವ ಮಿಲಿಟರಿ ವೆಚ್ಚಗಳು ಮತ್ತು ಮಿಲಿಟರಿ ಕೂಟಗಳು ಒಂದು ಮಟ್ಟದಲ್ಲಿ ಮಿಲಿಟರಿ ವಿಸ್ತರಣೆ ಮತ್ತು ಹಸ್ತಕ್ಷೇಪಗಳ ಮೂಲಕ ಸಾಮ್ರಾಜಶಾಹಿ ಜಾಗತಿಕ ಯಜಮಾನಿಕೆಯನ್ನು ಹೆಚ್ಚಿಸಿಕೊಳ್ಳುವ ಅವರ ಆಕಾಂಕ್ಷೆಯ ಅಭಿವ್ಯಕ್ತಿಯಷ್ಟೆ.

ಹೆಚ್ಚುತ್ತಿರುವ ಮಿಲಿಟರಿ ವೆಚ್ಚಕ್ಕೆ ಮತ್ತೊಂದು ಮುಖ್ಯ ಕಾರಣವೆಂದರೆ, ಬಂಡವಾಳಶಾಹಿ 'ಅಧಿಕ ಉತ್ಪಾದನೆ'(ಓವರ್ ಪ್ರೊಡಕ್ಷನ್)ಯ ಬಿಕ್ಕಟ್ಟನ್ನು ತಡೆಯಲು ಇದೊಂದು ನಂಬಲರ್ಹವಾದ ಉಪಾಯವೆಂದು ತೋರಲಾಗುತ್ತದೆ. ಮಿಲಿಟರಿ ಉದ್ದಿಮೆಗಳಲ್ಲಿನ ಜನರ ಉದ್ಯೋಗಗಳು ಮಿಲಿಟರಿ ವೆಚ್ಚಗಳಿಗೆ ತೀರ ಅಗತ್ಯ; ಅವರು ಜನರು ಕೊಳ್ಳುವ ಏನನ್ನೂ ಉತ್ಪಾದಿಸುವುದಿಲ್ಲ; ಆದರೆ ಅವರು ಪಡೆಯುವ ಸಂಬಳ ಮತ್ತು ಮಾಡುವ ಖರ್ಚು ಬಂಡವಾಳಶಾಹಿ ವ್ಯವಸ್ಥೆಯು ಸಹಜವಾಗಿ ಸೃಷ್ಟಿಸುವ 'ಅಧಿಕ ಉತ್ಪಾದನೆ'ಯನ್ನು ಕೊಳ್ಳಲು ಬಳಕೆಯಾಗುತ್ತದೆ. ಅದು ಅದರ ಅಂತರ್ಗತ ಸ್ವಭಾವ.

ಆದರೆ ಇಂತಹ ಮಿಲಿಟರಿ ಉತ್ಪಾದನೆಯನ್ನು ಕಾರ್ಪೋರೇಟ್‌ಗಳ ಲಾಭಕ್ಕಾಗಿ ಮಾರಬೇಕಾಗುತ್ತದೆ. ಹೀಗಾಗಿ ಜಾಗತಿಕ 'ಶಸ್ತ್ರಾಸ್ತ್ರ ಬಜಾರ್' ಅಸ್ತಿತ್ವಕ್ಕೆ ಬರುತ್ತದೆ ಮತ್ತು ರಕ್ಷಣಾ ಒಪ್ಪಂದಗಳ ಅವಿಶ್ರಾಂತ ಲಾಬಿ ಶುರುವಾಗುತ್ತದೆ. ಇದನ್ನು ಪುಷ್ಟೀಕರಿಸಲು ತದನಂತರ ಸಾಮ್ರಾಜ್ಯಶಾಹಿಗಳಿಂದ ಮಿಲಿಟರಿ ಹಸ್ತಕ್ಷೇಪಗಳು ನಡೆಯುತ್ತವೆ. ನಾವು ಗಮನಿಸಿದಂತೆ, ಜಗತ್ತನ್ನು ತನ್ನ ಯಜಮಾನಿಕೆಯಡಿಯಲ್ಲಿ ಇಡಲು ಸಾಮ್ರಾಜ್ಯಶಾಹಿ ನಡೆಸುವ ಯತ್ನಗಳ ಬಹು ಮುಖ್ಯ ಅಂಶವಾಗಿ ಈ ಪ್ರವೃತ್ತಿಯು ಮುಂದುವರಿಯುತ್ತದೆ.

ನಮ್ಮ ಪಕ್ಷದ ಮಹಾಧಿವೇಶನದ ನಂತರದ ಅವಧಿಯಲ್ಲಿ, ಜಾಗತಿಕ ಮಿಲಿಟರಿ ವೆಚ್ಚಗಳು ನಿಜ ಬೆಲೆಗಳಲ್ಲಿ (ಅಂದರೆ ಹಣದುಬ್ಬರ ಬಿಟ್ಟು ನೋಡಿದರೆ) ಶೇ.1 ಏರಿದೆ. 2015ರಲ್ಲಿ ಜಗತ್ತಿನ

ಮಿಲಿಟರಿ ವೆಚ್ಚವು 1676 ಶತಕೋಟಿ ಡಾಲರುಗಳಾಗಿತ್ತು. ಇದು ಜಾಗತಿಕ ಜಿಡಿಪಿಯ ಸೇ.2.3 ಗೆ ಸಮ. 2011 ಮತ್ತು 2014ರ ನಡುವೆ ಜಾಗತಿಕ ಹಣಕಾಸು ಬಿಕ್ಕಟ್ಟಿನಿಂದಾಗಿ ಜಗತ್ತಿನ ಮಿಲಿಟರಿ ವೆಚ್ಚವು ಇಳಿತ ಕಂಡಿತ್ತು ಆದರೆ ನಂತರ ಏರಿಕೆ ಕಂಡಿದೆ. 1990ರ ನಂತರ ಸತತವಾಗಿ ಅದು ಏರುತ್ತಲೇ ಇದೆ.

ಜುಲೈ 2016ರಲ್ಲಿ ನ್ಯಾಟೋ ಪ್ರಕಟಿಸಿದ ಅಂಕಿಅಂಶಗಳು, ಕೂಟದ ಎಲ್ಲಾ ಪಾಲುದಾರರ ಒಟ್ಟು ಮಿಲಿಟರಿ ವೆಚ್ಚ ಹೆಚ್ಚಾಗಿರುವುದನ್ನು ತೋರಿಸುತ್ತದೆ. 2015ರಲ್ಲಿ 892 ಶತಕೋಟಿ ಡಾಲರುಗಳಷ್ಟು ಇದ್ದಿದ್ದ ಕೂಟದ ಮಿಲಿಟರಿ ವೆಚ್ಚವನ್ನು 2016ರಲ್ಲಿ 918 ಮಿಲಿಯನ್ ಡಾಲರುಗಳಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. 2015ರಲ್ಲಿ ಅಮೆರಿಕಾ ಮಾತ್ರವೇ ನ್ಯಾಟೋ ಮಿಲಿಟರಿ ವೆಚ್ಚದ ಶೇ.72.2ರಷ್ಟು ವೆಚ್ಚ ಮಾಡಿದೆ.

## ಏಶಿಯಾ–ಪೆಸಿಫಿಕ್ ಪ್ರದೇಶ

ಪೆಸಿಫಿಕ್ ಸಮುದ್ರ(ಶಾಂತಸಾಗರ)ದಲ್ಲಿ ತನ್ನ ಮೂರನೇ ಎರಡರಷ್ಟು ನೌಕಾಪಡೆಯನ್ನು ಸಜ್ಜುಗೊಳಿಸಿದ ನಂತರ, ಅಮೆರಿಕಾವು ಭಾರತ ಮತ್ತು ಜಪಾನ್ ಜತೆ ತ್ರಿಪಕ್ಷೀಯ ರಕ್ಷಣಾ ಸಹಕಾರವನ್ನು ಕ್ರೋಢೀಕರಿಸಿಕೊಂಡಿದೆ. ಆಸ್ಟ್ರೇಲಿಯ ಜತೆಗೂಡಿ ಈ ಕೂಟವು ದಕ್ಷಿಣ ಏಶಿಯಾದಲ್ಲಿ ಅಮೆರಿಕಾ ಪರ ಬಲಾಬಲ ಹೆಚ್ಚಿಸಿಕೊಂಡು ಬೆದರಿಕೆ ಒಡ್ಡುತ್ತಿದೆ. ಅಮೆರಿಕಾ ಸಾಮ್ರಾಜ್ಯಶಾಹಿಯ ಕಿರಿಯ ಪಾಲುದಾರನಾಗಲು ಹಾತೊರೆಯುತ್ತಿರುವ ಭಾರತವನ್ನು ತನ್ನ ಏಶಿಯಾ ಪೆಸಿಫಿಕ್ ಸಮರವ್ಯೂಹದ ಭಾಗವನ್ನಾಗಿ ಮಾಡಿಕೊಂಡಿದೆ.

## ದಕ್ಷಿಣ ಚೀನಾ ಸಮುದ್ರ

ಅಮೆರಿಕಾ ಸಾಮ್ರಾಜ್ಯಶಾಹಿ ಚೀನಾ ಮತ್ತು ಅದರ ನೆರೆಹೊರೆಯ ನಡುವಿನ ವಿವಾದದಲ್ಲಿ ತನ್ನ ಮೂಗು ತೂರಿಸುತ್ತಿದೆ. ಅಂತಹ ಮಧ್ಯಪ್ರವೇಶ ಮಾಡಲು ಆಗ್ನೇಯ ಚೀನಾ ಸಮುದ್ರದಲ್ಲಿ ತನ್ನ ನೌಕಾ ಗಸ್ತು ತಿರುಗಾಟವನ್ನು ಅಮೆರಿಕಾ ಪ್ರಾರಂಭಿಸಿದೆ.

ಹಲವಾರು ದ್ವೀಪಗಳು ಮತ್ತು ಹವಳದ್ವೀಪಗಳ ಮೇಲಿನ ಹಕ್ಕುದಾರಿಕೆಯ ವಿಷಯದಲ್ಲಿ ಪಶ್ಚಿಮ ಚೀನಾ ಸಮುದ್ರ ಪ್ರದೇಶದ ಹಲವಾರು ದೇಶಗಳ ನಡುವೆ ವಿವಾದಗಳಿವೆ. ಚೀನಾ, ಫಿಲಿಪೈನ್ಸ್, ಬ್ರೂನೈ, ಸಿಂಗಪೂರ್, ಮಲೇಶಿಯಾ ಮತ್ತು ವಿಯೆಟ್ನಾಮ್ ದೇಶಗಳ ನಡುವೆ ಹಕ್ಕುದಾರಿಕೆಯ ವಿವಾದಗಳಿವೆ. ಕಡಲ ಕಾನೂನು ವಿಚಾರದಲ್ಲಿ ವಿಶ್ವಸಂಸ್ಥೆಯ ಒಡಂಬಡಿಕೆಯ ಅಡಿಯಲ್ಲಿ ವಿವಾದ ಬಗೆಹರಿಸಲು 2013ರಲ್ಲಿ ಫಿಲಿಪೈನ್ಸ್ ನ್ಯಾಯಾಲಯಕ್ಕೆ ಮೊರೆ ಹೋಗುವುದನ್ನು ಚೀನಾ ತಿರಸ್ಕರಿಸಿತು. ಈ ನ್ಯಾಯಾಲಯ ಫಲಿಪೈನ್ಸ್ ಪರ ತೀರ್ಪಿತ್ತುದನ್ನು ಚೀನಾ ಒಪ್ಪಲು ನಿರಾಕರಿಸಿದೆ. ಫಿಲಿಪೈನ್ಸ್ ಈ ರೀತಿ ನ್ಯಾಯಾಲಯಕ್ಕೆ ಕೊಂಡೊಯ್ಯುವ ಮೂಲಕ ಹಲವು ದ್ವಿಪಕ್ಷೀಯ ಒಪ್ಪಂದಗಳನ್ನು ಉಲ್ಲಂಘಿಸಿದೆ ಎಂಬುದು ಚೀನಾದ ವಾದ. ಇಂತಹ ದ್ವಿಪಕ್ಷೀಯ ಸಮಸ್ಯೆಗಳು ಮತ್ತು ಕಡಲು ಪ್ರದೇಶಗಳ ಹಂಚಿಕೆ ವಿವಾದಗಳಲ್ಲಿ ಮೂರನೇಯವರು ಮೂಗು ತೂರಿಸುವುದನ್ನು ಒಪಪ್ಲು ಸಾಧ್ಯವಿಲ್ಲ ಎಂದು ಚೀನಾ ಹೇಳಿಕೊಂಡು ಬಂದಿದೆ. ಅಂತರ್ರಾಷ್ಟ್ರೀಯ ಸಂಬಂಧಗಳನ್ನು ನಿರ್ವಹಿಸುವ ವಿಶ್ವಸಂಸ್ಥೆಯ ವಿಧಿ ಮತ್ತು ನಿಯಮಗಳ ಅನುಸಾರ ದ್ವಿಪಕ್ಷೀಯ ವಿವಾದ ಪರಿಹಾರವಾಗುವುದರ ಪರವಾಗಿ ಚೀನಾ ಇದೆ. ಈ ಸಮುದ್ರ ಪ್ರದೇಶದಲ್ಲಿ ಹಡಗುಗಳು ಮತ್ತು ವಿಮಾನಗಳು ತಿರುಗಾಡುವುದನ್ನು ಚೀನಾ ವಿರೋಧಿಸುತ್ತಿದೆ ಎಂಬ ನಿರಂತರ ಅಪಪ್ರಚಾರವನ್ನು ಅಮೆರಿಕಾ ಮುಂದುವರಿಸಿದೆ. ದಕ್ಷಿಣ ಚೀನಾ ಸಮುದ್ರದಲ್ಲಿ ಅಂತರ್ರಾಷ್ಟ್ರೀಯ ಕಡಲು ಹಾದಿಯಲ್ಲಿನ ಭದ್ರತೆ ಹಾಗೂ ಅನಿರ್ಬಂಧಿತ ಪ್ರವೇಶವನ್ನು ಖಾತ್ರಿಪಡಿಸುವ ಕುರಿತು ಕರಾವಳಿ ದೇಶಗಳು ಮತ್ತು ಅಂತರ್ರಾಷ್ಟ್ರೀಯ ಸಮುದಾಯದ ಜತೆ

ಕೆಲಸಮಾಡಲು ಸಿದ್ಧವಿರುವುದಾಗಿ ಅತ್ತ ಚೀನಾ ಘೋಷಿಸಿದೆ. ಆ ಪ್ರದೇಶದಲ್ಲಿ ದ್ವೀಪಗಳು ಮತ್ತು ಹವಳದ್ವೀಪದ ಮೇಲಿನ ಹಕ್ಕುದಾರಿಕೆಯ ಪ್ರಶ್ನೆ ಬಹಳ ಹಿಂದಿನಿಂದಲೂ ಇರುವುದೇ ಈ ವಿವಾದದ ಮೂಲ.

ಆ ಪ್ರದೇಶದಲ್ಲಿ ಚೀನಾದ ಬೆಳೆಯುತ್ತಿರುವ ಆರ್ಥಿಕ ಬಲವನ್ನು ಮತ್ತು ಅದರ ವ್ಯಾಪಾರ ಸಂಬಂಧಗಳನ್ನು 'ತಡೆಹಿಡಿಯಲು' ಅಮೆರಿಕಾ ಯತ್ನಿಸುತ್ತಿದೆ.

ಈ ಮಧ್ಯೆ, ಕೊರಿಯಾದ ಪರ್ಯಾಯ ದ್ವೀಪದಲ್ಲಿ ಅಮೆರಿಕಾವು ಉನ್ನತ ಮಟ್ಟದ ಮಿಲಿಟರಿ ಕಾರ್ಯಾಚರಣೆ ನಡೆಸುವುದನ್ನು ಮುಂದುವರಿಸಿದೆ. ಈ ವರ್ಷದಲ್ಲಿ 80 ಸಾವಿರ ಅಮೆರಿಕಾದ ಸಶಸ್ತ್ರ ಪಡೆಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿವೆ. ಉತ್ತರ ಕೊರಿಯಾದ ಪರಮಾಣು ಯೋಜನೆಗಳನ್ನು ತಡೆಹಿಡಿಯುವ ನೆಪದಲ್ಲಿ, ರಷ್ಯಾವನ್ನು ಸುತ್ತುವರಿಯುವ ತನ್ನ ಸಮರವ್ಯೂಹದ ಭಾಗವಾಗಿ ಬಳಸಲು ಅನುಕೂಲವಾಗುವಂತೆ ಅಮೆರಿಕಾ ದಕ್ಷಿಣ ಕೊರಿಯಾಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ ಮಾಡುತ್ತಿದೆ ಮತ್ತು ಜತೆಯಲ್ಲೇ ಕ್ಷಿಪಣಿ ನೆಲೆಗಳನ್ನು ಸ್ಥಾಪಿಸಿದೆ.

**ರಷ್ಯಾ – ಚೀನಾ ಸಹಕಾರ**

ತನ್ನ ಜಾಗತಿಕ ಯಜಮಾನಿಕೆಯನ್ನು ಗಟ್ಟಿಗೊಳಿಸಲು ಅಮೆರಿಕಾ ನಡೆಸುತ್ತಿರುವ ಯತ್ನಗಳಿಗೆ ಪ್ರತಿಯಾಗಿ, ರಷ್ಯಾ ಮತ್ತು ಚೀನಾ ತಮ್ಮ ಪರಸ್ಪರ ಸಹಕಾರವನ್ನು ಗಟ್ಟಿಗೊಳಿಸಲು ಮುಂದಾಗಿವೆ. 2016ರಲ್ಲಿ ರಷ್ಯಾದ ಅಧ್ಯಕ್ಷ ಪುಟಿನ್ ಚೀನಾಕ್ಕೆ ಭೇಟಿ ನೀಡಿ ತಮ್ಮ ಸಮರವ್ಯೂಹದ ಸುಭದ್ರತೆ ಬಲಗೊಳಿಸಲು ಮತ್ತು ದ್ವಿಪಕ್ಷೀಯ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳಲು ಜಂಟಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದೊಂದು ಗಮನಾರ್ಹ ಹಾಗೂ ಸ್ವಾಗತಾರ್ಹ ಬೆಳವಣಿಗೆ.

## ಬಹು–ಧ್ರುವೀಯತೆ

'ಶೀತಲ ಸಮರದ ಕೊನೆ'ಯ ನಂತರ ತನ್ನ ಯಜಮಾನಿಕೆಯಲ್ಲಿ ಜಾಗತಿಕ ಏಕ–ದ್ರುವೀಯತೆಯನ್ನು ಹೇರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಪ್ರಯತ್ನಗಳಿಗೆ ಪ್ರತಿರೋಧವಾಗಿ, ಬ್ರಿಕ್ಸ್, ಇಬ್ಸಾ (ಐ.ಬಿ.ಎಸ್.ಎ.), ಬೇಸಿಕ್ (ಬಿ.ಎ.ಎಸ್.ಐ.ಸಿ.) ಮುಂತಾದವುಗಳು ಬಹು–ಧ್ರುವೀಯತೆಯನ್ನು ಗಟ್ಟಿಗೊಳಿಸುವ ಪ್ರಯತ್ನಗಳ ಅಭಿವ್ಯಕ್ತಿಯಾಗಿ ಹೊಮ್ಮಿವೆ ಎಂದು ನಮ್ಮ 21ನೇ ಮಹಾಧಿವೇಶನದಲ್ಲಿ ನಾವು ಗಮನಿಸಿದ್ದೆವು.

ಆದರೆ ಈ ಅವಧಿಯಲ್ಲಿ, ಹಲವು ಪ್ರಮುಖ ಬದಲಾವಣೆಗಳೂ ಆಗಿವೆ. ಈ ವರದಿಯಲ್ಲಿ ನಿರೂಪಿಸಿರುವ ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಹು–ಧ್ರುವೀಯತೆಯ ಇಂತಹ ಅಭಿವ್ಯಕ್ತಿಗಳು ಬಹಳಷ್ಟು ಅನಿಶ್ಚಿತತೆಗಳನ್ನು ಎದುರಿಸಬೇಕಾಗುತ್ತದೆ.

ಆದರೆ, ಹೆಚ್ಚುತ್ತಿರುವ ರಶ್ಯ–ಚೀನಾ ಸಹಕಾರವಲ್ಲದೆ, ಇತರ ಇಂತಹ ಹೊಸ ಅಭಿವ್ಯಕ್ತಿಗಳಿಗ ಹೊಮ್ಮುತ್ತಿವೆ. ರಶ್ಯ ನಾಯಕತ್ವದಲ್ಲಿ ಅರ್ಮೇನಿಯ, ಕಝಾಕಿಸ್ತಾನ, ಬೆಲರಸ್ ಗಳು ಸೇರಿ ರಚಿಸಲಾಗಿರುವ ಯುರೇಶಿಯನ್ ಆರ್ಥಿಕ ಒಕ್ಕೂಟದ ಒಟ್ಟು ಜಿಡಿಪಿ 40 ಸಾವಿರ ಕೋಟಿ ಡಾಲರುಗಳಷ್ಟು ಆಗುತ್ತದೆ. ಬೀಜಿಂಗಿನಲ್ಲಿ ಮುಖ್ಯ ಕಚೇರಿ ಹೊಂದಿರುವ ಏಶಿಯನ್ ಮೂಲಸೌಲಭ್ಯಗಳ ಬ್ಯಾಂಕ್ ಕಳೆದ ವರ್ಷ ಆರಂಭವಾಗಿ 57 ಸದಸ್ಯ ದೇಶಗಳನ್ನು ಹೊಂದಿದೆ. ಈ ಬ್ಯಾಂಕಿಗೆ ಅಮೆರಿಕದ ತೀವ್ರ ವಿರೋಧ ಲೆಕ್ಕಿಸದೆ ಬ್ರಿಟನ್ ಸಹ ಸೇರಿಕೊಂಡಿದೆ ಎಂಬುದು ಗಮನಾರ್ಹ. 'ಹೊಸ ರೇಶ್ಮೆ ಹಾದಿ ಆರ್ಥಿಕ ಪಟ್ಟಿ'(ನ್ಯೂ ಸಿಲ್ಕ್ ರೋಡ್ ಇಕನಾಮಿಕ್ ಬೆಲ್ಟ್)) ಮತ್ತು '21ನೇ ಶತಮಾನದ ಕಡಲ ರೇಶ್ಮೆ ಹಾದಿ'(21ಸ್ಟ್ ಸೆಂಚುರಿ ಮೆರಿಟೈಮ್ ಸಿಲ್ಕ್ ರೋಡ್) – ಒಟ್ಟಾಗಿ 'ಒಂದು ಪಟ್ಟಿ, ಒಂದು ದಾರಿ' ಎಂದು ಹೇಳಲ್ಪಡುವ ಚೀನಾದ ಹೊಸ ಪ್ರಯತ್ನಗಳಿಂದ ಏಶ್ಯಾ, ಆಫ್ರಿಕಾ, ಮಧ್ಯ–ಪ್ರಾಚ್ಯ

ಮತ್ತು ಯುರೋಪುಗಳ 44 ಶತಕೋಟಿ ಜನಸಂಖ್ಯೆ ಇರುವ 65 ದೇಶಗಳಲ್ಲಿ ರಸ್ತೆ, ರೈಲು, ಬಂದರು ಮತ್ತು ಪೈಪುಲೈನುಗಳು ಹೊಸ ಹೂಡಿಕೆ ಕಾಣಲಿವೆ.

ರಶ್ಯದ ಯುರೇಶಿಯನ್ ಆರ್ಥಿಕ ಒಕ್ಕೂಟದ ಮೂಲಕ ಯುರೇಶಿಯನ್ ಕ್ರೋಢೀಕರಣ, ಹಾಗೂ ರಶ್ಯ–ಚೀನಾಗಳ ನಾಯಕತ್ವದ ಶಾಂಘಾಯ್ ಸಹಕಾರ ಸಂಘಟನೆಗಳಿಂದ ಯುರೇಶಿಯಾದ ದೊಡ್ಡ ಶಕ್ತಿಗಳಾದ ರಶ್ಯ–ಚೀನಾಗಳ ನಡುವೆ ಹೊಸ ದ್ವಿಪಕ್ಷೀಯ ಆರ್ಥಿಕ ಮತ್ತು ಮಿಲಿಟರಿ ಸಹಕಾರಗಳ ಸರಣಿ ಒಪ್ಪಂದಗಳನ್ನು ಮಾಡಲಾಗುತ್ತಿದೆ.

## ಸಮಾಜವಾದಿ ದೇಶಗಳು

**ಚೀನಾ:**

ಮುಂದುವರೆಯುತ್ತಿರುವ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಚೀನಾದ ಆರ್ಥಿಕ ಬೆಳವಣಿಗೆ ಶೇ. 6.7ರ ನಿಧಾನ ಗತಿಯಲ್ಲಿದೆ. ತನ್ನ ಎರಡಂಕಿಯ ಬೆಳವಣಿಗೆಯ ದರವನ್ನು ನಿಧಾನಗೊಳಿಸಿ ಈ ವರ್ಷ ಶೆ. 6.5 ಮತ್ತು ಶೇ. 7ರ ನಡುವಿನ ಬೆಳವಣಿಗೆ ದರ ಸಾಧಿಸುವುದೆಂದು ಚೀನಾ ಸರಕಾರ ಯೋಜಿಸಿತ್ತು. ಈಗಿನ ಜಾಗತಿಕ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜಾಗತಿಕ ನಿಧಾನಗತಿಯ ಪರಿಣಾಮ ನಿವಾರಿಸಲು ಸೇವಾ ವಲಯದ ಮೇಲೆ ಗಮನಹರಿಸಿದೆ. ಚೀನಾದ ಅರ್ಧದಷ್ಟು ಜಿಡಿಪಿ ಮತ್ತು ಉದ್ಯೋಗಗಳ ದೊಡ್ಡ ಭಾಗ ಇಂದು ಸೇವಾ ವಲಯದಲ್ಲಿದೆ. ಕಳೆದ ಕೆಲವು ವರ್ಷಗಳಲ್ಲಿ ಸಾರ್ವಜನಿಕ ಮೂಲಸೌಲಭ್ಯಗಳನ್ನು ಹೆಚ್ಚಿಸಿದ ಸಾರ್ವಜನಿಕ ಹೂಡಿಕೆಗಳ ಮೂಲಕ ಬೆಳೆಸುತ್ತಾ ಆ ಮೂಲಕ ದೇಶೀಯ ಬೇಡಿಕೆಯನ್ನು ಹೆಚ್ಚಿಸುತ್ತಾ ಹೋಗುವ ಬೆಳವಣಿಗೆ ವಿಧಾನವನ್ನು ಚೀನಾ ಹೊಂದಿದ್ದು ಬೆಳವಣಿಗೆಗೆ ಕಾರಣವಾಗಿತ್ತು. ಈಗ ಚೀನಾ, ಜಗತ್ತಿನ ಅತ್ಯಂತ ದೊಡ್ಡ ವಿದೇಶೀ ಕರೆನ್ಸಿ ಭಂಡಾರ (ಅದರ ಜಿಡಿಪಿಯ ಶೇ. 30 ರಷ್ಟು ಅಂದರೆ ಸುಮಾರು 32 ಸಾವಿರ ಕೋಟಿ ಡಾಲರು) ಇರುವ, ಜಗತ್ತಿನ ಎರಡನೇ ಅತಿ ದೊಡ್ಡ ಆರ್ಥಿಕವಾಗಿ ಹೊಮ್ಮಿದೆ.

**ಕ್ಯೂಬಾ:**

ಕಳೆದ ಐದು ವರ್ಷಗಳಲ್ಲಿ ಕ್ಯೂಬಾದ ಆರ್ಥಿಕ ಸರಾಸರಿ ಶೇ. 2.9ರ ನಿಧಾನ ದರದಲ್ಲಿ ಬೆಳವಣಿಗೆ ಕಂಡಿದೆ. 2015ರಲ್ಲಿ ಅದು ಶೇ. 4 ಇತ್ತು, 2016ರಲ್ಲಿ ಶೇ. 2.6 ರಷ್ಟು ಇರುತ್ತದೆ ಎಂಬ ನಿರೀಕ್ಷೆ ಇದೆ.

ಕ್ಯೂಬನ್ ಕಮ್ಯುನಿಸ್ಟ್ ಪಕ್ಷದ ಕಳೆದ (ಏಳನೇ) ಮಹಾಧಿವೇಶನ, "2030ರ ವರೆಗಿನ ಕಾರ್ಯಕ್ರಮ; ಕ್ಯೂಬನ್ ಸಮಾಜವಾದದ ಸೈದ್ಧಾಂತಿಕ ಪರಿಕಲ್ಪನೆಗಳು" ಎಂಬ ದಸ್ತಾವೇಜನ್ನು ಅಂಗೀಕರಿಸಿತ್ತು. ಪ್ರಭುತ್ವ ಆರ್ಥಿಕದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಖಾಸಗಿಯವರಿಗೂ ಆರ್ಥಿಕದಲ್ಲಿ ಪಾತ್ರ ವಹಿಸಲು ಉತ್ತೇಜನ ನೀಡಲಾಗುವುದು ಎಂದು ದಸ್ತಾವೇಜಿನಲ್ಲಿ ಹೇಳಲಾಗಿದೆ. ಶಿಕ್ಷಣ, ಆರೋಗ್ಯ, ಸಂಸ್ಕೃತಿ ಸತತವಾಗಿ ಇನ್ನಷ್ಟು ಉತ್ತಮ ಪಡಿಸುವ ಸಮಾಜವಾದಿ ಗುರಿಗಳಿಗೆ ಹಿಂದಿನಂತೆ ಆದ್ಯತೆಯಿರುತ್ತದೆ. ಈ ದಸ್ತಾವೇಜಿನ ಬಗ್ಗೆ ಕ್ಯೂಬನ್ ಸಮಾಜದ ಎಲ್ಲಾ ಹಂತಗಳಲ್ಲಿಯೂ ಸಂವಾದ ನಡೆಯುತ್ತಿದೆ. ಈ ಸಂವಾದಗಳು ಮುಗಿದ ನಂತರ ಅವುಗಳನ್ನು ಪರಿಸೀಲಿಸಿದ ನಂತರ ಕೇಂದ್ರ ಸಮಿತಿ ದಸ್ತಾವೇಜನ್ನು ಆಖೈರುಗೊಳಿಸಲಾಗವುದು. ಈ ಪ್ರಕ್ರಿಯೆ 2016 ರ ಕೊನೆಯ ಹೊತ್ತಿಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

54 ವರ್ಷಗಳ ನಂತರ ಅಮೆರಿಕ ಮತ್ತು ಕ್ಯೂಬಾಗಳ ನಡುವೆ ರಾಜತಾಂತ್ರಿಕ ಸಂಬಂಧ ಪುನಃ ಏರ್ಪಟ್ಟಿದೆ. ಕಳೆದ 80 ವರ್ಷಗಳಲ್ಲಿ ಕ್ಯೂಬಾಕ್ಕೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಒಬಾಮ. ಆದರೆ ಅಮೆರಿಕ ಕ್ಯೂಬಾದ ಮೇಲೆ ಹೊರಿಸಿರುವ ಆರ್ಥಿಕ ದಿಗ್ಬಂಧನ ಮುಂದುವರೆಯುತ್ತಿದೆ.

ಗ್ವಂತನಾಮೊ ಕೊಲ್ಲಿಯನ್ನು ಅಮೆರಿಕ ಇನ್ನೂ ತನ್ನ ವಶದಲ್ಲಿರಿಸಿಕೊಂಡಿದೆ. ಆರ್ಥಿಕ ದಿಗ್ಬಂಧನದಿಂದಾಗಿ ಕ್ಯೂಬಾಕ್ಕೆ ಆದ ನಷ್ಟವನ್ನು ತುಂಬಿಕೊಡಬೇಕೆಂದು ಕ್ಯೂಬಾದ ಪಕ್ಷದ ನಾಯಕತ್ವ ಸತತವಾಗಿ ಒತ್ತಾಯಿಸುತ್ತಲೇ ಇದೆ.

**ವಿಯೇಟ್ನಾಮ್ :**

ಕಳೆದ ಎರಡು ವರ್ಷಗಳಿಂದ ವಿಯೇಟ್ನಾಮ್ ಶೇ. 6 ಜಿಡಿಪಿ ಬೆಳವಣಿಗೆ ದರ ಕಾಪಾಡಿಕೊಂಡಿದೆ. 2015ಕ್ಕೆ ಹೋಲಿಸಿದರೆ ಸರಕಾರ 2016ಕ್ಕೆ ಶೇ. 6.7 ಬೆಳವಣಿಗೆ ದರದ ಗುರಿ ಇಟ್ಟುಕೊಂಡಿತ್ತು. ಈಗ ಅದನ್ನು ದೇಶದಲ್ಲಿ ತೀವ್ರ ಬರ ಪರಿಸ್ಥಿತಿಯಿಂದಾಗಿ ಶೇ. 6.27ಕ್ಕೆ ಇಳಿಸಿದೆ. ಟಿ.ಪಿ.ಪಿ. ಒಪ್ಪಂದಕ್ಕೆ ಸಹಿ ಹಾಕಿರುವ ದೇಶಗಳಲ್ಲಿ ವಿಯೇಟ್ನಾಮ್ ಕೂಡಾ ಒಂದು. ಜನವರಿ 2016ರಲ್ಲಿ ಸಂಘಟಿಸಲಾದ ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷದ 12ನೇ ಮಹಾಧಿವೇಶನದಲ್ಲಿ ರಾಜಕೀಯ ವರದಿಯನ್ನು ಅಂಗೀಕರಿಸಿತು. ಅದರ ಜತೆಗೆ ಮಹಾಧಿವೇಶನ 2011–15 ಅವಧಿಗೆ ನಿಗದಿ ಪಡಿಸಲಾಗಿದ್ದ ಸಾಮಾಜಿಕ–ಆರ್ಥಿಕ ಕರ್ತವ್ಯಗಳ ಜಾರಿಯನ್ನು ಪರಾಮರ್ಶಿಸಿತು. 2016–2020 ಅವಧಿಗೆ ದಿಕ್ಕು–ಗುರಿಗಳನ್ನು ನಿರ್ಧರಿಸಿತು. ಪಕ್ಷ ಕಟ್ಟುವ ನಿರ್ಧಾರಗಳ ಜಾರಿಯ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸಿತು. ಹಲವು ತಿಂಗಳುಗಳ ಮೊದಲೇ ಹಂಚಲಾದ ಕರಡು ವರದಿ ಪಕ್ಷದೊಳಗೆ ವ್ಯಾಪಕವಾಗಿ ಚರ್ಚಿಸಿದ ಮೇಲೇನೇ ಮಹಾಧಿವೇಶನದಲ್ಲಿ ಮಂಡಿಸಲಾಗಿತ್ತು. ಕರಡು ವರದಿಗೆ 2.6 ಕೋಟಿ ಟಿಪ್ಪಣಿಗಳು ಮತ್ತು ಸಲಹೆಗಳು ಬಂದಿದ್ದು ಅವನ್ನು ಮಹಾಧಿವೇಶನದಲ್ಲಿ ಚರ್ಚಿಸಲಾಯಿತು. ಕೆಲವು (ಅದರಲ್ಲೂ ಕೈಗಾರಿಕೀಕರಣ ಸಂಬಂಧಿಸಿದ) ನಿರ್ದಿಷ್ಟ ಸಾಮಾಜಿಕ–ಆರ್ಥಿಕ ಗುರಿಗಳನ್ನು ಸಾಧಿಸಲಾಗಿಲ್ಲ ಮತ್ತು ಅಸಮಾನತೆಗಳು ಹೆಚ್ಚುತ್ತಿವೆ ಎಂದು ವರದಿ ಗಮನಿಸಿದೆ. ರಾಜಕೀಯ ಸಿದ್ಧಾಂತ, ನೈತಿಕತೆಗಳಲ್ಲಿ ಕುಸಿತ ಮತ್ತು ಜೀವನಮಟ್ಟ; ಹಾಗೂ ವಿಳಂಬ ನೀತಿ, ಭ್ರಷ್ಟಾಚಾರ ಮತ್ತು ಪೋಲು; – ಈ ದುರ್ಗುಣಗಳ ವಿರುದ್ಧ ಪಕ್ಷ ಹೋರಾಡಬೇಕಾಗಿದೆ ಎಂದು ವರದಿ ಗುರುತಿಸಿದೆ.

ಚೀನಾದ ಪ್ರಧಾನಿಯವರ ಆಹ್ವಾನದ ಮೇರೆಗೆ ವಿಯೇಟ್ನಾಮ್ ಪ್ರಧಾನಿ ಚೀನಾಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದರು. ವಿಯೇಟ್ನಾಮ್–ಚೀನಾ ಸಮಗ್ರ ವ್ಯೂಹಾತ್ಮಕ ಸಹಕಾರಿ ಪಾಲುದಾರಿಕೆ ತೀವ್ರಗೊಳಿಸುವ ಬಗ್ಗೆ ಸ್ಥೂಲ ಸಾಮಾನ್ಯ ತಿಳುವಳಿಕೆ ಎರಡೂ ದೇಶಗಳ ಮಾತುಕತೆ ಮತ್ತು ಸಭೆಗಳಲ್ಲಿ ಮೂಡಿತು. ಪರಸ್ಪರ ಆಸಕ್ತಿಯ ಅಂತರ್ರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು. ದಕ್ಷಿಣ ಚೀನಾದ ಸಮುದ್ರದ ಬಗೆಗಿನ ಮೂಲಭೂತ ನಿಯಮಗಳನ್ನೊಳಗೊಂಡ ದ್ವಿಪಕ್ಷೀಯ ಒಪ್ಪಂದಗಳನ್ನು ಮುತುವರ್ಜಿಯಿಂದ ಜಾರಿ ಮಾಡಬೇಕೆಂದು ಎರಡೂ ದೇಶಗಳೂ ಒಪ್ಪಿದವು. ವಿಯೇಟ್ನಾಮ್ ಮತ್ತು ಚೀನಾಗಳು ದಕ್ಷಿಣ ಚೀನಾ ಸಮುದ್ರದ ಬಗೆಗಿರುವ ವಿವಾದ ಇನ್ನಷ್ಟು ಸಂಕೀರ್ಣ ಹಾಗೂ ವ್ಯಾಪಕವಾಗದಂತೆ ತಡೆಯಲು, ರಾಜತಾಂತ್ರಿಕ ಮತ್ತು ಕಾನೂನಿನ ಪ್ರಕ್ರಿಯೆಗಳನ್ನು ಗೌರವಿಸಬೇಕು. ಶಾಂತಿ ಮತ್ತು ಸುಭದ್ರತೆ ರಕ್ಷಿಸುವಂತೆ ಈ ಬಗ್ಗೆ ನಡವಳಿಕೆಗಳ ನಿಯಮಾವಳಿ(ಸಿಒಸಿ)ಯೊಂದನ್ನು ರೂಪಿಸಬೇಕು ಎಂದೂ ಒಪ್ಪಲಾಯಿತು.

**ಉತ್ತರ ಕೊರಿಯಾ**

ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯ (ಉತ್ತರ ಕೊರಿಯಾ) ಅದರ ಮೇಲೆ ವಿಧಿಸಲಾಗಿರುವ ಕಠಿಣ ಆರ್ಥಿಕ ದಿಗ್ಬಂಧನಗಳಿಂದಾಗಿ ಒಂಟಿಯಾಗಿ ಮುಂದುವರೆಯತ್ತಿದೆ. ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ಮಿಲಿಟರಿ ಪ್ರಕ್ಷುಬ್ಧತೆಗೆ ಪ್ರತಿಕ್ರಿಯೆಯಾಗಿ ಅಣ್ವಸ್ತ್ರಗಳು ಮತ್ತು ಕ್ಷಿಪಣಿಗಳ ಪರೀಕ್ಷಣೆ ನಡೆಸಿದೆ. ಉಪಗ್ರಹಗಳನ್ನು ಹಾರಿ ಬಿಟ್ಟಿದೆ. ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ಮಿಲಿಟರಿ ಪ್ರಕ್ಷುಬ್ಧತೆಯಿಂದಾಗಿ ಆರು–ದೇಶಗಳ ಶಾಂತಿ ಮಾತುಕತೆಗಳು ಹಾಗೂ ಕೊರಿಯಾಗಳ ಶಾಂತಿಯುತ ಏಕೀಕರಣ ನೆನೆಗುದಿಗೆ ಬಿದ್ದಿದೆ.

## ಲ್ಯಾಟಿನ್ ಅಮೆರಿಕ

ಜಗತ್ತಿನ ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ನವಉದಾರವಾದ–ವಿರೋಧಿ ಶಕ್ತಿಗಳಿಗೆ ಲ್ಯಾಟಿನ್ ಅಮೆರಿಕದ ಎಡ ಶಕ್ತಿಗಳ ಮುನ್ನಡೆ ಸ್ಫೂರ್ತಿಯ ಸೆಲೆಯಾಗಿತ್ತು ಎಂದು ನಮ್ಮ 20ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯ ಗಮನಿಸಿತ್ತು. ಆದರೆ ಅದೇ ಸಂದರ್ಭದಲ್ಲಿ ಇದನ್ನೂ ಗಮನಿಸಿತ್ತು:

*"ಲ್ಯಾಟಿನ್ ಅಮೆರಿಕದ ಹಲವು ದೇಶಗಳಲ್ಲಿ ಎಡ ಧೋರಣೆಯ ಅಥವಾ ಪ್ರಗತಿಪರ ಸರಕಾರಗಳು ಪ್ರಜಾಸತ್ತಾತ್ಮಕ ಚುನಾವಣೆಗಳನ್ನು ಗೆದ್ದು ಆಳುತ್ತಿವೆ. ಕಮ್ಯುನಿಸ್ಟ್ ಪಕ್ಷಗಳೂ ಇರುವ ಎಡ ಧೋರಣೆಯ ಕೂಟಗಳು ಹೊಮ್ಮಿ, ಬಂಡವಾಳಶಾಹಿಯ ಒಳಗೆ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನವ–ಉದಾರವಾದಿ ನೀತಿಗಳಿಗೆ ಬದಲಿ ಒದಗಿಸುತ್ತಿವೆ. ಈ ಸರಕಾರಗಳು ಸಮಾಜವಾದಿ ಬದಲಿ ಅಲ್ಲ. ಆದರೂ ಅವು ಸಕಾರಾತ್ಮಕ ಬೆಳವಣಿಗೆಗಳು. ಅವು ಸಾಮ್ರಾಜ್ಯಶಾಹಿ ಮತ್ತು ನವ–ಉದಾರವಾದಿ ಬಂಡವಾಳಶಾಹಿಗೆ ನಿರ್ಣಾಯಕ ಸವಾಲು ಹಾಕಲು ಅಗತ್ಯವಾದ 'ಕರ್ತೃ ಅಂಶ'(ಸಬ್ಜೆಕ್ಟಿವ್ ಫ್ಯಾಕ್ಟರ್)ವನ್ನು ಬೆಳೆಸುವ ಹೊರಾಟಕ್ಕೆ ಸಹಾಯಕವಾಗುವಂತಹವು."*

ಈ ಸರಕಾರಗಳ ಭವಿಷ್ಯದ ಬಗ್ಗೆ ನಾವು ಹೀಗೆ ಹೇಳಿದ್ದೆವು:

*"ಇಂತಹ ಸರಕಾರಗಳು ಲ್ಯಾಟಿನ್ ಅಮೆರಿಕದಲ್ಲಿ ಸಾಮ್ರಾಜ್ಯಶಾಹಿಯ ಸವಾಲುಗಳನ್ನು ಸತತವಾಗಿ ಎದುರಿಸಿ ಗೆಲ್ಲುವುದರಲ್ಲಿ ಪಡೆಯಬಹುದಾದ ಯಶಸ್ಸು ಕೆಲವು ಅಂಶಗಳ ಮೇಲೆ ಅವಲಂಬಿಸಿರುತ್ತವೆ. "ರಾಜಕೀಯ ಮೇಲುಗೈ ಪಡೆಯಬೇಕು" ಎಂಬ ನೀತಿಯನ್ನು ಎಷ್ಟು ದೃಢವಾಗಿ ಅವರು ಮುಂದುವರೆಸಿ ರಾಜಕೀಯ ಆರ್ಥಿಕ ನೀತಿಗಳನ್ನು ನಿರ್ಧರಿಸುವಂತೆ ನೋಡಿಕೊಳ್ಳುತ್ತಾರೆ ಎಂಬುದು ಒಂದು. ಇದರಿಂದ ತನ್ನ ಯಜಮಾನಿಕೆಯ ವಿನ್ಯಾಸಗಳಿಗೆ ಅನುಕೂಲವಾಗುವಂತೆ ದೇಶೀಯ ನೀತಿಗಳನ್ನು ನಿರ್ದೇಶಿಸುವ ಸಾಮ್ರಾಜ್ಯಶಾಹಿಯ ರಾಜಕೀಯ ಮತ್ತು ಆರ್ಥಿಕ ಅಗತ್ಯಗಳನ್ನು ಸೋಲಿಸುತ್ತಾರೆ ಎಂಬುದು ಇನ್ನೊಂದು."*

ಲ್ಯಾಟಿನ್ ಅಮೆರಿಕದಲ್ಲಿ ಎಡಶಕ್ತಿಗಳು ಕಳೆದ ಎರಡು ದಶಕಗಳಲ್ಲಿ ಸಾಧಿಸಿದ ಮುನ್ನಡೆಗಳಿಗೆ, ಕಳೆದ ವರ್ಷದಲ್ಲಿ ಅವು ಎದುರಿಸಿದ ಗಂಭೀರ ಹಿನ್ನಡೆಗಳು ಅಪಾಯ ಒಡ್ಡಿವೆ. ಈ ಪ್ರದೇಶದ ಇತ್ತೀಚಿನ ಚುನಾವಣೆಗಳಲ್ಲಿ ಬಲಪಂಥೀಯ ಶಕ್ತಿಗಳು ಆಕ್ರಾಮಕವಾಗಿವೆ. ಎಡಶಕ್ತಿಗಳು ಹಿನ್ನಡೆ ಅನುಭವಿಸಿವೆ. ಅರ್ಜೆಂಟಿನಾದಲ್ಲಿ 2015ರಲ್ಲಿ ಬಲಪಂಥ ಶೇ. 51.4 ಮತ ಗಳಿಸಿ ಅಧ್ಯಕ್ಷ ಸ್ಥಾನ ಗಳಿಸಿದೆ. ತಕ್ಷಣ ಹಿಂದಿನ ಎಡ ಸರಕಾರಗಳು ಸಾಧಿಸಿದ ಜನಪರ ನೀತಿಗಳನ್ನು ಹಿಂತೆಗೆದುಕೊಂಡು, ಖಾಸಗೀಕರಣ ಹೆಚ್ಚಿಸುವ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಜತೆ ಸಂಬಂಧ ಪುನಃ ಸ್ಥಾಪಿಸುವ ಮಾರುಕಟ್ಟೆ 'ಸುಧಾರಣೆ'ಗಳನ್ನು ಆರಂಭಿಸಲಾಗಿದೆ. ಲ್ಯಾಟಿನ್ ಅಮೆರಿಕ ಖಂಡದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಆರ್ಥಿಕ ಅಧಿಪತ್ಯದ ವಿರುದ್ಧ ಎಡ ರಾಜಕೀಯ ಶಕ್ತಿಗಳನ್ನು ಬಲಪಡಿಸಿ ಒಗ್ಗೂಡಿಸುವ ಪ್ರಯತ್ನಗಳಿಗೆ ಇದೊಂದು ದೊಡ್ಡ ಹಿನ್ನಡೆ. ಬ್ರೆಜಿಲಿನ ಅಧ್ಯಕ್ಷೆ ದಿಲ್ಮಾ ರೂಸಫ್ ಅವರ ದೋಷಾರೋಪಣೆ ಮಾಡಿ ಪದಚ್ಯುತಗೊಳಿಸಲಾಗಿದೆ. ಕಾರ್ಪೊರೆಟ್ ಮಾಧ್ಯಮ–ಬೆಂಬಲಿತ ಕೆಲವೇ ಮಂದಿಯ ಆಳ್ವಿಕೆ(ಒಲಿಗಾರ್ಕಿ), ಪೋಲಿಸ್ ಮತ್ತು ನ್ಯಾಯಾಂಗದ ಕೆಲವು ವಿಭಾಗಗಳು ಅಮೆರಿಕನ್ ಸಾಮ್ರಾಜ್ಯಶಾಹಿಯ ಪೂರ್ಣ ಕುಮ್ಮಕ್ಕಿನಿಂದ ಈ ಗುರಿಯನ್ನು ಸಾಧಿಸಿವೆ. ಬೊಲಿವಿಯದಲ್ಲಿ, ಅಧ್ಯಕ್ಷ ಇವೊ ಮೊರಾಲೆಸ್ ಅವರಿಗೆ ಮೂರನೇ ಅವಧಿಗೆ ಅಗತ್ಯವಾಗಿದ್ದ ಜನಮತಸಂಗ್ರಹದಲ್ಲಿ ಸೋಲಾಗಿದೆ. ವೆನೆಜುವೆಲಾದಲ್ಲಿ ನವೆಂಬರ್ 2015ರಲ್ಲಿ ಬಲಪಂಥೀಯರು ಪಾರ್ಲಿಮೆಂಟಿನಲ್ಲಿ ದೊಡ್ಡ ಬಹುಮತ ಗಳಿಸಿದರು. ಇದು ಮದುರೊ ಅವರ ಅಧ್ಯಕ್ಷತೆಯನ್ನೇ ಬುಡಮೇಲು ಮಾಡುವ ಪ್ರಯತ್ನಗಳಿಗೆ ಎಡೆ ಮಾಡಿಕೊಟ್ಟಿದೆ. ತೀವ್ರ ಆರ್ಥಿಕ ಬಿಕ್ಕಟ್ಟು, ತೈಲ

ಬೆಲೆಗಳಲ್ಲಿ ತೀವ್ರ ಕುಸಿತ, ಭಾರೀ ಹಣದುಬ್ಬರ, ಆಹಾರ ಮತ್ತು ಇತರ ಜೀವನಾವಶ್ಯಕ ವಸ್ತುಗಳ ತೀವ್ರ ಅಭಾವ – ಬಲಪಂಥೀಯರು ಚುನಾವಣೆಗಳಲ್ಲಿ ಗೆಲ್ಲಲು ಕಾರಣಗಳು.

ಈ ಎಲ್ಲಾ ಬದಲಾವಣೆಗಳು, ಲ್ಯಾಟಿನ್ ಅಮೆರಿಕದ ಹಲವು ದೇಶಗಳಲ್ಲಿ ರೂಪಿಸಲಾಗಿದ್ದ ಪ್ರಗತಿಪರ ನವ–ಉದಾರವಾದಿ–ವಿರೋಧಿ ಪರ್ಯಾಯಕ್ಕೆ ಗಂಭೀರ ಹಿನ್ನಡೆಯನ್ನು ಸೂಚಿಸುತ್ತವೆ. ಇದು ಇಡೀ ಖಂಡದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಯಜಮಾನಿಕೆಯ ವಿರುದ್ಧ ಪ್ರಗತಿಪರರ ಐಕ್ಯತೆಗೂ ಒಂದು ದೊಡ್ಡ ಪೆಟ್ಟು. ಸಾಮ್ರಾಜ್ಯಶಾಹಿಯ ಯಜಮಾನಿಕೆಯ ವಿರುದ್ಧ ಪ್ರತಿರೋಧಕ್ಕೆಂದು ರೂಪಿಸಲಾದ ಮೆರ್ಕೊಸುರ್, ಸೆಲಾಕ್, ಉನಾಸುರ್ ಮುಂತಾದ ಪ್ರಾದೇಶಿಕ ವೇದಿಕೆಗಳ ಭವಿಷ್ಯ ಸಹ ಅನಿಶ್ಚಿತವಾಗಿವೆ.

## ಹೆಚ್ಚುತ್ತಿರುವ ಪ್ರತಿರೋಧಗಳು

ಅಮೆರಿಕನ್ ಸಾಮ್ರಾಜ್ಯಶಾಹಿಯಿಂದ ಸ್ಫೂರ್ತಿ, ಬೆಂಬಲ, ಕುಮ್ಮಕ್ಕು ಪಡೆದ ಬಲಪಂಥೀಯ ಶಕ್ತಿಗಳ ಮುನ್ನಡೆಗಳು ಸವಾಲನ್ನು ಎದುರಿಸುತ್ತಿವೆ. ಬಲಪಂಥೀಯ ದಾಳಿಗಳಿಗೆ ಪ್ರತಿರೋಧ ಬರಹತ್ತಿದೆ. ಪ್ರಗತಿಪರ ಎಡಶಕ್ತಿಗಳ ನಾಯಕತ್ವದಲ್ಲಿ ಬೀದಿಗೆ ಬಂದು ಜನ ಪ್ರತಿಭಟಿಸುತ್ತಿದ್ದಾರೆ. ವೆನೆಜುವೆಲಾದಲ್ಲಿ ಅಶಾಂತಿ ಹಬ್ಬಿಸುವ ವಿರೋಧ ಪಕ್ಷಗಳ ಪ್ರಯತ್ನಗಳ ವಿರುದ್ಧ ಚವಿಸ್ತಾಗಳ ದೊಡ್ಡ ಪ್ರದರ್ಶನಗಳು ನಡೆದಿವೆ. ಬ್ರೆಜಿಲಿನಲ್ಲಿ ಸಹ ದಿಲ್ಮಾ ಅವರ ದೋಷಾರೋಪಣೆ ಮತ್ತು ಪದಚ್ಯುತಿ ವಿರೋಧಿಸಿ ಅದು ಕ್ಷಿಪ್ರಕ್ರಾಂತಿ ಎಂದು ಆಪಾದಿಸಿ ವ್ಯಾಪಕ ಪ್ರದರ್ಶನಗಳು ನಡೆದಿವೆ. ಹೊಸ ಅರ್ಜೆಂಟಿನಿಯನ್ ಅಧ್ಯಕ್ಷರ ನವ–ಉದಾರವಾದಿ ನೀತಿಗಳ ವಿರುದ್ಧ ಕಾರ್ಮಿಕರು ಮತ್ತು ಇತರ ಜನವಿಭಾಗಗಳ ಪ್ರತಿರೋಧ ಆರಂಭವಾಗಿವೆ.

## ಕೊಲಂಬಿಯದಲ್ಲಿ ಶಾಂತಿ

ಕೊಲಂಬಿಯದ ಸರಕಾರ ಹಾಗೂ 'ಕೊಲಂಬಿಯದ ಕ್ರಾಂತಿಕಾರಿ ಸಶಸ್ತ್ರ ಪಡೆಗಳು – ಜನತಾ ಸೈನ್ಯ' (ಎಫ್‌ಎಆರ್‌ಸಿ–ಇಪಿ) ಕೊಲಂಬಿಯದಲ್ಲಿ "ಸಂಘರ್ಷ ಕೊನೆಗೊಳಿಸುವುದಕ್ಕಾಗಿ ಮತ್ತು ಸೂಕ್ತ ಹಾಗೂ ದೀರ್ಘಕಾಲೀನ ಶಾಂತಿ ಸ್ಥಾಪಿಸುವುದಕ್ಕಾಗಿ ಆಖೈರು, ಪೂರ್ಣ ಮತ್ತು ನಿರ್ದಿಷ್ಟ ಒಪ್ಪಂದ"ಕ್ಕೆ ಬಂದಿವೆ. ಇದನ್ನು ಅಗಸ್ಟ್ 24, 2016ರಂದು ಕ್ಯೂಬಾದ ಹವಾನಾದಲ್ಲಿ ಘೋಷಿಸಲಾಯಿತು. ಇದರಿಂದ ಕೊಲಂಬಿಯದಲ್ಲಿ 50 ವರ್ಷಗಳಿಂದ ನಡೆಯುತ್ತಿರುವ ದೀರ್ಘ ಸಶಸ್ತ್ರ ಸಂಘರ್ಷ ಕೊನೆಯಾಗುವುದೆಂದು ಆಶಿಸಲಾಗಿದೆ. ಕ್ಯೂಬಾ ಮತ್ತು ನಾರ್ವೇ ಒಪ್ಪಂದದಲ್ಲಿ ಸಹ–ಗ್ಯಾರಂಟಿದಾರರಾಗಿ ಸಹಿ ಹಾಕಿವೆ. ಆದರೆ ಒಪ್ಪಂದ ಜಾರಿಗೆ ಬರುವುದು ಕೊಲಂಬಿಯದ ಜನತೆ ಜನಮತಸಂಗ್ರಹದಲ್ಲಿ ಇದಕ್ಕೆ ಒಪ್ಪಿಗೆ ನೀಡಿದ ಮೇಲೆ. ಇದು ಯಶಸ್ವಿಯಾದರೆ ಇದು ಲ್ಯಾಟಿನ್ ಅಮೆರಿಕ ಖಂಡದಲ್ಲಿ ದೊಡ್ಡ ಸಕಾರಾತ್ಮಕ ಬೆಳವಣಿಗೆ. ಈ ಇಡೀ ಪ್ರಕ್ರಿಯೆಯಲ್ಲಿ ಸಮಾಜವಾದಿ ಕ್ಯೂಬಾ ದೊಡ್ಡ ಪಾತ್ರ ವಹಿಸಿತ್ತು.

## ಆಫ್ರಿಕಾ

ಆಫ್ರಿಕಾದ ಹಲವು ದೇಶಗಳಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಸ್ಥಿರತೆ ಇನ್ನೂ ಆಳವಾಗುತ್ತಾ ನಡೆದಿದೆ. ಇದಕ್ಕೆ ಪ್ರಮುಖವಾಗಿ ಸತತ ಸಾಮ್ರಾಜ್ಯಶಾಹಿಯ ಮಧ್ಯಪ್ರವೇಶಗಳು ಮತ್ತು ಅದು ಈ ಖಂಡದಲ್ಲಿ ಭಯೋತ್ಪಾದಕ ಗುಂಪುಗಳಿಗೆ ಕೊಡುತ್ತಿರುವ ಬೆಂಬಲವೇ ಕಾರಣ.

ಐದು ವರ್ಷಗಳ ಹಿಂದೆ ಸುಡಾನ್ ದೇಶವನ್ನು ಉತ್ತರ ಮತ್ತು ದಕ್ಷಿಣ ಎಂಬ ಎರಡು ದೇಶಗಳಾಗಿ ವಿಭಜಿಸಲಾಯಿತು. ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ನಡೆಯುತ್ತಿದ್ದ ಕೊನೆಗಾಣದ

ಆಂತರಿಕ ಯುದ್ಧದಿಂದ ಈ ಪರಿಸ್ಥಿತಿ ಉಂಟಾಯಿತು. ಈಗ ಹೊಸದಾಗಿ ಸೃಷ್ಟಿಯಾದ ದಕ್ಷಿಣ ಸುಡಾನ್ ಈಗ ಹೊಸ ಆಂತರಿಕ ಯುದ್ಧದ ಅಂಚಿನಲ್ಲಿದೆ. ಒಂದು ವರ್ಷವಾಗಿರುವ ಶಾಂತಿ ಒಪ್ಪಂದ ಮುರಿದು ಬಿದ್ದು ವ್ಯಾಪಕ ಹಿಂಸಾಚಾರಕ್ಕೆ ಎಡ ಮಾಡಿಕೊಟ್ಟಿದೆ.

ಎರಡು ವರ್ಷಗಳ ಕಾಲ ಭಯೋತ್ಪಾದಕ ಗುಂಪು ಬೊಕೊ ಹರಾಮ್‌ನ ಭೀಕರ ಹಿಂಸಾತ್ಮಕ ದಾಳಿಯ ನಂತರ, ಈಗ ನೈಜೀರಿಯಾ ದೇಶವ್ಯಾಪಿ ಬರದಿಂದ ನರಳುತ್ತಿದೆ. ಪರಿಸ್ಥಿತಿ ಎಷ್ಟು ಗಂಭೀರ ಇದೆಯೆಂದರೆ ಯುನಿಸೆಫ್ ಪ್ರಕಾರ ಈಗಲೇ ಆಹಾರದ ಬಂದೋಬಸ್ತ್ ಆಗದಿದ್ದರೆ 50 ಸಾವಿರ ಮಕ್ಕಳು ಹಸಿವಿನಿಂದ ಸಾಯುತ್ತಾರೆ. ನೈಜೀರಿಯಾದ ಒಂದು ಪ್ರಾಂತ್ಯದಲೇ 2.5 ಲಕ್ಷ ಜನ ಗಂಭೀರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. 44 ಲಕ್ಷ ಜನ ಬರಪೀಡಿತರಾಗಿದ್ದಾರೆ. ಅವರಲ್ಲಿ ಅರ್ಧದಷ್ಟು ಬರಪರಿಹಾರ ಸಂಸ್ಥೆಗಳು ತಲುಪಲು ಸಾಧ್ಯವಿಲ್ಲದ ಪ್ರದೇಶಗಳು.

ಸೊಮಾಲಿಯದಲ್ಲಿ ಉಗ್ರರ ಭಯೋತ್ಪಾದಕ ದಾಳಿಗಳು ರಾಜಧಾನಿ ಮೊಗದಿಶು ಮತ್ತು ಇತರ ಪ್ರಮುಖ ನಗರಗಳಲ್ಲಿ ಅವ್ಯಾಹತವಾಗಿ ಮುಂದುವರೆದಿವೆ. ಸೊಮಾಲಿಯದ ಹಲವು ಪ್ರದೇಶಗಳಲ್ಲಿ ವಿಶ್ವಸಂಸ್ಥೆ ಬೆಂಬಲಿತ ಆಫ್ರಿಕನ್ ಒಕ್ಕೂಟ ಹಾಗೂ ಇಥಿಯೋಪಿಯನ್ ಸೈನ್ಯಗಳ ವಿರುದ್ಧ ಶಬಾಬ್ ಉಗ್ರರು ದಾಳಿ ಎಸಗುತ್ತಿದ್ದಾರೆ. ಗೇಬನ್, ಝಾಂಬಿಯಾ ಮುಂತಾದ ಇತರ ದೇಶಗಳಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ವ್ಯಾಪಕ ಮೋಸ ಮತ್ತು ಅಕ್ರಮಗಳ ನಂತರ ಅಸ್ಥಿರತೆ ಇನ್ನೂ ಆಳವಾಗಿದೆ.

ದಕ್ಷಿಣ ಆಫ್ರಿಕಾದ ಸ್ಥಳೀಯ ಚುನಾವಣೆಗಳಲ್ಲಿ, 1994ರ ನಂತರ ಆಳುವ ಎ.ಎನ್.ಸಿ. (ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್) ರಂಗದ ಮತಗಳಿಕೆ ಅತಿ ಕಡಿಮೆ ಮಟ್ಟ ಮುಟ್ಟಿದೆ. 1994ರಲ್ಲಿ ವರ್ಣಬೇಧದ ಆಳ್ವಿಕೆಯನ್ನು ಕಿತ್ತೊಗೆದ ನಂತರ ಮೊದಲ ಬಾರಿಗೆ ಚುನಾವಣೆ ನಡೆದಿತ್ತು. ಎ.ಎನ್.ಸಿ. ಶೇ. 52 ಮತ ಗಳಿಸಿದರೂ, ಮತಗಳಿಕೆ ದೊಡ್ಡ ಕುಸಿತ ಕಂಡಿದೆ. ಹೆಚ್ಚುತ್ತಿರುವ ನಿರುದ್ಯೋಗ, ನಿಜ ವೇತನದ ಕುಸಿತ ಮತ್ತು ಎಲ್ಲರಿಗೂ ಮನೆ ಯೋಜನೆ ಜಾರಿಯಾಗದಿರುವುದನ್ನು ಪ್ರತಿಭಟಿಸಿ ಜನತೆ ಎ.ಎನ್.ಸಿ. ವಿರುದ್ಧ ಮತ ಚಲಾಯಿಸಿದ್ದಾರೆ.

ಹಿಂದೆ ಹಲವು ಸಂದರ್ಭಗಳಲ್ಲಿ ನಾವು ವಿಶ್ಲೇಷಿಸಿದಂತೆ ಬಿಕ್ಕಟ್ಟಿನ ಸಂದರ್ಭದಲ್ಲಿ, ಅತೃಪ್ತಿಯನ್ನು ಎಡ ಶಕ್ತಿಗಳು ಸಂಘಟಿತ ಹೋರಾಟಗಳತ್ತ ಕ್ರೋಢೀಕರಿಸಬೇಕು. ಇಲ್ಲವೆ ಬಲಪಂಥೀಯ ಶಕ್ತಿಗಳು ಇದೇ ಜನತೆಯ ಅತೃಪ್ತಿಯನ್ನು ತಮ್ಮ ಮುನ್ನಡೆಗೆ ಬಳಸಿಕೊಳ್ಳುತ್ತಾರೆ. ಇಂತಹ ಪ್ರಬಲ ಜನತಾ ಹೋರಾಟಗಳನ್ನು ಹರಿಯಬಿಡುವುದು ಮತ್ತು ಅವುಗಳಿಗೆ ನಾಯಕತ್ವ ಕೊಡುವುದರಲ್ಲಿ ನಿರ್ಣಾಯಕ ಅಂಶವೆಂದರೆ ಆಯಾ ದೇಶ–ಪ್ರದೇಶಗಳಲ್ಲಿ ಎಡ ಮತ್ತು ಕಮ್ಯುನಿಸ್ಟ್ ಪಕ್ಷಗಳ ಅಸ್ತಿತ್ವ ಮತ್ತು ಬಲ. ಎಡ ಮತ್ತು ಕಮ್ಯುನಿಸ್ಟ್ ಪಕ್ಷಗಳು ತಮ್ಮ ಚುನಾವಣಾ ಬೆಂಬಲವನ್ನು ಕಾಪಾಡಿಕೊಳ್ಳುತ್ತಿದ್ದರೂ, ಅವು ಎಡ ಶಕ್ತಿಗಳ ನಾಯಕತ್ವದಲ್ಲಿ ಜನತೆಯ ಹೋರಾಟ ಸಂಘಟಿಸುವುದಕ್ಕೆ ಸಾಕಾಗುತ್ತಿಲ್ಲ.

## ನಮ್ಮ ನೆರೆಹೊರೆ

ನಮ್ಮ 21ನೇ ಅಧಿವೇಶನದಲ್ಲಿ ನಾವು ನಮ್ಮ ನೆರೆಹೊರೆಯ ದೇಶಗಳಲ್ಲಿನ ಬೆಳವಣಿಗೆಗಳ ಕುರಿತಂತೆ ತೆಗೆದುಕೊಂಡ ತೀರ್ಮಾನಗಳು ವಿಶಾಲ ಅರ್ಥದಲ್ಲಿ ಸರಿ ಎಂದು ಸಾಬೀತಾಗಿವೆ. ಈ ಎರಡು ವರ್ಷಗಳ ಬಿಜೆಪಿ ಆಡಳಿತದ ಅವಧಿಯಲ್ಲಿ ನೆರೆಯ ದೇಶಗಳೊಂದಿಗೆ ನಮ್ಮ ಸಂಬಂಧಗಳು ಹಾಳಾಗಿ ಹೋಗಿದ್ದು, ಸರ್ಕಾರವು ಈ ದಿಕ್ಕಿನಲ್ಲಿ ಅನುಸರಿಸುತ್ತಿರುವ ವಿದೇಶಾಂಗ ನೀತಿಯು ಇದಕ್ಕೆ ಕಾರಣವಾಗಿವೆ.

**ನೇಪಾಳದಲ್ಲಿ,** ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಗಣತಂತ್ರವಾದಿ ಸಂವಿಧಾನವನ್ನು ಸೆಪ್ಟಂಬರ್ 2015ರಲ್ಲಿ ಕೊನೆಗೂ ಅಳವಡಿಸಿಕೊಳ್ಳಲಾಗಿದೆ. ರಾಜರ ಆಳ್ವಿಕೆಯನ್ನು ಕೊನೆಗೊಳಿಸಿದ ನಂತರದ ಈ ಹತ್ತು ವರ್ಷಗಳಲ್ಲಿ ಅಲ್ಲಿ ಒಂಬತ್ತು ಸರ್ಕಾರಗಳು ಬದಲಾಗಿದ್ದು, ಇದು ದೇಶದಲ್ಲಿರುವ ರಾಜಕೀಯ ಅಸ್ಥಿರತೆಯ ಲಕ್ಷಣವಾಗಿದೆ. ಈ ಅಸ್ಥಿರತೆಯು ಸಂವಿಧಾನವನ್ನೂ ಅಳವಡಿಸುವ ಪ್ರಕ್ರಿಯೆಗೆ ತೀವ್ರವಾದ ಅಡ್ಡಿಯನ್ನು ಉಂಟು ಮಾಡಿದೆ. ಸಂವಿಧಾನದಲ್ಲಿರುವ ಕೆಲವು ಅಂಶಗಳನ್ನು ವಿರೋಧಿಸಿದ ಅಲ್ಲಿನ ಮಾದೇಶಿ ಪಕ್ಷಗಳು, ಸಂವಿಧಾನ ಅಳವಡಿಕೆಗೆ ಸಂಬಂಧಿಸಿದ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೇ ಇದ್ದು, ಇದರ ವಿರುದ್ಧ ವ್ಯಾಪಕವಾದ ಪ್ರತಿಭಟನೆಗಳನ್ನು ಸಂಘಟಿಸಿದವು. ಸಂವಿಧಾನವನ್ನು ಅಂಗೀಕರಿಸಿದ ನಂತರ ರೂಪಿಸಲ್ಪಟ್ಟ ಕಾರ್ಯವಿಧಾನದಂತೆ ನೇಪಾಳ ಕಮ್ಯೂನಿಸ್ಟ್ ಪಕ್ಷ(ಏಕೀಕೃತ– ಮಾರ್ಕ್ಸ್‌ವಾದಿ–ಲೆನಿನ್‌ವಾದಿ)[ಸಿಪಿಎನ್(ಯುಎಂಎಲ್)] ಪಕ್ಷದ ನೇತೃತ್ವದಲ್ಲಿ ಹೊಸ ಸರ್ಕಾರವನ್ನು ರಚಿಸಲಾಯಿತು. ದೇಶದ ಪ್ರಧಾನಮಂತ್ರಿ ಹಾಗೂ ಅಧ್ಯಕ್ಷರಿಬ್ಬರೂ ಈ ಪಕ್ಷಕ್ಕೆ ಸೇರಿದವರಾಗಿದ್ದರು. ತಿಂಗಳೊಪ್ಪತ್ತಿನಲ್ಲೇ ಈ ಸರ್ಕಾರವು ಪಾರ್ಲಿಮೆಂಟಿನಲ್ಲಿ ಬಹುಮತ ಕಳೆದುಕೊಂಡ ನಂತರ ರಾಜೀನಾಮೆ ನೀಡಬೇಕಾಯಿತು. ನಂತರ ಆ ಜಾಗದಲ್ಲಿ ಪುಷ್ಪ ಕಮಲ್ ದಹಾಲ್(ಪ್ರಚಂಡ) ನೇತೃತ್ವದ ನೇಪಾಳ ಕಮ್ಯೂನಿಸ್ಟ್ ಪಕ್ಷ(ಮಾವೋವಾದಿ ಕೇಂದ್ರ) [ಸಿಪಿಎನ್(ಎಂಸಿ)] ಪಕ್ಷ ನೇಪಾಳಿ ಕಾಂಗ್ರೆಸ್‌ನ ಬೆಂಬಲದೊಡನೆ ಅಧಿಕಾರದ ಪ್ರಮಾಣವಚನ ಸ್ವೀಕರಿಸಿತು. ಹೊಸದಾಗಿ ಅಳವಡಿಸಿದ ಸಂವಿಧಾನದ ನಿಯಮಗಳಲ್ಲಿನ ವಿಧಿಗಳ ಪ್ರಕಾರ ರಾಷ್ಟ್ರೀಯ, ಪ್ರಾಂತೀಯ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣವೇ ಚುನಾವಣೆಗಳನ್ನು ನಡೆಸಬೇಕಿತ್ತು. ಆದರೆ ಇದು ಹೆಚ್ಚಿನ ಮಟ್ಟಿಗೆ ಅನಿಶ್ಚಿತವೆಂದು ಕಂಡು ಬರುತ್ತದೆ.

ರಸ್ತೆ ಸಂಚಾರಕ್ಕೆ ಭಾರತವು ತಡೆಯೊಡ್ಡಿರುವುದು, ನೇಪಾಳದ ವ್ಯಾಪಾರ ಮತ್ತು ಸರಕು ಸಾಗಾಣೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿರುವುದಕ್ಕೆ ಕಾರಣವಾಗಿತ್ತು ಎಂಬುದು ನೇಪಾಳೀ ಜನರ ಸಾಮಾನ್ಯ ಗ್ರಹಿಕೆಯಾಗಿದೆ. ಆದರೆ ಭಾರತ ಸರ್ಕಾರವು ಇದನ್ನು ತಿರಸ್ಕರಿಸಿದೆ. ಸತತವಾಗಿ ಅಧಿಕಾರಕ್ಕೆ ಬಂದ ಸರ್ಕಾರಗಳೆಲ್ಲವೂ, ಜನರ ಜೀವನಾಧಾರಕ್ಕೆ ಸಂಬಧಿಸಿದ ಸಮಸ್ಯೆಗಳಿಗೆ ಗಮನ ನೀಡುವಲ್ಲಿ ವಿಫಲಗೊಂಡು, ಈ ಎಲ್ಲಾ ಅಂಶಗಳೂ ಜನರಲ್ಲಿ ಅಸಮಾಧಾನ ಮತ್ತು ಭ್ರಮನಿರಸನವನ್ನು ಏಕಕಾಲಕ್ಕೆ ಉಂಟು ಮಾಡಿವೆ. ರಾಜಪ್ರಭುತ್ವದ ಪರವಾದ ಮತ್ತು ಬಲಪಂಥೀಯ ಗುಂಪುಗಳು ಈ ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿವೆ.

ಈ ಕೇಂದ್ರ ಸಮಿತಿಯ ಸಭೆಯ ಮುನ್ನಾದಿನದಂದು ನೇಪಾಳದ ಹೊಸ ಪ್ರಧಾನಿಯು ಭಾರತಕ್ಕೆ ನೀಡಿದ ಮೊದಲ ರಾಜಕೀಯ ಭೇಟಿ, ನೇಪಾಳವು ಭಾರತದೊಡನೆ ಅಗ್ರಗಣ್ಯ ಸ್ನೇಹ ಮತ್ತು ಮೈತ್ರಿಯನ್ನು ಉಳಿಸಿಕೊಳ್ಳಲು ಬಯಸುತ್ತದೆ ಎಂದು ತಿಳಿಸುವ ಉದ್ದೇಶ ಹೊಂದಿತ್ತು. ನೇಪಾಳದ [ಸಿಪಿಎನ್(ಎಂಸಿ)] ಪಕ್ಷವು ಇತ್ತೀಚಿನ ದಿನಗಳಲ್ಲಿ ಕೈಗೊಂಡಿದ್ದ ತೀರಾ ಕೆಟ್ಟದ್ದಾದ ಭಾರತ ವಿರೋಧಿ ಪ್ರಚಾರದ ಹಿನ್ನೆಲೆಯಲ್ಲಿ, ಇದು ತೀರಾ ಮಹತ್ವದ್ದು. ಈ ಭೇಟಿಯ ಫಲಿತಾಂಶದ ಅಂತಿಮ ಮೌಲ್ಯಮಾಪನವನ್ನು ಎಲ್ಲ ವಿವರಗಳು ಒಮ್ಮೆ ಲಭ್ಯವಾದ ನಂತರ ಮಾತ್ರವೇ ಮಾಡಬಹುದಾಗಿದೆ.

**ಬಾಂಗ್ಲಾದೇಶದಲ್ಲಿ** ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಮತ್ತು ಭಯೋತ್ಪಾದಕ ಸಂಘಟನೆಗಳು ಅತ್ಯಂತ ತೀವ್ರವಾಗಿ ಕ್ರಿಯಾಶೀಲವಾಗಿವೆ. ಅವರು ಹೆಚ್ಚಿನ ಸಂಖ್ಯೆಯಲ್ಲಿ ಜಾತ್ಯಾತೀತವಾದಿ ಬರಹಗಾರರು ಹಾಗೂ ಬ್ಲಾಗುಗಳಲ್ಲಿ ಬರೆಯುವವರನ್ನು ಗುರಿಯಾಗಿಟ್ಟು ಕೊಂದಿದ್ದಾರೆ. ಜೊತೆಗೆ ಅವರು ಭಯೋತ್ಪಾದಕ ಕೃತ್ಯಗಳನ್ನೇ ಅವಲಂಬಿಸಿದ್ದು, ಇದಕ್ಕೆ ಸಂಬಂಧಿಸಿ ನೂರಾರು ಜನರು ಕೊಲ್ಲಲ್ಪಟ್ಟಿದ್ದಾರೆ. ಬಾಂಗ್ಲಾ ದೇಶದ ವಿಮೋಚನೆಗಾಗಿ ನಡೆದ ಯುದ್ಧದ ಸಮಯದಲ್ಲಿ ಮಾಡಿದ

ಯುದ್ಧ ಅಪರಾಧಗಳಿಗೆ ಸಂಬಂಧಿಸಿ ಅನೇಕ ಇಸ್ಲಾಮಿಸ್ಟ್ ನಾಯಕರನ್ನು ವಿಚಾರಣೆಗೆ ಒಳಪಡಿಸುವ ಬಾಂಗ್ಲಾದೇಶೀ ಸರ್ಕಾರದ ನಿರ್ಧಾರವು ಹಿಂಸಾತ್ಮಕ ಪ್ರತಿಕ್ರಿಯೆಗೆ ಪ್ರಚೋದನೆ ನೀಡಿದೆ. ಉಗ್ರವಾದಿ ಶಕ್ತಿಗಳು ಹಾಗೂ ಭಯೋತ್ಪಾದಕರ ಈ ಬೆಳವಣಿಗೆಯು ನಮ್ಮ ದೇಶದ ಮೇಲೆ ಕೂಡಾ, ಭಯೋತ್ಪಾದನೆ ತೀವ್ರವಾಗಿ ಹರಡುವ, ನಿರ್ದಿಷ್ಟವಾಗಿ ಹೇಳುವುದಾದಲ್ಲಿ ನಮ್ಮ ಗಡಿ ಭಾಗದ ರಾಜ್ಯಗಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಈ ಮೂಲಭೂತವಾದಿಗಳ ವಿಚಾರಣೆ ನಡೆಸಿ ಅವರ ವಿರುದ್ಧ ಕ್ರಮಕೈಗೊಳ್ಳುವ ಬಾಂಗ್ಲಾದೇಶೀ ಸರ್ಕಾರದ ಪ್ರಯತ್ನಗಳು ಪ್ರಶಂಸನೀಯವಾಗಿದೆ. ಆದರೆ ಮೂಲಭೂತವಾದಿ ಮತ್ತು ಭಯೋತ್ಪಾದಕ ಶಕ್ತಿಗಳು ದೇಶದ ಆರ್ಥಿಕತೆಯ ಕುರಿತು ಜನಸಾಮಾನ್ಯರಿಗಿರುವ ಅಸಮಾಧಾನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವುದು ಮತ್ತು ಈಗಾಗಲೇ ಕಷ್ಟದಲ್ಲಿ ಸಿಲುಕಿರುವ ದೇಶದ ಜಾತ್ಯಾತೀತ ರಾಜಕೀಯವನ್ನು ಭಯೋತ್ಪಾದಕರು ಹಾಳುಗೆಡವದಂತೆ ನೋಡಿಕೊಳ್ಳುವ ಭರವಸೆಯನ್ನು ಸರಕಾರವು ನೀಡಬೇಕಿದೆ.

**ಪಾಕಿಸ್ತಾನದಲ್ಲಿನ** ಪರಿಸ್ಥಿತಿಯು ತೀರಾ ಸಂದಿಗ್ಧವಾಗಿಯೇ ಉಳಿದು ಹಾಗೆನೇ ಮುಂದುವರಿಯುತ್ತಿದೆ ಹಾಗೂ ದೇಶದ ಬಹುದೊಡ್ಡ ಭಾಗಗಳು ಧಾರ್ಮಿಕ ಮೂಲಭೂತವಾದೀ ಶಕ್ತಿಗಳ ಪ್ರಭಾವದ ಅಡಿಯಲ್ಲಿಯೇ ಇವೆ. ಭಯೋತ್ಪಾದಕರ ಧಾಳಿಗಳು ಮುಗ್ಧ ಜನರ ಜೀವ ತೆಗೆಯುವುದನ್ನು ಮುಂದುವರಿಸಿವೆ. ದೇಶದ ಎಲ್ಲಾ ವ್ಯವಹಾರಗಳಲ್ಲೂ ಮಿಲಿಟರಿ ವ್ಯವಸ್ಥೆಯು ಪ್ರಮುಖ ಪಾತ್ರ ವಹಿಸುತ್ತಿದೆ. ಪ್ರಸ್ತುತ ಕಾಶ್ಮೀರದಲ್ಲಿನ ಗಲಭೆಗಳು ಪಾಕಿಸ್ತಾನಕ್ಕೆ ಹಸ್ತಕ್ಷೇಪ ಮಾಡಲು ಹಾಗೂ ಇದನ್ನು ಅಂತರರಾಷ್ಟ್ರೀಯ ವಿಷಯವನ್ನಾಗಿಸಲು ಹೆಚ್ಚಿನ ಅವಕಾಶವನ್ನು ಒದಗಿಸುತ್ತಿವೆ. ಭಾರತ–ಪಾಕಿಸ್ತಾನದ ಸಂಬಂಧಗಳ ಬಗ್ಗೆ ಹೇಳುವುದಾದಲ್ಲಿ, ಈಗಿನ ಬಿಜೆಪಿ ಸರ್ಕಾರವು ಹೊಂದಿರುವ ಅದರ 'ಒಮ್ಮೆ ಒಂದು–ಇನ್ನೊಮ್ಮೆ ಇನ್ನೊಂದು'(ಫ್ಲಿಪ್–ಫ್ಲಾಪ್) ನೀತಿಯು ಭಾರತ–ಪಾಕಿಸ್ತಾನದ ಸಂಬಂಧಗಳು ಇನ್ನಷ್ಟು ಹದಗೆಡುವಂತಹ ಅಪಾಯವನ್ನೂ ಮಾತ್ರವೇ ಸೃಷ್ಟಿಸುತ್ತಿದೆ.

**ಅಫ್ಘಾನಿಸ್ತಾನದಲ್ಲಿ** ತಾಲಿಬಾನ್ ಮತ್ತೊಮ್ಮೆ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿದೆ. ಅಮೇರಿಕಾವು ಅಫ್ಘಾನಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಿದೆ.

**ಮಾಲ್ಡೀವ್ಸ್‌ನಲ್ಲಿ** ದೇಶದ ಮೊದಲ ಚುನಾಯಿತ ನಾಯಕನಾದ ಮೊಹಮದ್ ನಷೀದ್‌ರನ್ನು ಫೆಬ್ರವರಿ 2012ರಲ್ಲಿ ಅಧಿಕಾರದಿಂದ ಉರುಳಿಸಿದ ನಂತರ ದೇಶವು ಬಿಕ್ಕಟ್ಟಿನಲ್ಲಿ ಸಿಲುಕಿದೆ. ವಿವಾದಾತ್ಮಕ ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಅಬ್ದುಲ್ಲಾ ಯೂಮೀನ್ ಮೊದಲ ಚುನಾಯಿತ ನಾಯಕ ಮೊಹಮದ್ ನಷೀದ್‌ಗೆ ಹದಿಮೂರು ವರ್ಷಗಳ ಜೈಲುಶಿಕ್ಷೆ ವಿಧಿಸಿದ ನಂತರ, ಈ ಕೃತ್ಯಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಖಂಡನೆ ವ್ಯಕ್ತವಾಗಿದೆ. ಇಸ್ಲಾಂ ಮೂಲಭೂತವಾದವು ದೇಶದಲ್ಲಿ ಬೆಳೆಯುತ್ತಿದೆ ಹಾಗೂ ಕಳೆದ ಒಂದು ವರ್ಷದಲ್ಲಿ ವಿರೋಧ ಪಕ್ಷದ ನಾಯಕರುಗಳನ್ನೂ ಮಾತ್ರವಲ್ಲದೇ, ದೇಶದ ಉಪಾಧ್ಯಕ್ಷ, ರಕ್ಷಣಾ ಸಚಿವ ಹಾಗೂ ಪೊಲೀಸ್ ಮುಖ್ಯಸ್ಥರನ್ನು ಆ ದೇಶದ ಅಧ್ಯಕ್ಷರು ಬಂಧಿಸಿದ್ದಾರೆ.

**ಶ್ರೀಲಂಕಾ :** ರಾಷ್ಟ್ರೀಯ ಏಕತೆ ಹೊಂದಿರುವ ಶ್ರೀಲಂಕಾದಲ್ಲಿ, ಶ್ರೀಲಂಕಾ ಫ್ರೀಡಂ ಪಾರ್ಟಿ ಮತ್ತು ಯುನೈಟೆಡ್ ನ್ಯಾಷನಲ್ ಪಾರ್ಟಿಯು ಹೊಸ ಸಂವಿಧಾನವನ್ನು ರಚಿಸಲು ಸಮಿತಿಯೊಂದನ್ನು ಸ್ಥಾಪಿಸಿವೆ. ಈ ಸಮಿತಿಯು ಎಲ್ಲಾ ಜನ ವಿಭಾಗಗಳ ರಾಜಕೀಯ ಅಭಿಪ್ರಾಯವನ್ನು ಪರಿಗಣಿಸಿಲ್ಲವೆಂಬ ವ್ಯಾಪಕ ಟೀಕೆಯೂ ವ್ಯಕ್ತವಾಗಿದೆ. ಈ ಹೊಸ ಸಂವಿಧಾನವು ನವೆಂಬರ್ 2016ರಲ್ಲಿ ಸಂಸತ್‌ನಲ್ಲಿ ಅನುಮೋದನೆಗೊಳ್ಳಬೇಕಿದ್ದು, ನಂತರ ಜನವರಿ 2017ರಲ್ಲಿ ಇದು ಜನಾಭಿಪ್ರಾಯ ಸಂಗ್ರಹಣೆಗೆ ಹೋಗಲಿದೆ.

ವಿಶ್ವಸಂಸ್ಥೆಯ ಸೆಪ್ಟಂಬರ್ 2015ರ ವರದಿಯ ಪ್ರಕಾರ, ಕಳೆದ ದಶಕದ ದೀರ್ಘ ಆಂತರಿಕ ಯುದ್ಧದ ಸಂದರ್ಭದಲ್ಲಿ ದೇಶದಲ್ಲಿ ಭಾರೀ ಪ್ರಮಾಣದ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗಳು ನಡೆದಿವೆ. ಭಾರೀ ಪ್ರಮಾಣದ ಈ ಅಪರಾಧಗಳ ವಿಚಾರಣೆಗಾಗಿ ವಿದೇಶಿ ನ್ಯಾಯಾಧೀಶರಿರುವ ವಿಶೇಷ ಮಿಶ್ರ ನ್ಯಾಯಾಲಯವನ್ನು ಸ್ಥಾಪಿಸಲು ಈ ವರದಿಯು ಸೂಚಿಸಿದೆ. ಈ ವರದಿಯ ಶಿಫಾರಸ್ಸಿನಂತೆ ಈ ವಿಶೇಷ ನ್ಯಾಯಾಲಯವು ಅಂತರರಾಷ್ಟ್ರೀಯ ನ್ಯಾಯಾಧೀಶರು, ವಕೀಲರು, ತನಿಖೆದಾರರನ್ನು ಒಳಗೊಳ್ಳಬೇಕಿದ್ದು, ಇದು 'ನ್ಯಾಯದ ಕಡೆಗೆ ಅತ್ಯಗತ್ಯ ಹೆಜ್ಜೆ'ಯಾಗಲಿದೆ. ವಿಶ್ವಸಂಸ್ಥೆಯ ವರದಿಯು ಅಲ್ಲಿನ ಹೊಸ ಸರ್ಕಾರವು, ಹಿಂದೆ ಅಲ್ಲಿ ನಡೆದ ಕುಕೃತ್ಯಗಳಿಗೆ ಬಲಿಯಾದವರಿಗೆ ನ್ಯಾಯ ಒದಗಿಸಲು ಹಾಗೂ ಸತ್ಯ ಶೋಧಿಸಲು 'ನ್ಯಾಯ ಮತ್ತು ಸತ್ಯಶೋಧನಾ ಕಮಿಶನ್' ಸ್ಥಾಪಿಸುವ ತಮ್ಮ ಯೋಜನೆಗಳನ್ನು ಮತ್ತು ನೊಂದವರಿಗೆ ಪರಿಹಾರ ಕೊಡಲು ಪ್ರಸ್ತಾವಗಳನ್ನು ರೂಪಿಸುತ್ತಿದ್ದ ಸಂದರ್ಭದಲ್ಲಿಯೇ ಬಂದಿದೆ.

**ಮ್ಯಾನ್ಮಾರ್ :** 1962ರಿಂದ ಈಚೆಗೆ ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾದ ಮೊದಲ ಜನರ ಪ್ರತಿನಿಧಿ ಆಂಗ್ ಸನ್ ಸೂಕಿ ಅಲ್ಲಿನ ನಾಯಕಿಯಾಗಿದ್ದಾರೆ. ಅಧಿಕೃತವಾಗಿ ಇವರನ್ನು 'ಸ್ಟೇಟ್ ಕೌನ್ಸಿಲರ್ ಆಫ್ ಮ್ಯಾನ್ಮಾರ್' ಎಂದು ಹೆಸರಿಸಲಾಗಿದೆ. ಮ್ಯಾನ್ಮಾರ್‌ನಲ್ಲಿ ಅನೇಕ ಪೀಳಿಗೆಗಳಿಂದ ಬದುಕುತ್ತಿರುವ ರೋಹಿಂಗ್ಯಾ ಮುಸ್ಲಿಮರ ಪೌರತ್ವ ಮಾನ್ಯತೆ ಕುರಿತು ಸೂಕಿ ತಮ್ಮ ಬಲವಾದ ವಿರೋಧವನ್ನು ಪುನರುಚ್ಚರಿಸಿದ್ದಾರೆ. ಅಲ್ಲದೇ ರೋಹಿಂಗ್ಯಾ ಮುಸ್ಲಿಮರಿಗೆ ಮೂಲಭೂತ ಹಕ್ಕುಗಳಾದ ನಾಗರಿಕತ್ವ, ಪೂಜಾ ಸ್ವಾತಂತ್ರ್ಯ, ಶಿಕ್ಷಣ, ಮದುವೆ ಮುಂತಾದವುಗಳನ್ನು ನಿರಾಕರಿಸಲಾಗಿದೆ. 2012ರಲ್ಲಿ ನಡೆದ ಹಿಂಸಾಚಾರಗಳ ಪರಿಣಾಮವಾಗಿ ಒಂದು ಲಕ್ಷಕ್ಕೂ ಅಧಿಕ ಜನರು ಮನೆ–ಮಠಗಳನ್ನು ತೊರೆದು ನಿರಾಶ್ರಿತರಾಗಿ, ಪುನರ್ವಸತಿ ಶಿಬಿರಗಳಲ್ಲಿ ವಾಸಿಸುತ್ತಿದ್ದಾರೆ. ಇವರೆಲ್ಲರೂ ಅಕ್ರಮವಾಗಿ ಗಡಿ ಪ್ರವೇಶಿಸಿ ಬಂದಿರುವ ಬಂಗಾಲಿಗಳು ಎಂದು ಇವರನ್ನು ಅಲ್ಲಿನ ಬೌದ್ಧ ಸನ್ಯಾಸಿಗಳು ದೂಷಿಸುತ್ತಾರೆ. ರೋಹಿಂಗ್ಯಾ ಮುಸ್ಲಿಮರ ಮೇಲೆ ಬೌದ್ಧ ಮೂಲಭೂತವಾದಿ ಪಡೆಗಳ ದಾಳಿಯು ಇಂದಿಗೂ ಮುಂದುವರಿಯುತ್ತಿದೆ.

## ಶ್ರಮಜೀವಿಗಳ ಅಂತರ್ರಾಷ್ಟ್ರೀಯತೆ

### ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿ :

ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಹಲವು ರಾಷ್ಟ್ರಗಳಲ್ಲಿ, ತಮ್ಮ ಶಕ್ತಿ ಸೀಮಿತವಾಗಿದ್ದರೂ ಸಕ್ರಿಯವಾಗಿವೆ. ಕೆಲವು ಬಂಡವಾಳಶಾಹಿ ದೇಶಗಳಾದ ಗ್ರೀಸ್, ಪೋರ್ಚುಗಲ್, ರಷ್ಯಾ, ಚೆಕ್ ರಿಪಬ್ಲಿಕ್, ಸೈಪ್ರೆಸ್, ದಕ್ಷಿಣ ಆಫ್ರಿಕಾ, ಬ್ರೆಜಿಲ್, ನೇಪಾಳ ಮತ್ತು ಜಪಾನ್‌ಗಳಲ್ಲಿ ಈ ಪಕ್ಷಗಳು ಪ್ರಮುಖ ರಾಜಕೀಯ ಶಕ್ತಿಗಳಾಗಿವೆ. ಅನೇಕ ಕಮ್ಯೂನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಪ್ರತಿ ವರ್ಷವೂ ಸಭೆ ಸೇರಿ ಮಾಹಿತಿ ವಿನಿಮಯ, ಅಭಿಪ್ರಾಯ ಮತ್ತು ತಮ್ಮ ದೇಶಗಳ ಅನುಭವಗಳನ್ನು ಹಂಚಿಕೊಳ್ಳುತ್ತಿವೆ. ಸೋವಿಯತ್ ಒಕ್ಕೂಟವು ಪತನವಾದ ನಂತರದಲ್ಲಿ 1993ರಲ್ಲಿ ನಾವು ಸಂಘಟಿಸಿ, ನಡೆಸಿದ ಸಮಕಾಲೀನ ಜಾಗತಿಕ ಪರಿಸ್ಥಿತಿ ಕುರಿತಾದ ವಿಚಾರ ಸಂಕಿರಣವು ಎಲ್ಲಾ ಪ್ರಮುಖ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳನ್ನು ಒಟ್ಟಿಗೆ ತರುವಲ್ಲಿ ಸಹಾಯಕವಾಗಿದೆ. ಅಲ್ಲಿ ಭಾಗವಹಿಸಿದ್ದ ಎಲ್ಲಾ ಪಕ್ಷಗಳಿಗೆ ಇದು ಅತ್ಯಂತ ಉಪಯುಕ್ತವೆಂದು ಅನಿಸಿತು ಮತ್ತು ನಿಯಮಿತವಾಗಿ ಈ ರೀತಿಯ ವಿಚಾರ ಸಂಕಿರಣಗಳು ಬೇಕು ಎಂಬ ಪ್ರಸ್ತಾವ ಕೂಡಾ ಅಲ್ಲಿ ಕೇಳಿ ಬಂತು.

1999ರಿಂದ ಕಮ್ಯೂನಿಸ್ಟ್ ಪಾರ್ಟಿ ಆಫ್ ಗ್ರೀಸ್(ಕೆಕೆಇ) ತಾನು ಜವಾಬ್ದಾರಿಯನ್ನು ತೆಗೆದುಕೊಂಡು ಪ್ರತಿವರ್ಷವೂ 'ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳವಾರ್ಷಿಕ

ಸಭೆ' (ಐಎಂಸಿಡಬ್ಲ್ಯುಪಿ) ಯನ್ನು ತನ್ನ ನೇತೃತ್ವದಲ್ಲಿ ಆಯೋಜಿಸಲು ಪ್ರಾರಂಭಿಸಿತು. ಇದರ ಮೊದಲ ಏಳು ಸಭೆಗಳು ಗ್ರೀಸ್ ದೇಶದ ಅಥೆನ್ಸ್‌ನಲ್ಲಿಯೇ ನಡೆದವು. ನಮ್ಮ ಸಲಹೆಯ ಮೇರೆಗೆ ಈ ಸಭೆಗಳನ್ನು ವಿಶ್ವದ ಎಲ್ಲಾ ದೇಶಗಳಲ್ಲಿಯೂ ಆಯೋಜಿಸಲು ಆರಂಭಿಸಲಾಯಿತು. ಈ ರೀತಿಯ ಹನ್ನೊಂದನೇ ಸಭೆಯನ್ನು ನಾವು ಸಿಪಿಐ ಪಕ್ಷದ ಜೊತೆ ಸೇರಿ ನಮ್ಮ ದೇಶದಲ್ಲಿ ಜಂಟಿಯಾಗಿ ಸಂಘಟಿಸಿದೆವು.2017ರಲ್ಲಿ ಈ ಐ.ಎಂ.ಸಿ.ಡಬ್ಲ್ಯೂ.ಪಿ. ಸಭೆಯನ್ನು ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ನೆನಪಿಗಾಗಿ ರಷ್ಯಾದಲ್ಲಿ ನಡೆಸಲು ಯೋಜಿಸಲಾಗಿದೆ.

ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಇಂತಹ ಸಮ್ಮೇಳನಗಳನ್ನೂ ವಿಶ್ವದ ವಿವಿಧ ಪ್ರದೇಶಗಳಲ್ಲಿ ಆಯೋಜಿಸುವುದರ ಮೂಲಕ ಇದಕ್ಕೆ ಒಂದು ಸ್ಪಷ್ಟವಾದ ರೂಪವನ್ನು ನೀಡುವ ಪ್ರಯತ್ನಗಳು ನಡೆಯುತ್ತಿವೆ. ಬಾಲ್ಕನ್ ಪ್ರಾಂತ್ಯದಲ್ಲಿನ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಮ್ಮೇಳನಗಳು ಹಾಗೂ ಯುರೋಪ್ ಪ್ರದೇಶದಲ್ಲಿ ನಿಯಮಿತವಾಗಿ ಸಂಘಟಿಸುತ್ತಿರುವ ಸಮ್ಮೇಳನಗಳನ್ನೂ ಇಲ್ಲಿ ಉದಾಹರಣೆಯಾಗಿ ಪರಿಗಣಿಸಬಹುದು. ಲ್ಯಾಟಿನ್ ಅಮೇರಿಕಾದಲ್ಲಿ ಅನೇಕ ಕಮ್ಯೂನಿಸ್ಟ್ ಪಕ್ಷಗಳು ಹೊಸದಾಗಿ ನಡೆಯುತ್ತಿರುವ ಎಡ ಚಳುವಳಿಗಳ ಮತ್ತು ಶಕ್ತಿಗಳ ಜೊತೆ ಒಗ್ಗೂಡಿ ಕೆಲಸ ಮಾಡುತ್ತಿದ್ದು, ಈ ಪಕ್ಷಗಳು ನಿಯಮಿತವಾಗಿ ಸಭೆಗಳನ್ನು ನಡೆಸುತ್ತಿವೆ. ಆಫ್ರಿಕಾದಲ್ಲಿ ಕೂಡಾ ಸೌತ್ ಆಫ್ರಿಕನ್ ಕಮ್ಯೂನಿಸ್ಟ್ ಪಾರ್ಟಿಯು (ಎಸ್.ಎ.ಸಿ.ಪಿ) ಅಲ್ಲಿರುವ ವಿವಿಧ ಎಡ ಗುಂಪುಗಳು ಮತ್ತು ಎಡಪಕ್ಷಗಳನ್ನು ಒಗ್ಗೂಡಿಸುವುದರ ನೇತೃತ್ವ ವಹಿಸಿದೆ. ಲ್ಯಾಟಿನ್ ಅಮೇರಿಕಾವು ದೀರ್ಘಕಾಲದಿಂದಲೂ ಸಾವೋ ಪೋಲೋ ವೇದಿಕೆಯಂತಹ ಎಡ ಶಕ್ತಿಗಳ ಸಭೆಗಳನ್ನು ನಡೆಸುವ ಪರಂಪರೆಯನ್ನು ಹೊಂದಿದೆ. ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಇಂತಹ ಸಭೆ–ಸಮ್ಮೇಳನಗಳನ್ನು ನಮ್ಮ ಪ್ರದೇಶದಲ್ಲಿ ವ್ಯವಸ್ಥೆಗೊಳಿಸಲು ಸಾಧ್ಯವಾಗಿಲ್ಲ. ಸಾರ್ಕ್ ದೇಶಗಳಲ್ಲಿನ ಎಲ್ಲಾ ಬಗೆಯ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಎಡ ಶಕ್ತಿಗಳನ್ನು ಒಗ್ಗೂಡಿಸಲು ಮುಂದಾಗಬೇಕೆನ್ನುವ ಒತ್ತಾಯ ನಮ್ಮ ಪಕ್ಷದ ಮೇಲೆ ಇದೆ.

## ದುಡಿಯುವ ವರ್ಗದ ಹೋರಾಟಗಳು

ಶ್ರಮಜೀವಿಗಳು ಮತ್ತು ಬಂಡವಾಳದ ಅಥವಾ ದುಡಿಯುವ ವರ್ಗ ಮತ್ತು ಆಳುವ ವರ್ಗಗಳ ನಡುವಿನ ವೈರುಧ್ಯಗಳು ಇವತ್ತಿನ ಸಂದರ್ಭದಲ್ಲಿ ವಿಶ್ವದ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲೂ ತೀವ್ರಗೊಂಡಿದೆ. ಜರ್ಮನಿಯೊಳಗೆ 2015ರ ಕೊನೆಯಲ್ಲಿ ಅಮೇರಿಕಾದ ದೈತ್ಯ ಸಂಸ್ಥೆಯಾದ ಅಮೇಝಾನ್‌ನ ಗೋದಾಮಿನಲ್ಲಿ ನಡೆದು ಮುಕ್ತಾಯಗೊಂಡ ಮುಷ್ಕರ, ಲುಫ್ತಾನ್ಸ ವಿಮಾನಯಾನ ಕಾರ್ಮಿಕರ ಮುಷ್ಕರ ಮತ್ತು ದೊಡ್ಡ ಸಂಖ್ಯೆಯಲ್ಲಿರುವ ಸಾರ್ವಜನಿಕ ವಲಯದ ಕಾರ್ಮಿಕರು ಅಂದರೆ, ಅಂಚೆ ಕಾರ್ಮಿಕರು, ಶಿಶುವಿಹಾರ ಮತ್ತು ನರ್ಸರಿ ಶಾಲಾ ಶಿಕ್ಷಕರ ಮುಷ್ಕರಗಳು ಜರ್ಮನಿಯನ್ನೂ ಅಲುಗಾಡಿಸುತ್ತಿವೆ. ಅಮೇರಿಕಾದಲ್ಲಿ ವಾಹನ ಉದ್ಯಮ, ಉಕ್ಕು ಮತ್ತು ತೈಲ ಉದ್ಯಮಗಳಲ್ಲಿ ಕಾರ್ಮಿಕ ವರ್ಗದ ಮುಷ್ಕರಗಳು ಕಂಡು ಬಂದಿವೆ. ಗ್ರೀಸ್‌ನಲ್ಲಿ ರೈಲ್ವೇ ಕಾರ್ಮಿಕರು ಐದು ದಿನಗಳ ಕಾಲ ಮುಷ್ಕರ ನಡೆಸಿದ್ದಾರೆ. ಅದೇ ರೀತಿ ವಿಶ್ವದ ಅನೇಕ ಭಾಗಗಳಲ್ಲಿ ಈ ಬಗೆಯ ಬೃಹತ್ ಪ್ರತಿಭಟನೆಗಳು ನಡೆಯುತ್ತಿವೆ. ಪ್ಯಾರಿಸ್‌ನಲ್ಲಿ ಈ ಅವಧಿಯಲ್ಲಿ ಭಾರೀ ಪ್ರಮಾಣದಲ್ಲಿ ನಡೆದ ಕಾರ್ಮಿಕರ ಮುಷ್ಕರಗಳು, ಕಾರ್ಮಿಕ ವರ್ಗದ ಹೋರಾಟದ ಬಹುದೊಡ್ಡ ಹೆಜ್ಜೆ ಗುರುತುಗಳಾಗಿವೆ. ಈ ಮುಷ್ಕರಗಳಲ್ಲಿ ಲಕ್ಷಾಂತರ ಜನರು ಸೇರಿ ನಡೆಸಿದ ಅಲ್ಲಿನ 'ಮಿತವ್ಯಯದ ನೀತಿ'ಗಳ ವಿರುದ್ಧ ನಡೆಸಿದ ಪ್ರತಿಭಟನೆ ಇಡೀ ವಿಶ್ವದ ಗಮನ ಸೆಳೆದಿದೆ.

ಯೂರೋಪಿನಾದ್ಯಂತ ಬೃಹತ್ ಪ್ರತಿಭಟನೆಗಳು ಕಂಡು ಬಂದಿದ್ದು, ಯೂರೋಪಿನ ರಾಜಧಾನಿಗಳಲ್ಲಿ ಹಿಂದೆಂದೂ ಕಂಡಿಲ್ಲದ ಹಾಗೆ ಜನರು ಸೇರಿದ್ದರಲ್ಲದೇ ಅದು ಅಲ್ಲಿನ 'ಮಿತವ್ಯಯದ

ನೀತಿ'ಗಳ ವಿರುದ್ಧದ ಹೋರಾಟವಾಗಿದ್ದು, ಈ ಹೋರಾಟಗಳು ತಮ್ಮ ಸ್ವಭಾವದಲ್ಲಿ ರಕ್ಷಣಾತ್ಮಕವಾಗಿ ಉಳಿದು ಮುಂದುವರಿದವುಗಳಾಗಿವೆ. ಈ ರಕ್ಷಣಾತ್ಮಕ ಎಂಬುದರ ಅರ್ಥವು, ಈಗಾಗಲೇ ಅಸ್ತಿತ್ವದಲ್ಲಿರುವ ಅಲ್ಲಿನ ಅವರ ಬದುಕು ಮತ್ತು ಕಠಿಣ ಪರಿಶ್ರಮದಿಂದ ಗಳಿಸಿರುವ ಪ್ರಜಾಪ್ರಭುತ್ವದ ಹಕ್ಕುಗಳನ್ನು ಸಂರಕ್ಷಿಸುವುದು ಎಂಬುದಾಗಿದೆ. ಆದಾಗ್ಯೂ, ಈ ಹೋರಾಟಗಳು ಸಾಮ್ರಾಜ್ಯಶಾಹಿ ಮತ್ತು ತೀವ್ರಗೊಂಡಿರುವ ಬಂಡವಾಳಶಾಹಿ ಶೋಷಣೆಯ ವಿರುದ್ಧವಾಗಿ ಪ್ರಬಲ ಪ್ರತಿರೋಧ ಕಟ್ಟುವ ಮೂಲ ಉದ್ದೇಶವನ್ನೂ ಹೊಂದಿವೆ. ಬಂಡವಾಳಶಾಹಿಗೆ ಪರ್ಯಾಯವಾದ ರಾಜಕೀಯವನ್ನು ಕಟ್ಟಿ ಬಲಗೊಳಿಸುವುದನ್ನು, ಕಮ್ಯೂನಿಸ್ಟ್ ಪಕ್ಷಗಳು ಮತ್ತು ಎಡಶಕ್ತಿಗಳು ಮಾಡಬೇಕಿದ್ದು, ಜನರಲ್ಲಿ ಬೆಳೆಯುತ್ತಿರುವ ಅತೃಪ್ತಿಗಳನ್ನು ಒಗ್ಗೂಡಿಸಿ, ಅವರ ಹೋರಾಟಗಳನ್ನು ಚುರುಕುಗೊಳಿಸಿ, ಬಂಡವಾಳಶಾಹಿ ವಿರುದ್ಧದ ಈ ಪ್ರತಿದಾಳಿಯ ನೇತೃತ್ವ ವಹಿಸಲು ದುಡಿಯುವ ವರ್ಗವನ್ನು ಅಣಿಗೊಳಿಸದಿದ್ದಲ್ಲಿ, ನಿರ್ದಯವಾದ ಈ ಬಂಡವಾಳಶಾಹಿ ಶೋಷಣೆಯ ಸವಾಲನ್ನು ಎದುರಿಸಲು ಸಾಧ್ಯವಾಗುವುದಿಲ್ಲ.

### ಉಪ ಸಂಹಾರ

ಒಟ್ಟಾರೆಯಾಗಿ, ವಿಶ್ವದ ಈ ಎಲ್ಲಾ ಬೆಳವಣಿಗೆಗಳು, ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿನ ಜಾಗತೀಕರಣ ಪ್ರಕ್ರಿಯೆಯು ಅದರ ನವ ಉದಾರವಾದಿ ಅಜೆಂಡಾದ ಜೊತೆಗೆ ವಿಶ್ವದಾದ್ಯಂತ ಇರುವ ದುಡಿಯುವ ವರ್ಗದ ಮೇಲೆ ಹೆಚ್ಚು ಹೆಚ್ಚು ಹೊರೆಯ ಹೇರಿಕೆಯನ್ನು ಮುಂದುವರಿಸುತ್ತದೆ ಎಂಬ ಸತ್ಯವನ್ನು ಮತ್ತೊಮ್ಮೆ ಧೃಢಪಡಿಸಿವೆ. ಪ್ರಸಕ್ತ ಆರ್ಥಿಕ ಕುಸಿತದಿಂದ ಹೊರಬರುವ ಅದರ ಪ್ರಯತ್ನಗಳ ಭಾಗವಾಗಿ ತನ್ನ ಜಾಗತಿಕ ಯಜಮಾನಿಕೆಯನ್ನು ಇನ್ನಷ್ಟು ಬಲಗೊಳಿಸಿಕೊಳ್ಳಲು ಅಮೇರಿಕಾ ಸಾಮ್ರಾಜ್ಯಶಾಹಿ ಮಾಡುತ್ತಿರುವ ಪ್ರಯತ್ನಗಳು, ಸ್ವಾಭಾವಿಕವಾಗಿಯೇ ವಿಶ್ವದ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನೂ ಉಂಟು ಮಾಡುತ್ತಿವೆ. ತನ್ನ ಯಜಮಾನಿಕೆಯನ್ನು ಬಲಪಡಿಸಿಕೊಳ್ಳುವ ಅಮೇರಿಕಾದ ಪ್ರಯತ್ನವು ಯೂರೋಪಿನ ಮೇಲೆ ರಷ್ಯಾದ ಪ್ರಭಾವವನ್ನು ತಗ್ಗಿಸುವುದರ ಮೇಲೆ ಅವಲಂಬಿತವಾಗಿದೆ. ಜೊತೆಗೆ ಚೀನಾದ ಬೆಳವಣಿಗೆಗೆ ತಡೆಯೊಡ್ಡುವುದೂ ಕೂಡಾ ಜಗತ್ತಿನ ಮೇಲೆ ಯಜಮಾನಿಕೆ ಮುಂದುವರೆಸಲು ಅಮೇರಿಕಾ ಸಾಮ್ರಾಜ್ಯಶಾಹಿಗೆ ಅಗತ್ಯವಾಗಿದೆ.

ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಅವಿಭಾಜ್ಯ ಅಂಗವಾಗಿರುವ ಸಿಪಿಐ(ಎಂ) ಜಾಗತಿಕ ಹೋರಾಟಕ್ಕೆ ತನ್ನ ಕೊಡುಗೆಯನ್ನು ನೀಡುವುದರ ಮೂಲಕ ಭಾರತದಲ್ಲಿ ತನ್ನನ್ನೂ ತಾನು ಬಲಗೊಳಿಸಿಕೊಳ್ಳಬೇಕಿದೆ. ಜೊತೆಗೆ ನಮ್ಮ ಸಾರ್ಮರ್ಥ್ಯವನ್ನು ಇನ್ನಷ್ಟು ಉತ್ತಮವಾಗಿ ಬೆಳೆಸಿಕೊಳ್ಳುವ ಮೂಲಕ ಭಾರತದ ಜನರು ತಮ್ಮ ಮೇಲಿನ ಆರ್ಥಿಕ, ರಾಜಕೀಯ ಮತ್ತಿತರ ಆಕ್ರಮಣಗಳ ವಿರುದ್ಧ ನಡೆಸುವ ಪ್ರಮುಖ ಪ್ರತಿಭಟನೆಗಳನ್ನು ವ್ಯಾಪಕ ಹಾಗೂ ಬಲಗೊಳಿಸಬೇಕಿದೆ.

## ರಾಷ್ಟ್ರೀಯ ಪರಿಸ್ಥಿತಿ

ಜೂನ್ 2016 ರಲ್ಲಿ ನಡೆದ ಕೇಂದ್ರ ಸಮಿತಿಯ ನಂತರದ ಪ್ರಮುಖ ರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳನ್ನು ಅವಲೋಕಿಸಲಾಯಿತು. ಅದರಲ್ಲಿ ಕೆಲವು ಪ್ರಮುಖ ಸಂಗತಿಗಳ ಮೇಲೆ ನಾವು ಇಲ್ಲಿ ಗಮನ ಕೇಂದ್ರೀಕರಿಸಿದ್ದೇವೆ.

ಒಟ್ಟಿನಲ್ಲಿ, ಈ ಅವಧಿಯಲ್ಲಿ ಜನಸಾಮಾನ್ಯರ ಜೀವನಾಧರಕ್ಕೆ ಸಂಬಂಧಪಟಂತೆ ಹೇಳುವುದಾದರೆ, ಅದು ಸರ್ವತೋಮುಖವಾಗಿ ಹದಗೆಟ್ಟಿದೆ. ಆರ್ಥಿಕ ಹೆಚ್ಚೆಚ್ಚು ಆಳವಾದ ಬಿಕ್ಕಟ್ಟಿನ

ಪ್ರಪಾತಕ್ಕೆ ಬೀಳುತ್ತಿದ್ದು, ಬಹುಸಂಖ್ಯಾತ ಜನರ ಮೇಲೆ ಹೊರಲಾಗದ ಹೊರೆಯನ್ನು ಹೊರಿಸುತ್ತಿದೆ. ದೇಶದ ವಿದೇಶಾಂಗ ನೀತಿ ಅಸ್ತವ್ಯಸ್ತಗೊಂಡಿದೆ, ಅದಕ್ಕಿಂತ ಮುಖ್ಯವಾಗಿ ನಮ್ಮ ಸಾಮಾಜಿಕ ಹಂದರವನ್ನು ಬಹಳ ತತ್ಪರತೆಯಿಂದ ಹರಿದು ಛಿದ್ರಗೊಳಿಸಲಾಗುತ್ತಿದೆ.

## ಜನರ ಮೇಲೆ ಹೆಚ್ಚುತ್ತಿರುವ ಆರ್ಥಿಕ ಹೊರೆ

ಬಿ.ಜೆ.ಪಿ.ಸರಕಾರದ ಪ್ರಕಾರ ಈ ವರ್ಷದ ಜಿ.ಡಿ.ಪಿ. ದರ 7.1% ಇದೆ. ಜಿಡಿಪಿಯ ಉನ್ನತ ಬೆಳವಣಿಗೆಯ ಬಗ್ಗೆ ಹೇಳಿಕೊಳ್ಳಲಿ, ವಾಸ್ತವಾಂಶಗಳು ಬೇರೆಯೇ ಹೇಳುತ್ತಿವೆ. ಈ ಅಂಕಿ–ಅಂಶಗಳು ಸಂದೇಹಾಸ್ಪದ ಎಂದು ಹಿಂದೆಯೇ ನಾವು ಟಿಪ್ಪಣಿ ಮಾಡಿದ್ದೆವು. ಈಗ ಅಂತರರಾಷ್ಟ್ರೀಯ ಏಜೆನ್ಸಿಗಳು ಕೂಡ ಅದನ್ನು ದೃಢಪಡಿಸಿವೆ. ದೇಶದ ಜಿ.ಡಿ.ಪಿ. ಬೆಳವಣಿಗೆ ದರ ಬಿ.ಜೆ.ಪಿ. ತನ್ನ ಹೊಸ ಮಾಪಕ ಪ್ರಕಾರ ಹೇಳುತ್ತಿರುವ 7.1% ಗೆ ಬದಲಾಗಿ ಹಿಂದಿನ ದರ ಮಾಪಕಗಳ ಅನುಸಾರ ನೋಡಿದರೆ 4.3ಶೇ. ಆಗುತ್ತದೆ ಎಂದು ಫೈನಾನ್ಷಿಯಲ್ ಟೈಮ್ಸ್ ಹೇಳಿದೆ.

ಭಾರತದ ಉದ್ದಿಮೆಗಳನ್ನು ತೀವ್ರ ಬಿಕ್ಕಟ್ಟಿನ ಪರಿಸ್ಥಿತಿ ಆವರಿಸಿಕೊಂಡಿದೆ ಎಂದು ಇತ್ತೀಚಿನ ಅಂಕಿ ಅಂಶಗಳು ಹೇಳುತ್ತಿವೆ. ಜುಲೈ ತಿಂಗಳಿನ ಔದ್ಯೋಗಿಕ ಉತ್ಪಾದನೆಯ ಸೂಚ್ಯಂಕ –2.4% ಅಂದರೆ ನಕಾರಾತ್ಮಕ ಬೆಳವಣಿಗೆ ತೋರಿಸುತ್ತಿದೆ. ಉದ್ಯೋಗಾವಕಾಶ ಕಲ್ಪಿಸುವಲ್ಲಿ ನಿರ್ಣಾಯಕವಾದ ಸರಕು ತಯಾರಿಕಾ ರಂಗದಲ್ಲಿ –3.4% ಬೆಳವಣಿಗೆ ದಾಖಲಾಗಿದೆ. ಈ ವಿಭಾಗದ 22 ಕೈಗಾರಿಕೆಗಳ ಪೈಕಿ 12 ಕೈಗಾರಿಕೆಗಳಲ್ಲಿ ಏರಿಕೆಯ ಬದಲು ಇಳಿಕೆಯೇ ಆಗಿದೆ. ಬಂಡವಾಳ ಸರಕು ಉತ್ಪಾದನೆಯ ಕುಸಿತದ ಪ್ರಮಾಣ ಜೂನ್ ತಿಂಗಳಿನಲ್ಲಿ –16.5% ಇದ್ದುದು ಜುಲೈ ತಿಂಗಳಿನ ಹೊತ್ತಿಗೆ –29.6% ಆಗಿರುವುದು ಕರಾಳ ಭವಿಷ್ಯದ ಮುನ್ಸೂಚನೆಯಾಗಿದೆ. ಬಂಡವಾಳ ಸರಕು ಉತ್ಪಾದನೆಯಲ್ಲಿ ಕುಸಿತವೆಂದರೆ ಹೊಸ ಹೂಡಿಕೆಗಳಾಗುತ್ತಿಲ್ಲ ಎಂದೇ ಅರ್ಥ.

ಉದ್ದಿಮೆಗಳ ಬಿಕ್ಕಟ್ಟಿನ ಸ್ಥಿತಿಯನ್ನು ಆರ್ಥಿಕತೆಯ ವಿವಿಧ ನಿರ್ಣಾಯಕ ವಿಭಾಗಗಳ ಚಟುವಟಿಕೆಯ ಆಧಾರದಲ್ಲಿ ಗ್ರಹಿಸಬಹುದು. ವಿದ್ಯುತ್ ಉತ್ಪಾದನೆ ಔದ್ಯಮಿಕ ಕಾರ್ಯಚಟುವಟಿಕೆಗಳ ಒಂದು ಪ್ರಧಾನ ಸೂಷಕ. ಈ ಕ್ಷೇತ್ರದಲ್ಲಿ 2016 ರ ಮೊದಲ ಆರು ತಿಂಗಳಿನಲ್ಲಿ 9% ಬೆಳವಣಿಗೆಯ ದರ ದಾಖಲಾಗಿತ್ತು. ಜುಲೈ ಹೊತ್ತಿಗೆ ಅದು 1.6% ಗೂ ಮತ್ತು ಆಗಸ್ಟ್ ಹೊತ್ತಿಗೆ 0.15% ಗೂ ಇಳಿಯಿತು. ಕಳೆದ ಏಳು ವರ್ಷಗಳಲ್ಲಿ ಇದು ಅತ್ಯಂತ ಕಡಿಮೆ ಬೆಳವಣಿಗೆಯ ದರವೆಂದು ಕೇಂದ್ರೀಯ ವಿದ್ಯುತ್ ಪ್ರಾಧಿಕಾರ ಹೇಳುತ್ತಿದೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ಇಡೀ ಇಂಧನ ಕ್ಷೇತ್ರದಲ್ಲಿ ಕಾಣಿಸುತ್ತಿದೆ. ರೈಲ್ವೇ ವಲಯ ಗಂಭೀರ ಬಿಕ್ಕಟ್ಟಿನಲ್ಲಿದೆ. ಜುಲೈ ತಿಂಗಳಿನ ಅದರ ಸರಕು ಸಾಗಾಣಿಕೆ ಆದಾಯ 9.68% ರಷ್ಟು ಕುಸಿದಿದೆ. ಒಟ್ಟು ಸರಕು ಸಾಗಾಣಿಕೆಯಲ್ಲಿ ಇಳಿಕೆಯೆಂದರೆ ಔದ್ಯೋಗಿಕ ಉತ್ಪಾದನೆಯಲ್ಲಿ ಕುಸಿತವಾಗಿದೆ ಎಂದರ್ಥ. ಆದಾಯದ ಈ ನಷ್ಟವನ್ನು ತುಂಬಿಸಲು ಪ್ರಯಾಣಿಕರ ಮೇಲೆ ಹೊರೆ ಹೊರಿಸಲಾಗುತ್ತಿದೆ. ಇದರಲ್ಲಿ ಇತ್ತೀಚಿನದೆಂದರೆ ರೈಲ್ವೆ ವಿಭಾಗ ಆರಂಭಿಸಿರುವ 'ಸರ್ಜ್ ಪ್ರೈಸಿಂಗ್' (ಅಂದರೆ ಉಕ್ಕೇರುವ ಬೆಲೆ ನಿರ್ಧಾರ, ಬೇಡಿಕೆ ಹೆಚ್ಚಿದಂತೆ ದರಗಳನ್ನೂ ಹೆಚ್ಚಿಸುವ ಪದ್ಧತಿ–ಅನು). ಇದರ ನಿಜವಾದ ಅರ್ಥವೆಂದರೆ 90% ಪ್ರಯಾಣಿಕರ ಮೇಲೆ ಒಂದು ಬೃಹತ್ ದರ ಏರಿಕೆ.

ಕೈಗಾರಿಕೆಗಳಿಗೆ ಬ್ಯಾಂಕುಗಳಿಂದ ನೀಡಲಾಗುತ್ತಿರುವ ಸಾಲ ಸೌಲಭ್ಯದಲ್ಲಿನ ತೀವ್ರ ಇಳಿಕೆ ಕೂಡ ಉದ್ಯಮ ರಂಗದಲ್ಲಿನ ಬಿಕ್ಕಟ್ಟಿಗೆ ಮತ್ತೊಂದು ನಿದರ್ಶನವಾಗಿದೆ, ಈ ಎಲ್ಲವೂ ಉದ್ಯೋಗಾವಕಾಶದ ಮೇಲೆ ತೀವ್ರ ಪರಿಣಾಮ ಬೀರುತ್ತವೆ.

ಸಂಸತ್ತಿನಲ್ಲಿ ಸರ್ಕಾರವೇ ಒಪ್ಪಿಕೊಂಡಂತೆ 2015 ರಲ್ಲಿ ಬೃಹತ್ ಉದ್ದಿಮೆಗಳಲ್ಲಿ 1.35 ಲಕ್ಷ ಉದ್ಯೋಗವನ್ನು ಸೃಷ್ಟಿಸಲಾಗಿದೆ. ಆದರೆ ಇದಕ್ಕೆ ಪ್ರತಿಯಾಗಿ ವಾರ್ಷಿಕವಾಗಿ 1.3 ಕೋಟಿ

ಯುವ ಉದ್ಯೋಗಾಕಾಂಕ್ಷಿಗಳು ಔದ್ಯೋಗಿಕ ಮಾರುಕಟ್ಟೆಗೆ ಸೇರ್ಪಡೆಯಾಗುತ್ತಾರೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಮೋದಿ ಚುನಾವಣಾ ಪ್ರಚಾರದಲ್ಲಿ ಭರವಸೆ ಇತ್ತಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

## ಕೃಷಿ ಬಿಕ್ಕಟ್ಟು :

ಕೃಷಿ ಬಿಕ್ಕಟ್ಟು ಉಲ್ಬಣಿಸುತ್ತಿದೆ. ಅಕ್ಟೋಬರ್ 2015 ರಿಂದ ಗ್ರಾಮೀಣ ನಿಜ ಕೂಲಿಗಳು ಇಳಿಕೆಯ ಗತಿಯಲ್ಲಿದೆ. ಬರದ ಕಾಲದಲ್ಲಿ ಈ ಸ್ಥಿತಿ ಎಂದರೆ ಅದು ಗ್ರಾಮೀಣ ದುಃಸ್ಥಿತಿಯ ದಾರುಣತೆಯನ್ನು ಸೂಚಿಸುತ್ತದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಪ್ರಕಾರ 2014 ರಲ್ಲಿ ಕೃಷಿ ದಂಗೆ 628 ಇದ್ದುದು 2015 ರ ಹೊತ್ತಿಗೆ ಇನ್ನೂ 327% ಏರಿಕ ಕಂಡಿದೆ.

2014 ರಲ್ಲಿ 5650 ಇದ್ದ ರೈತರ ಆತ್ಮಹತ್ಯೆಗಳ ಸಂಖ್ಯೆ 2015 ರ ಹೊತ್ತಿಗೆ 8000ನ್ನೂ ದಾಟಿ, 40% ಹೆಚ್ಚಳವನ್ನು ಕಂಡಿದೆ.

ರೈತರ ಉತ್ಪಾದನಾ ವೆಚ್ಚದಲ್ಲಿ ತೀವ್ರ ಏರಿಕೆ, ಅದಕ್ಕನುಗುಣವಾಗಿ ಕನಿಷ್ಟ ಬೆಂಬಲ ಬೆಲೆಯೂ ಸಿಗದ ಸ್ಥಿತಿಗಳಿಂದಾಗಿ ಬೇಸಾಯ ನಡೆಸುವ ಕೃಷಿ ಕ್ಷೇತ್ರವೇ ಕಡಿಮೆಯಾಗುತ್ತಿದೆ. ಕೃಷಿ ಬೆಲೆ ಮತ್ತು ದರ ಆಯೋಗದ ಅಂದಾಜಿನಂತೆ ಕೃಷಿ ಉತ್ಪನ್ನಗಳಿಗೆ ಮೂಲ ಖರ್ಚಿನ 1.5 ಪಟ್ಟು ಕನಿಷ್ಟ ಬೆಂಬಲ ಬೆಲೆ ನೀಡುವುದಾಗಿ ಮೋದಿ ಪ್ರಚಾರ ಭಾಷಣದಲ್ಲಿ ಭರವಸೆ ನೀಡಿದ್ದನ್ನು ನೆನಪಿಸಿಕೊಳ್ಳಬೇಕಾಗಿದೆ.ಆಹಾರ ಧಾನ್ಯಗಳ ಉತ್ಪಾದನೆಯ ಪ್ರಮಾಣ ಇಳಯುತ್ತಲೇ ಇದೆ, ಕಳೆದ ಕೇಂದ್ರ ಸಮಿತಿ ಸಭೆಯಲ್ಲಿ ಗಮನಿಸಿದ್ದಕ್ಕಿಂತಲೂ ಕಡಿಮೆಯಾಗುತ್ತದೆ.

ಇಂತಹ ಸಂದರ್ಭದಲ್ಲಿ ಸರ್ಕಾರವು ನಮ್ಮ ವಿಶಾಲ ಗ್ರಾಮೀಣ ಜನತೆಯ ನೆರವಿಗೆ ಧಾವಿಸಲು ನಿರಾಕರಿಸುತ್ತಿದೆ.ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಬರಪೀಡಿತರಿಗೆ ತುರ್ತು ಪರಿಹಾರ ನೀಡುವಂತೆ ಕರೆ ನೀಡಿದೆಯಾದರೂ ಆ ಜನರಿಗೆ ನಿಜವಾಗಿ ತಲುಪಿರುವುದು ತೀರ ಕಡಿಮೆ. ಮನ್‌ರೇಗಾದಲ್ಲಿ ಕೆಲಸ ಮಾಡಿದವರಿಗೆ ಕಾನೂನು ಪ್ರಕಾರ ಕೊಡಬೇಕಾದ ಕೂಲಿ ಪಾವತಿಯಲ್ಲೂ ಸುಪ್ರಿಂ ಕೋರ್ಟ್ ಮಧ್ಯಪ್ರವೇಶದ ನಂತರವೂ ಅಗತ್ಯವಾದ ಸಂಪನ್ಮೂಲವನ್ನು ನಿರಾಕರಿಸಲಾಗುತ್ತಿದೆ. ಮನ್ ರೇಗಾದಲ್ಲಿ ನೋಂದಾಯಿಸಿಕೊಂಡ 21.8 ಕೋಟಿ ಕೂಲಿಕಾರರಲ್ಲಿ 10.98 ಕೋಟಿ ಕೂಲಿಕಾರರು ಸಕ್ರಿಯ ಕೆಲಸಗಾರರು. ಆಧಾರ್ ಕಾರ್ಡ್ ಹೊಂದಿದವರು ಮಾತ್ರವೇ ಬ್ಯಾಂಕು ಖಾತೆಗಳ ಮೂಲಕ ನೇರ ಕೂಲಿ ಪಡೆದುಕೊಳ್ಳಬಹದು ಎಂಬ ಈ ಧೋರಣೆಯನ್ನು ಈ ಬಿ.ಜೆ.ಪಿ ಸರ್ಕಾರ ಜಾರಿ ಮಾಡಿದೆ. 8.07 ಕೋಟಿ ಮನ್‌ರೇಗಾ ಕೂಲಿಕಾರರು ಮಾತ್ರ ಆಧಾರ್‌ಗೆ ಜೋಡಣೆಯಾದ ಬ್ಯಾಂಕ್ ಖಾತೆಗಳನ್ನು ಪಡೆದವರಾಗಿದ್ದು ಉಳಿದವರಿಗೆ ಅವರು ಕಾನೂನು ಪ್ರಕಾರ ಪಡೆಯಬೇಕಾದ ಕೂಲಿಯನ್ನು ಕೊಡುತ್ತಲೇ ಇಲ್ಲ.

ಬ್ಯಾಂಕ್ ಖಾತೆಗಳಿಗೆ ಈ ಆಧಾರ–ಜೋಡಣೆಯಾದ ವರ್ಗಾವಣೆ ಗಂಭೀರ ದೋಷಗಳಿಂದ ತುಂಬಿದೆ. ಇದರಿಂದಾಗಿ ಬಹಳಷ್ಟು ಜನಗಳು ಮೂಲಸೇವೆಗಳಿಂದಲೂ ವಂಚಿತರಾಗುತ್ತಿದ್ದಾರೆ. ಇದು ಪಡಿತರ ವ್ಯವಸ್ಥೆಯಿಂದ ತಮಗೆ ಕಾನೂನು ಪ್ರಕಾರ ಸಿಗಬೇಕಾದ ಪೂರೈಕೆಗಳನ್ನು ಪಡೆಯಲಾರದಂತೆ ತಡೆದು ನಿಲ್ಲಿಸಿದೆ. ಬೆರಳ ಗುರುತು ಯಂತ್ರಗಳು ಅರ್ಹ ಜನಗಳ ಬೆರಳು ಗುರುತಗಳನ್ನು ಗುರುತಿಸದೇ ಇರುವುದರಿಂದ ದೊಡ್ಡ ಪ್ರಮಾಣದಲ್ಲಿ ಜನರಿಗೆ ರೇಷನ್ ಪೂರೈಕೆಯನ್ನು ನಿರಾಕರಿಸಲಾಗುತ್ತಿದೆ.

ಕನಿಷ್ಟ ಜೀವನಾವಶ್ಯ ವಸ್ತುಗಳು ಬಹು ಸಂಖ್ಯಾತರಿಗೆ ಲಭ್ಯವಾಗಬೇಕಾದರೆ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸಿದರೆ ಮಾತ್ರವೇ ಸಾಧ್ಯ ಎಂದು ನಾವು ಆಗ್ರಹಿಸುತ್ತ ಬಂದಿದ್ದೇವೆ. ಈ ಬಿ.ಜೆ.ಪಿ ಸರ್ಕಾರ ಶತಾಯ ಗತಾಯ ಆ ದಿಕ್ಕಿನಲ್ಲಿ ಸಾಗಲು ನಿರಾಕರಿಸುತ್ತಿದೆ.

## ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ

ಗಗನಕ್ಕೇರುತ್ತಿರುವ ಜೀವನಾವಶ್ಯಕ ವಸ್ತಗಳ ಅದರಲ್ಲಿಯೂ ಆಹಾರ ಪದಾರ್ಥಗಳ ಬೆಲೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಜನರ ಮೇಲೆ ದ್ವಿಮುಖ ಪ್ರಹಾರ ಮಾಡುತ್ತಿವೆ. ಅಧಿಕೃತ ಅಂಕಿ ಸಂಖ್ಯೆಗಳ ಪ್ರಕಾರ ಆಗಸ್ಟ್ ತಿಂಗಳಿನಲ್ಲಿ ನಿರುದ್ಯೋಗದ ಪ್ರಮಾಣ ನಗರ ಪ್ರದೇಶದಲ್ಲಿ 11.24% ಮತ್ತು ಗ್ರಾಮೀಣ ಪ್ರದೇಶದಲ್ಲಿ 9.18% ಇತ್ತು. ಎಲ್ಲರಿಗೂ ಗೊತ್ತಿರುವಂತೆ ಇದು ಸರಿಯಾದ ಅಂದಾಜಲ್ಲ. ಸ್ವಯಂ ಉದ್ಯೋಗವೆಂಬ ಮಾನದಂಡವೊಂದನ್ನು ಬಳಸಿ ಪ್ರಮಾಣದ ನಿರುದ್ಯೋಗ ಮತ್ತು ಅರೆ ಉದ್ಯೋಗದ ದೊಡ್ಡ ಪ್ರಮಾಣವನ್ನು ಮುಚ್ಚಿಹಾಕಲಾಗುತ್ತಿದೆ. ವಾಸ್ತವದಲ್ಲಿ ನಿರುದ್ಯೋಗದ ಪ್ರಮಾಣ ಅಧಿಕೃತ ಅಂಕಿ ಸಂಖ್ಯೆಗಳಿಗಿಂತ ಎಷ್ಟೋ ಪಟ್ಟು ಹೆಚ್ಚಿದೆ.

ಬೆಲೆ ಏರಿಕೆಯ ಹೊರೆ ಜನರ ಮೇಲೆ ನಿರಂತರವಾಗಿ ಹೆಚ್ಚುತ್ತಿದೆ. ಸಗಟು ಬೆಲೆಯಾಧಾರಿತ ಹಣದುಬ್ಬರ ಸತತ ಐದು ತಿಂಗಳಿಂದ ಏರುತ್ತಲೇ ಇದೆ. ಆಗಸ್ಟ್ ತಿಂಗಳಿನಲ್ಲಿ ಸಗಟು ಬೆಲೆ ಏರಿಕೆ ಸೂಚ್ಯಂಕವನ್ನು ಅಧಿಕೃತವಾಗಿ 3.74% ಎಂದು ಘೋಷಿಸಲಾಗಿದೆ. ಆಹಾರ ಪದಾರ್ಥಗಳ ಬೆಲೆಗಳು 8.23%, ದ್ವಿದಳ ಧಾನ್ಯಗಳು 34.55% ಆಲೂಗಡ್ಡೆ 66.72% ಸಕ್ಕರೆ 35.36%ನಷ್ಟು ಏರಿಕೆ ಕಂಡಿವೆ.

ಕಟು ವಾಸ್ತವವನ್ನು ಮರೆಮಾಚುವ ಸರಕಾರದ ಪ್ರಯತ್ನಗಳು ನಾಚಿಕೆಯಿಲ್ಲದೆ ಮುಂದುವರೆಯುತ್ತಿದೆ. ಅಭಿವೃದ್ಧಿ ದರಗಳ ಬಗ್ಗೆ ಬಗ್ಗೆ ಅದಭುತ ದಾವೆಗಳನ್ನು ಮುಂದಿಡಲಾಗುತ್ತಿದೆ. ಅದರಲ್ಲಿ ಇತ್ತೀಚಿನ ಸಂಗತಿಯೆಂದರೆ ಅಂದಾಜು ಬಡತನದ ಬಗ್ಗೆ ಪ್ರಧಾನ ಮಂತ್ರಿಗಳು ಕೈಯಾರೆ ಹೆಕ್ಕಿ ರಚಿಸಿದ ನೀತಿ ಆಯೋಗ ಕೊಡಮಾಡುತ್ತಿರುವ ಬಡತನದ ಅಂದಾಜುಗಳು. ಭಾರತದಲ್ಲಿ ಬಡತನವನ್ನು ಅಂದಾಜಿಸುವುದು ದುಸ್ತರವೆಂಬ ತೀರ್ಮಾನಕ್ಕೆ ಬಂದಿರುವ ನೀತಿ ಆಯೋಗ, ಬಡತನವನ್ನು ಅಂದಾಜಿಸಲು ಇನ್ನೂ ಒಂದು ಆಯೋಗ ನೇಮಿಸುವಂತೆ ಸರ್ಕಾರಕ್ಕೆ ಸಲಹೆ ಮಾಡಿದೆ. ಈ ಹಿಂದೆ ತೆಂಡೂಲ್ಕರ್ ಸಮಿತಿ ಅತ್ಯಂತ ಮೋಸದ ನಿರೂಪಣೆಗಳ ಮೂಲಕ 27ಕೋಟಿ ಭಾರತೀಯರು ಬಡತನದಲ್ಲಿದ್ದಾರೆಂದು ಅಂದಾಜಿಸಿದ್ದರೆ ರಂಗರಾಜನ್ ಸಮಿತಿಯು 36. ಕೋಟಿ ಎಂದು ಅಂದಾಜಿಸಿತ್ತು. ಈಗ ಈ ಸರಕಾರ ದೇಶದಲ್ಲಿರುವ ಬಡತನದ ಅಂದಾಜು ಮಾಡಲೇ ನಿರಾಕರಿಸುತ್ತಿದೆ. ಬಿ.ಜೆ.ಪಿ ಸರಕಾರದ ಆಡಳಿತದಲ್ಲಿ ಬಡತನ ನಿರ್ಮೂಲನೆಯಾಗಿದೆ ಎಂದು ಸೂಚಿಸಬಯಸುತ್ತಿದ್ದಾರೆ.

## ಯೋಜನಾ ಪ್ರಕ್ರಿಯೆಗೆ ತಿಲಾಂಜಲಿ

ಯೋಜನಾ ಆಯೋಗವನ್ನು ತೆಗೆದು ಹಾಕಿದ ನಂತರ ಈಗಿನ ವರದಿಯ ಪ್ರಕಾರ ಸರಕಾರ ಯೋಜನಾ ಪ್ರಕ್ರಿಯೆಗೇ ತಿಲಾಂಜಲಿ ನೀಡಲು ಪ್ರಯತ್ನಿಸುತ್ತಿದೆ. ಮುಂದಿನ ಪಂಚ ವಾರ್ಷಿಕ ಯೋಜನೆ ಅಥವ ವಾರ್ಷಿಕ ಯೋಜನೆಗಳನ್ನೂ ಕೈಬಿಡಲಾಗಿದೆ. ಯೋಜನಾ ಪ್ರಕ್ರಿಯೆಯನ್ನು ಕೈಬಿಡುವುದು ಎಂದರೆ ಉಪ ಯೋಜನೆಗಳನ್ನೂ ಕೈಬಿಡಲಾಗುತ್ತದೆ ಎಂದೇ ಅರ್ಥ. ಇದು ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ಈ ವರ್ಗಗಳಿಗೆ ಸಂಬಂಧಿಸಿದ ಉಪ ಯೋಜನೆಗಳ ಸಮರ್ಪಕ ಜಾರಿ ಮತ್ತು ಸರಿಯಾದ ಧನ ವಿನಿಯೋಗವಾಗಬೇಕೆಂದು ನಾವು ಒತ್ತಾಯಿಸುತ್ತಲೇ ಬಂದಿದ್ದೇವೆ. ಈಗ ಈ

ಉಪಯೋಜನೆಗಳನ್ನು ಕೈಬಿಡಬಹುದು, ಮತ್ತು ಇದರ ಮೂಲಕ ಆದಿವಾಸಿ, ದಲಿತ ಜನಾಂಗಗಳಿಗೆ ಸಿಗುತ್ತಿದ್ದ ಅಲ್ಪ–ಸ್ವಲ್ಪ ಪರಿಹಾರವೂ, ಅಲ್ಪ–ಸ್ವಲ್ಪ ಅಭಿವೃದ್ಧಿ ಚಟುವಟಿಕೆಗಳೂ ನಿಂತು ಹೋಗುತ್ತವೆ.

ಇದೇ ರೀತಿಯಲ್ಲಿ ಎಲ್ಲ ಅಭಿವೃದ್ಧಿ ಹಣ ನೀಡಿಕೆಗಳ 10% ಈಶಾನ್ಯ ಭಾರತದ ರಾಜ್ಯಗಳಿಗೆ ಮೀಸಲಿಡುವ ವಚನವನ್ನೂ ಕೈಬಿಡಲಾಗುತ್ತಿದೆ, ಅದನ್ನು ಜಾರಿಮಾಡಲೋಸುಗವೇ ಸೃಷ್ಟಿಮಾಡಿದ ಒಂದು ಪ್ರತ್ಯೇಕ ಸಚಿವಾಲಯ ಮತ್ತು ಇಲಾಖೆ ಕೂಡ ತೆರವಾಗಲಿದೆ. ಇದು ಈಶಾನ್ಯ ಪ್ರದೇಶದಲ್ಲಿ ಅತ್ಯಗತ್ಯವಾಗಿದ್ದ ಅಭಿವೃದ್ಧಿ ಯೋಜನೆಗಳ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರಲಿದೆ. ಇದು ಜನರ ಅಸಂತುಷ್ಟಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದಷ್ಟೇ, ಜತೆಗೆ ಜನಗಳಲ್ಲಿ ಪರಕೀಯ ಭಾವ ಇನ್ನಷ್ಟು ಹೆಚ್ಚಿ ಅದರೊಂದಿಗೆ ಉಂಟಾಗುವ ಸಮಸ್ಯೆಗಳು ಕೂಡ ಉಲ್ಬಣಿಸುತ್ತವೆ.

ಪ್ರಧಾನ ಮಂತ್ರಿಗಳು ತಮ್ಮ ಹಲವು ಸಾಧನೆಗಳ ಬಗ್ಗೆ ಬಡಾಯಿಗಳನ್ನು ಮುಂದುವರೆಸುತ್ತಲೇ ಇದ್ದಾರೆ. ಅವೆಲ್ಲ ಮೋಸಗಳು ಎಂದು ಬಯಲಾಗುತ್ತಿವೆ. 2014 ರಲ್ಲಿ 24.1 ಕೋಟಿ ಬ್ಯಾಂಕ್ ಖಾತೆಗಳನ್ನು ತೆಗೆಯಲಾಗಿದೆಯೆಂದು ಪ್ರಧಾನ ಮಂತ್ರಿಗಳು ಹೆಗ್ಗಳಿಸಿಕೊಳ್ಳುತ್ತಿರುವ ಜನ್ ಧನ್ ಯೋಜನೆಯಲ್ಲಿ ಮುಕ್ಕಾಲು ಪಾಲು ಶೂನ್ಯ ಠೇವಣಿ ಖಾತೆಗಳಾಗಿವೆ. ಎಂದು ಕಂಡು ಬಂದಿದೆ. ಇವುಗಳಲ್ಲಿ ಬಹುಪಾಲು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತೆರೆದವುಗಳು. ಈಗ ಶೂನ್ಯ ಠೇವಣಿ ಖಾತೆಗಳ ಸಂಖ್ಯೆಯನ್ನು ಕಡಿಮೆ ತೋರಿಸಲು ಬ್ಯಾಂಕುಗಳಿಗೆ 1 ರೂ ಠೇವಣಿಯನ್ನು ಆ ಖಾತೆಗಳಿಗೆ ಹಾಕುವಂತೆ ಹೇಳಲಾಗಿದೆ ಎಂದು ಮಾಧ್ಯಮಗಳಲ್ಲಿ ಬಯಲಾಗಿರುವ ಸಂಗತಿಗಳಿಂದ ಗೊತ್ತಾಗಿದೆ. ಇಂತಹ ಕಸರತ್ತಿನಿಂದಾಗಿ ಇಂತಹ ಖಾತೆಗಳು 2015ರಲ್ಲಿ 8.40 ಕೋಟಿ ಇದ್ದುದು ಈಗ 5.87 ಕೋಟಿಗೆ ಇಳಿದಿದೆ.

ಸಬ್ಸಿಡಿ ಪಡೆದ ಗ್ಯಾಸ್ ಸಿಲಿಂಡರ್‌ಗಳ ಗುರಿನಿರ್ದೇಶಿತ ಪೂರೈಕೆಯ ಬಗ್ಗೆ ತನ್ನ ಮನವಿಯ ಕಾರಣದಿಂದ ದೇಶಕ್ಕೆ 22000 ಕೋಟಿ ರೂಪಾಯಿಗಳ ಉಳಿತಾಯವಾಗಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಳುತ್ತಲೇ ಇದ್ದಾರೆ. ಈ ಕಟ್ಟುಕತೆಯನ್ನು ಕೂಡ ಸಿ.ಎ.ಜಿ ಬಯಲು ಮಾಡಿದೆ. ಸಬ್ಸಿಡಿಯಿಂದ ಉಳಿತಾಯವಾದ ಮೊತ್ತ ಕೇವಲ 1763 ಕೋಟಿ ರೂ.ಗಳಾಗಿದ್ದು 21552 ಕೋಟಿ ರೂಪಾಯಿಗಳ ಉಳಿತಾಯ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆದ ಇಳಿಕೆಯಿಂದ ಎಂದು ಸಿ.ಎ.ಜಿ. ತೋರಿಸಿದೆ.

ಹಾಗೆಯೇ ಗ್ರಾಮೀಣ ವಿದ್ಯುದೀಕರಣದ ಬಗ್ಗೆ ಕೆಂಪುಕೋಟೆಯ ಭಾಷಣದಲ್ಲಿ ಅವರು ನೀಡಿದ ಉದಾಹರಣೆಗಳನ್ನು ಪ್ರಧಾನ ಮಂತ್ರಿಗಳ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳಿಂದ ತೆಗೆದು ಹಾಕಲಾಗಿದೆ. ಅಧಿಕೃತ ಪ್ರಚಾರ ಮಾಧ್ಯಮಗಳ ಪ್ರಕಾರ 98.7 ಗ್ರಾಮಗಳು ಸಂಪೂರ್ಣ ವಿದ್ಯುತ್ ಸಂಪರ್ಕ ಪಡೆದಿವೆ. ಆದರೆ ಸರ್ಕಾರೀ ದಾಖಲೆಗಳು 35.73% (6.14 ಕೋಟಿ) ಗ್ರಾಮೀಣ ಮನೆಗಳಿಗೆ ವಿದ್ಯುತ್ ಸಂಪರ್ಕಗಳಿಲ್ಲ ಎಂದು ತೋರಿಸುತ್ತವೆ.

## ಸರ್ಕಾರೀ ನೌಕರರಿಗೆ ನಿರಾಶಾದಾಯಕ ವೇತನ ಹೆಚ್ಚಳ

ಸರ್ಕಾರೀ ನೌಕರರಿಗೆ ಸರ್ಕಾರ ಪ್ರಕಟಿಸಿದ ವೇತನ ಹೆಚ್ಚಳ ನಿರಾಶಾದಾಯಕವಾಗಿದೆ. 7ನೇ ವೇತನ ಆಯೋಗದ ಶಿಫಾರಸುಗಳ ಆಧಾರದಲ್ಲಿ ಮಾಡಿದ ಹೆಚ್ಚಳದಿಂದ ಒಟ್ಟು ವೇತನದಲ್ಲಿ ಕೇವಲ ಶೇ14.2% ಏರಿಕೆಯಾಗಿದೆ,ಯಾದರೂ ಕಡೆಯ ದರ್ಜೆಯ ನೌಕರರಿಗೆ ಕೈಗೆ ಬರುವ ನಿವ್ವಳ ವೇತನದಲ್ಲಿ ಆಗಿರುವ ಹೆಚ್ಚಳ ಕೇವಲ 7.4%. ಕೇಂದ್ರ ಸರಕಾರವು ಇತರ ಭತ್ಯೆಗಳ ಪರಿಷ್ಕರಣೆಯ

ತೀರ್ಮಾನ ಕೈಗೊಳ್ಳುವುದನ್ನು ತಡೆಹಿಡಿದಿದೆ. ಅತ್ಯಂತ ಕೆಳಗಿನ ದರ್ಜೆ ಮತ್ತು ಅತ್ಯಂತ ಮೇಲಿನ ವೇತನಮಾನಗಳ ನಡುವಿನ ಅನುಪಾತ ಈಗಲೂ 1:14.

## ನೌಕರರ ಭವಿಷ್ಯನಿಧಿ ಯ ಮೇಲೆ ಪ್ರಹಾರ

ದುಡಿಯುವ ಜನಈ ಹಿಂದೆ ಪಡೆಯುತ್ತಿದ್ದ ಸೌಲಭ್ಯಗಳಿಂದ ವಂಚಿತರಾಗುತ್ತಲೇ ಇದ್ದಾರೆ. ನೌಕರರ ಭವಿಷ್ಯ ನಿಧಿಯಂತಹ ಸೌಲಭ್ಯಗಳಲ್ಲಿ ಇಳಿಕೆಯಾಗಿದೆ. ನೌಕರರ ಕಠಿಣ ಪರಿಶ್ರಮದಿಂದ ಸಂಚಿತವಾದ ಭವಿಷ್ಯನಿಧಿಯ ಮೇಲೂ ಸರಕಾರ ಕಣ್ಣು ಹಾಕಿರುವುದರಿಂದ ಕಳೆದ ವರ್ಷ 8.8% ಇದ್ದ ಬಡ್ಡಿದರವನ್ನು 8.6%ಗೆ ಇಳಿಸಲಾಗಿದೆ. 8.95% ಬಡ್ಡಿ ಕೊಟ್ಟಿದ್ದರೂ ಕೂಡ 100 ಕೋಟಿಯಷ್ಟು ಹಣ ಭವಿಷ್ಯ ನಿಧಿಯಲ್ಲಿ ಉಳಿದಿರುತ್ತಿತ್ತು. ಕಾರ್ಮಿಕರ ಸ್ವಂತದ ದುಡಿಮೆಯ ಗಳಿಕೆಯಿಂದಲೂ ನ್ಯಾಯಬದ್ಧ ಪರಿಹಾರ ಪಡೆಯದಂತೆ ಈ ಸರಕಾರ ವಂಚಿಸುತ್ತಿದೆ.

## ಚಮಚಾ ಬಂಡವಾಳಶಾಹಿ

ಯಾವುದೇ ಹಗರಣವಿಲ್ಲದ ಭಾರತದ ಪ್ರಥಮ ಸರಕಾರವಿದೆಂದು ಪ್ರಧಾನ ಮಂತ್ರಿಗಳು ಮತ್ತು ಸರಕಾರ ಬೊಬ್ಬೆ ಇಡುತಿದ್ದಾರೆ. ಆದರೆ ನಿಜಸಂಗತಿಯೆಂದರೆ ತಮಗೆ ಬೇಕಾದ ಕಾರ್ಪೊರೇಟ್ ದೈತ್ಯರಿಗೆ ಅನುಕೂಲ ಒದಗಿಸಿಕೊಡುತ್ತ ಅತ್ಯಂತ ಕೆಟ್ಟ ದರ್ಜೆಯ ಚಮಚಾ ಬಂಡವಾಳಶಾಹಿಯ ಆಚರಣೆ ನಡೆಸಿರುವ ಸರಕಾರ ಇದು. ದೊಡ್ಡ ಬಂಡವಾಳಿಗರು ಬ್ಯಾಂಕುಗಳಿಂದ ಸಾಲ ಪಡೆದು ಮರುಪಾವತಿ ಮಾಡದ ಮೊತ್ತ 8.5 ಲಕ್ಷ ಕೋಟಿ ರೂಪಾಯಿಗಳು. ಮಾರ್ಚ್ 2016 ರ ವೇಳೆಗೆ ಮೊದಲ 10 ಕಾರ್ಪೊರೇಟ್ ಗುಂಪುಗಳಿಂದ ಬಾಕಿ ಇರುವ ಸಾಲದ ಮೊತ್ತ 57368 ಕೋಟಿ ರೂಪಾಯಿಗಳು.

ಸರಕಾರ ಇಂಥಹ ಸಾಲಗಳನ್ನು ಮನ್ನಾ ಮಾಡುವ ಅಥವಾ ಪುನರ್ರಚಿಸುವ ಯೋಚನೆಯಲ್ಲಿದೆ. ಇದಕ್ಕೆ ಮರು ಬಂಡವಾಳ ನೀಡಿಕೆಯ ಅಗತ್ಯವಿದೆ. ಇದಕ್ಕಾಗಿ ಸರ್ಕಾರವು ರಿಜರ್ವ್ ಬ್ಯಾಂಕಿನ ರಿಜರ್ವ್ ಫಂಡ್ ನಿಂದ ಹಣ ತೆಗೆಯುವ ಆಲೋಚನೆಯಲ್ಲಿದೆ. ದೇಶದ ಆರ್ಥಿಕ ಸ್ಥಿತಿಯನ್ನು ಸಂಪೂರ್ಣವಾಗಿ ಹದಗೆಡಿಸುವ ಈ ಪ್ರಸ್ತಾಪಕ್ಕೆ ರಿಜರ್ವ ಬ್ಯಾಂಕಿನ ಗೌರ್ನರ್ ಆಗಿದ್ದ ರಂಗರಾಜನ್‌ರವರು ಸಹಮತ ವ್ಯಕ್ತಪಡಿಸದಿರುವುದರಿಂದ ಅವರನ್ನು ಹುದ್ದೆಯಲ್ಲಿ ಮುಂದುವರೆಯಲು ಬಿಡಲಿಲ್ಲ. ಈಗ ಅವರನ್ನು ನಿವಾರಿಸಿಕೊಂಡ ಸರ್ಕಾರವು ರಿಜರ್ವ ಬ್ಯಾಂಕಿನಲ್ಲಿರುವ ಮೂಲತಃ ಜನರ ಹಣವಾದ ರಿಜರ್ವ ಫಂಡನ್ನು ಈ ಕಾರ್ಪೊರೇಟ್‌ಗಳಿಗೆ ಅನುಕೂಲ ಮಾಡಿಕೊಡಲು ಬ್ಯಾಂಕುಗಳ ಮರು–ಬಂಡವಾಳೀಕರಣಕ್ಕೆ ಬಳಸಲು ಮುಂದಾಗುತ್ತದೆಯೇ ಎಂಬುದನ್ನು ಎಚ್ಚರಿಕೆಯಿಂದ ಕಾದು ನೋಡಬೇಕು. ಇದು ಚಮಚಾ ಬಂಡವಾಳಶಾಹಿಯ ಅತ್ಯಂತ ನಿರ್ಲಜ್ಜ ಪ್ರದರ್ಶನವಲ್ಲದೆ ಬೇರೇನೂ ಅಲ್ಲ.

2014–15 ಮತ್ತು 2015–16 ರಲ್ಲಿ ಸಾರ್ವಜನಿಕ ಬ್ಯಾಂಕುಗಳ 1,12,089 ಕೋಟಿ ರೂಪಾಯಿಗಳಷ್ಟು ಕಾರ್ಪೊರೇಟ್ ವಲಯದ ಸಾಲಗಳನ್ನು ಮನ್ನಾ ಮಾಡಲಾಗಿದೆ ಎಂದು ಸರ್ಕಾರವೇ ಸಂಸತ್ತಿನಲ್ಲಿ ಒಪ್ಪಿಕೊಂಡಿದೆ. ಕಾರ್ಪೊರೇಟ್‌ಗಳಿಗೆ ಇಂತಹ ಬೃಹತ್ ಸಾಲಮನ್ನಾ ನೀಡುತ್ತಿರುವಾಗಲೇ ಬಡ ರೈತರ ಕೆಲವು ಸಾವಿರ ರೂಪಾಯಿಗಳ ಸಾಲ ಬಾಕಿಗಾಗಿ ಅವರ ಆಸ್ತಿ, ಜಾನುವಾರುಗಳನ್ನು ವಶಪಡಿಸಿಕೊಂಡು ಅವರ ವಿರುದ್ಧ ಮೊಕದ್ದಮೆ ನಡೆಸಲಾಗುತ್ತಿದೆ. ಇಂತಹ ಸಾಲಹೊರೆಗಳೇ ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳಿಗೆ ಪ್ರಧಾನ ಕಾರಣವಾಗಿದೆ. ಈ ತೆರನ ಕೃಷಿ ಬಿಕ್ಕಟ್ಟಿಗೆ ತುತ್ತಾಗುತ್ತಿರುವ ರೈತರಿಗೆ ಸಾಲಮನ್ನಾ ಮೂಲಕ ಪರಿಹಾರ ನೀಡಲು ನಿರಾಕರಿಸುವ ಸರಕಾರ ದೊಡ್ಡ ಕಾರ್ಪೊರೇಟ್ ಬಂಡವಾಳಿಗರ ಸಾಲಗಳನ್ನು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಮನ್ನಾ ಮಾಡಲು' ಮುಂದಾಗಿದೆ.

ಮೊದಲು ಕಾರ್ಪೊರೇಟ್‌ಗಳು ಈ ಸಾಲಗಳನ್ನು ಮರುಪಾವತಿ ಮಾಡಲೇಬೇಕೆಂದು ಬಲವಂತ ಮಾಡಬೇಕು, ಆನಂತರವೇ ಬ್ಯಾಂಕುಗಳ ಮರುಬಂಡವಾಳೀಕರಣ ನಡೆಯಬೇಕು. ಆದರೆ ಈ ಸರ್ಕಾರ ಅಂಥಹ ಆಲೋಚನೆಯನ್ನು ನಿರಾಕರಿಸುತ್ತಿದೆ. ಮೊದಲು ವಸೂಲಿ ನಂತರ ಮರುಬಂಡವಾಳ ನೀಡಿಕೆ ಎಂಬುದರ ಮೇಲೆ ನಮ್ಮ ಹೋರಾಟ ಆಧಾರಿತವಾಗಬೇಕು.

ಚಮಚಾ ಬಂಡವಾಳಶಾಹಿಯ ಮತ್ತೊಂದು ಅಭಿವ್ಯಕ್ತಿಯೆಂದರೆ, ಸರ್ಕಾರವೇ ಒಪ್ಪಿಕೊಂಡಂತೆ 2015–16ರಲ್ಲಿ ತೆರಿಗೆ ಆದಾಯದಲ್ಲಿ ಬಿಟ್ಟುಕೊಟ್ಟ ಮೊತ್ತ 6,11,128 ಕೋಟಿ ರೂಪಾಯಿಗಳು. ಕಾರ್ಪೊರೇಟ್‌ಗಳು ಮತ್ತು ಶ್ರೀಮಂತರಿಗೆ ಇಷ್ಟು ದೊಡ್ಡ ತೆರಿಗೆ ರಿಯಾಯಿತಿ ಕೊಡಲು ತಯಾರಿರುವ ಸರ್ಕಾರ ಈಗಾಗಲೇ ಬಡವರಿಗೆ ಪರಿಹಾರಗಳನ್ನು ಒದಗಿಸಲು ಕಾನೂನುಗಳ ಮೂಲಕ ರೂಪಿಸಿದ ಯೋಜನೆಗಳಿಗೆ ತಮ್ಮ ಬಳಿ ಸಂಪನ್ಮೂಲಗಳಿಲ್ಲ ಎಂದು ನೆವ ಒಡ್ಡುತ್ತಿರುವುದು ಈ ಬಿಜೆಪಿ ನೇತೃತ್ವದ ಸರಕಾರ ಚಮಚಾ ಬಂಡವಾಳಶಾಹಿಯನ್ನು ಹೇಗೆ ಪ್ರೋತ್ಸಾಹಿಸುತ್ತಿದೆ ಎಂಬುದನ್ನು ತೋರಿಸುತ್ತದೆ.

## ಕುಸಿದು ಹೋಗುತ್ತಿರುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆ

ಪ್ರಾಥಮಿಕ ಆರೋಗ್ಯ ವಲಯದಲ್ಲಿ ಸಾರ್ವಜನಿಕ ಹೂಡಿಕೆಯ ಮಟ್ಟಗಳಲ್ಲಿ ತೀವ್ರ ಇಳಿಕೆಯಿಂದಾಗಿ ಸಾರ್ವಜನಿಕ ಆರೋಗ್ಯದ ಬಿಕ್ಕಟ್ಟು ತುರ್ತು ಗಮನ ನೀಡಬೇಕಾದ ಪ್ರಮಾಣವನ್ನು ತಲುಪಿದೆ. ಸರ್ಕಾರೀ ಆರೋಗ್ಯ ಸಂಸ್ಥೆಗಳು, ಅಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಕೊರತೆಗಳು, ಮತ್ತು ಖಾಸಗೀ ವ್ಯವಹಾರಗಳ ತ್ವರಿತ ವಿಸ್ತರಣೆಗಳಿಂದಾಗಿ ಬಡ ಮತ್ತು ದಮನಿತ ವರ್ಗದ ಜನ ದಯನೀಯ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಔಷಧಗಳ ಉತ್ಪಾದನೆ ಮತ್ತು ಸರಬರಾಜಿನ ಕೆಲಸವನ್ನು ಸರ್ಕಾರ ನಿಲ್ಲಿಸಿರುವುದರಿಂದ ಅವುಗಳ ಬೆಲೆ ಗಗನಕ್ಕೇರಿದೆ. ಥಲಸೇಮಿಯಾ(ವಂಶವಾಹಿನಿಯ ಕಾರಣದಿಂದ ದೇಹದಲ್ಲಿ ಉಂಟಾಗುವ ರಕ್ತ ಸಂಬಂಧೀ )ಕಾಯಿಲೆಯಿಂದ ನರಳುತ್ತಿರುವ ಸಾವಿರಾರು ಜೀವಗಳಿಗೆ ಅವರು ಅವಲಂಬಿಸಿರುವ ಡೆಸ್ಫರಾಲ್ ಔಷಧಿ ತಯಾರಿಕೆಯ ಏಕಸ್ವಾಮ್ಯ ಹೊಂದಿರುವ ಕಂಪನಿ ನೋವಾರ್ಟಿಸ್ ಕೃತಕ ಅಭಾವ ಸೃಷ್ಟಿಸಿರುವುದರಿಂದ ಬೆದರಿಕೆಯುಂಟಾಗಿದೆ.

ಸಾಮಾನ್ಯವಾಗಿರುವ ಆಹಾರದ ಅಭದ್ರತೆಯಿಂದಾಗಿ ದೆಸದಲ್ಲಿ ಅಪೌಷ್ಟಿಕತೆಯ ಪ್ರಮಾಣ ಪಾತಾಳಕ್ಕೆ ಇಳಿಯುವಂತಾಗಿದೆ. ಹೆಚ್ಚಳಕ್ಕೆ ಕಾರಣವಾಗಿದೆ. ಇದು ಮುಖ್ಯವಾಗಿ ಚಿಕ್ಕ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರಲ್ಲಿ ಗಾಬರಿ ಹುಟ್ಟಿಸುವ ಪ್ರಮಾಣಕ್ಕೆ ಏರಿದೆ. ಈಗ ಭಾರತದಲ್ಲಿ ಮಕ್ಕಳಲ್ಲಿ ಕಮ್ಮಿ ತೂಕ ಮತ್ತು ಕುಂಠಿತ ಬೆಳವಣಿಗೆಯ ಪ್ರಮಾಣ ವಿಶ್ವದಲ್ಲಿಯೇ ಅತೀ ಹೆಚ್ಚು. ಆರೋಗ್ಯ ವಲಯಕ್ಕೆ ಜಿ.ಡಿ.ಪಿಯ 1% ಮಾತ್ರ ಮೀಸಲಿಟ್ಟಿರುವುದರಿಂದ ಡೆಂಗ್ಯು, ಚಿಕುನ್‌ಗುನ್ಯಾದಂಥಹ ಸುಲಭವಾಗಿ ಹರಡುವಂಥಹ ಖಾಯಿಲೆಗಳ ನಿಯಂತ್ರಣ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ. ದೆಹಲಿ, ಕೋಲ್ಕತ್ತಾದಂಥಹ ಮಹಾನಗರಗಳಲ್ಲಿ ಅದು ಸಾಂಕ್ರಾಮಿಕ ಸ್ವರೂಪ ಪಡೆದಿದೆ.

## ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ನರೇಂದ್ರ ಮೋದಿಯವರು ಹಿಂದಿನ ಯುಪಿಎ ಸರ್ಕಾರದ ವಿರುದ್ಧ ತೀವ್ರ ಆಕ್ರಮಣಕಾರಿ ಪ್ರಚಾರಗಳನ್ನು ನಡೆಸಿದರೂ ಸಹ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳು ನಿಲ್ಲದೆ ಹಾಗೆಯೇ ಮುಂದುವರಿಯುತ್ತಿವೆ ಮಾತ್ರವಲ್ಲ ಪಿಡುಗಿನಂತೆ ಬೆಳೆಯುತ್ತಿವೆ. ತೀವ್ರ ಆತಂಕಕಾರಿ ಬೆಳವಣಿಗೆ ಎಂದರೆ ಎಳೆಯ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರದಂತಹ ದೌರ್ಜನ್ಯಗಳು ಹೆಚ್ಚುತ್ತಿರುವುದು. ಎಳೆಗೂಸುಗಳನ್ನೂ ಬಿಡುತ್ತಿಲ್ಲ. ಅಲ್ಪಸಂಖ್ಯಾತರು

ಮತ್ತು ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವ ಒಂದು ವಾತಾವರಣದಲ್ಲಿ ಈ ವಿಭಾಗಗಳ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವು ಈ ಆಕ್ರಮಣಕ್ಕೆ ಒಂದು ಗಟ್ಟಿ ಆಯುಧವಾಗುತ್ತಿದೆ.

ಮಹಿಳಾ ಸಬಲೀಕರಣದ ಪ್ರಶ್ನೆಯಲ್ಲಿ ಎರಡು ದಶಕಗಳ ಹಿಂದೆ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆ ಈಗಲೂ ಶೈತ್ಯಾಗಾರದಲ್ಲಿಯೇ ಉಳಿದಿದೆ. ಮಹಿಳಾ ಚಳುವಳಿ ಮಾತ್ರ ವಲ್ಲ ಎಲ್ಲ ಪ್ರಜಾಸತ್ತಾತ್ಮಕ ವಿಭಾಗಗಳ ಜನತೆ ಮಸೂದೆಯ ಅಂಗೀಕಾರಕ್ಕಾಗಿ ಒತ್ತಡ ಹೇರಬೇಕಿದೆ.

## ಸೆಪ್ಟೆಂಬರ್ 2 ರ ಮುಷ್ಕರ

ದೇಶದ ದುಡಿಯುವ ಜನತೆಯ ಜೀವನ ಮಟ್ಟದಲ್ಲಿನ ಈ ತೀವ್ರ ಕುಸಿತದ ವಿರುದ್ಧ ಮತ್ತು ದುಡಿಯುವ ಜನತೆಯ ನ್ಯಾಯಬದ್ಧವಾದ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ, ಹಿಂದಿನ ಮನಮೋಹನ್ ಸಿಂಗ್ ಸರಕಾರಕ್ಕಿಂತಲೂ ತೀವ್ರ ಆಕ್ರಮಣಕಾರಿಯಾಗಿ ಜಾರಿಗೆ ತರಲಾಗುತ್ತಿರುವ ನವ ಉದಾರೀಕರಣ ನೀತಿಗಳ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿದ್ದ ಸೆಪ್ಟೆಂಬರ್ 2ರ ಮುಷ್ಕರದ ಕರೆಗೆ ದೇಶದಲ್ಲಿ ವ್ಯಾಪಕ ಪ್ರತಿಸ್ಪಂದನೆ ದೊರೆತಿದೆ. ಈ ಮುಷ್ಕರದ ಪ್ರಭಾವವು ಕಳೆದ ವರ್ಷದ ಮುಷ್ಕರಕ್ಕಿಂತಲೂ ಹೆಚ್ಚಾಗಿದೆ.

## ಹರಿತಗೊಳ್ಳುತ್ತಿರುವ ಕೋಮುಧ್ರುವೀಕರಣ

**ಗೋರಕ್ಷಣೆಯ ನೆಪದ ಕಾವಲು ಸಮಿತಿಗಳನ್ನು ನಿಷೇಧಿಸಬೇಕು :** ಕಳೆದ ಕೇಂದ್ರ ಸಮಿತಿಯ ವರದಿಯಲ್ಲಿ ನಾವು ಬಿಜೆಪಿ ಸರಕಾರದ ಪೋಷಣೆಯಲ್ಲಿ ವಿವಿಧ ರಾಜ್ಯಗಳಲ್ಲಿ ಹಿಂದುತ್ವ ಶಕ್ತಿಗಳು ನಡೆಸುತ್ತಿರುವ ಸರ್ವತೋಮುಖ ದಾಳಿಯ ಬಗೆಗೆ ಚರ್ಚಿಸಿದ್ದೆವು. 2014ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಲವ್ ಜಿಹಾದ್, ಘರ್ ವಾಪ್ಸಿ, ಬಲವಂತದ ಮತಾಂತರ, ಹಿಂದುತ್ವ ರಾಷ್ಟ್ರೀಯವಾದ, ದ್ವೇಷದ ಭಾಷಣಗಳು, ಮುಂತಾದ ಒಂದಿಲ್ಲೊಂದು ಪ್ರಶ್ನೆಗಳ ಮೇಲೆ ಪ್ರಚಾರದ ಮೂಲಕ ಕೋಮುಧ್ರುವೀಕರಣವನ್ನು ಹರಿತಗೊಳಿಸಿದ ನಂತರ ಇತ್ತೀಚಿನ ಅವರ ಪ್ರಚಾರ 'ಗೋರಕ್ಷಣೆ'ಯದ್ದು.

ಗೋರಕ್ಷಣೆಯ ಹೆಸರಿನಲ್ಲಿ ವಿವಿಧ ರಾಜ್ಯಗಳಲ್ಲಿ ಗೋರಕ್ಷಣಾ ಸಮಿತಿಗಳನ್ನು ಕ್ರಿಯಾಶೀಲಗೊಳಿಸಲಾಗಿದೆ. ತಮ್ಮನ್ನು ಗೋಸಂರಕ್ಷಕರೆಂದು ಸಾರಿಕೊಳ್ಳುವ ಗಲಭೆಕೋರರ ಈ ಗುಂಪುಗಳು ದಲಿತರು ಮತ್ತು ಮುಸ್ಲಿಮರ ಮೇಲೆ ಗೋಹತ್ಯೆ ಮತ್ತು ಗೋಮಾಂಸ ಸೇವನೆಯ ಸುಳ್ಳು ಆಪಾದನೆಗಳನ್ನು ಹಾಕಿ ಮನಬಂದಂತೆ ದಾಳಿಗಳನ್ನು ನಡೆಸುತ್ತಿದ್ದಾರೆ. ಹಲವು ಬಿಜೆಪಿ ರಾಜ್ಯ ಸರಕಾರಗಳು ಮತ್ತು ಇತರ ಕೆಲವು ಸರಕಾರಗಳು ಗೋರಕ್ಷಣಾ ಕಾನೂನನ್ನು ತಂದಿವೆ. ಇವನ್ನು ಜಾರಿ ಮಾಡುವ ಕೆಲಸವನ್ನು ಈ ಗೋಕಾವಲು ಪಡೆಗಳು ತಮ್ಮ ಕೈಗೆ ತೆಗೆದುಕೊಂಡಿವೆ. ಪರಿಣಾಮವೆಂದರೆ ಮುಸ್ಲಿಮರು ಮತ್ತು ದಲಿತರ ನಡುವೆ ಭಯೋತ್ಪಾದನೆ ಮತ್ತು ಅವರ ಮೇಲೆ ದಾಳಿಗಳು.

ದಾದ್ರಿಯಲ್ಲಿ ಮಹಮದ್ ಅಖ್ಲಾಕ್‌ರನ್ನು ಕೊಚ್ಚಿಕೊಂದ ನಂತರ ಜಾರ್ಖಂಡ್‌ನ ಲಾತೇಹಾರ್‌ನಲ್ಲಿ ಇಬ್ಬರು ಯುವ ದನದ ವ್ಯಾಪಾರಿಗಳನ್ನು ಬಹಿರಂಗವಾಗಿ ನೇಣಿಗೇರಿಸಲಾಗಿದೆ. ಗುಜರಾತ್‌ನ ಊನಾದಲ್ಲಿ ನಾಲ್ವರು ದಲಿತ ಯುವಜನರಿಗೆ ಛಡಿ ಏಟುಗಳನ್ನು ನೀಡಿದ್ದು ದಲಿತರ ವಿರುದ್ಧದ ವಿಶೇಷವಾಗಿ ಗುರಿಯಿಟ್ಟ ದಾಳಿ. ಹರ್ಯಾಣದ ಮುಸ್ಲಿಂ ಬಾಹುಳ್ಯದ ಮೇವಾತ್ ಜಿಲ್ಲೆಯಲ್ಲಿ ಈ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ನಡೆದದ್ದು ಇತ್ತೀಚಿನ ಘಟನೆ. ಗೋಮಾಂಸ ಹೊಂದಿದ್ದರೆಂಬ ಆರೋಪ ಹಾಕಿ ಇಬ್ಬರು ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು, ಜನಗಳನ್ನು ಕೊಲ್ಲಲಾಯಿತು. ಮೇವಾತ್ ಪ್ರದೇಶವು ಬಿರಿಯಾನಿಗಾಗಿ ಪ್ರಸಿದ್ಧವಾಗಿದೆ. ಈದ್ ಹಬ್ಬದ ಸಂದರ್ಭದಲ್ಲಿ ಗೋಮಾಂಸ ಇರಬಹುದೆಂಬ ಗುಮಾನಿಯ ಮೇಲೆ ಬಿರಿಯಾನಿಯನ್ನು

ಪರೀಕ್ಷಿಸುವ ಕ್ರಮವನ್ನು ತಂದು ಭೀತಿಗೊಳಪಡಿಸಿ ಜೋರಾಗಿ ನಡೆಯುತ್ತಿದ್ದ ಬಿರಿಯಾನಿ ವ್ಯಾಪಾರಕ್ಕೆ ಸಂಪೂರ್ಣವಾಗಿ ನೀರೆರಚಲಾಯಿತು.

ಆಘಾತಕಾರಿ ವಿಷಯವೆಂದರೆ ಬಹಳಷ್ಟು ಪ್ರಕರಣಗಳಲ್ಲಿ ಪೋಲಿಸ್ ಮತ್ತು ಆಡಳಿತಗಳು ಮೌನ ಪ್ರೇಕ್ಷಕರಾಗಿ ಉಳಿದಿವೆ. ಕೆಲವೊಮ್ಮೆ ದುಷ್ಕರ್ಮಿಗಳಿಗೆ ಸಹಕಾರ ನೀಡುತ್ತಾ ದಾಳಿಗಳಿಗೆ ಗುರಿಯಾದವರ ಮೇಲೆಯೇ ಮೊಕದ್ದಮೆಗಳನ್ನು ಕೂಡ ಹೂಡಿವೆ. ಇತ್ತ ಗೋಸಂರಕ್ಷಣಾ ಕಾಯ್ದೆ ಮತ್ತು ಅದರ ಕಾವಲುಗಾರಿಕೆ ಕೃಷಿಯಲ್ಲಿ ಆತಂಕಗಳನ್ನು ಸೃಷ್ಟಿಸುತ್ತಿವೆ, ಕೃಷಿಕರ ಬದುಕನ್ನು ನಾಶ ಮಾಡುತ್ತಿವೆ. ಹಸುಗಳ ಉತ್ಪಾದಕ ವಯಸ್ಸು ಮುಗಿದ ಮೇಲೆ ಅವುಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಬಹಳಷ್ಟು ಕಡೆಗಳಲ್ಲಿ ಇಲ್ಲ. ಈ ದನಗಳ ಹಿಂಡು ರೈತರ ಹೊಲ ಗದ್ದೆಗಳಿಗೆ ನುಗ್ಗಿ ರಂಪಾಟ ಮಾಡುತ್ತವೆ, ಬೆಳೆಯನ್ನು ನಾಶಮಾಡುತ್ತವೆ. ರೈತರಿಗೆ ಇದರಿಂದ ಯಾವುದೇ ಪರಿಹಾರವಿಲ್ಲ. ರಾಜಾಸ್ಥಾನದಂತಹ(ರಾಜಾಸ್ಥಾನದಲ್ಲಿ ಬಜೆಪಿ ಸರಕಾರವು ಗೋರಕ್ಷಣೆಗಾಗಿಯೇ ಪ್ರತ್ಯೇಕ ಸಚಿವ ಖಾತೆಯನ್ನು ಹೊಂದಿದೆ) ಗೋಶಾಲೆಗಳಿರುವ ಕಡೆಗಳಲ್ಲಿ ಸಹ ನೂರಾರು ಗೋವುಗಳು ಕಾಳಜಿಯ ಕೊರತೆಯಿಂದ ಸಾವನ್ನಪ್ಪುತ್ತಿವೆ.

ಇಂತಹ ಕಾವಲುಗಾರಿಕೆಯ ಪಡೆಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಅನುಮತಿ ಸಲ್ಲದು. ಕಾನೂನನ್ನು ಜಾರಿಗೊಳಿಸುವ ಕೆಲಸ ಪ್ರಭುತ್ವದ ಸಂಸ್ಥೆಗಳು ಮತ್ತು ಪೋಲೀಸರದ್ದು. ಅವರು ಕಾನೂನು ಭಂಜಕರ ವಿರುದ್ದ ಕ್ರಮಕೈಗೊಳ್ಳಬೇಕು. ಇಂತಹ ಖಾಸಗಿ ಗಲಭೆಕೋರರು ಹುಚ್ಚಾಟ ನಡೆಸಲು ಅನುಮತಿ ಇರಬಾರದು. ಈ ಕೂಡಲೇ ಈ ದನಗಳ ಕಾವಲುಗಾರಿಕೆಯ ಪಡೆಗಳನ್ನು ನಿಷೇಧಿಸಬೇಕು.

ಬಿಹಾರದ ಛಾಪ್ರಾದಂತಹ ಕಡೆಗಳಲ್ಲಿ ದೇಶದ ನಾನಾ ಭಾಗಗಳಲ್ಲಿ ಕೋಮು ಗಲಭೆಗಳು ಭುಗಿಲೇಳುತ್ತಿರುವ ವರದಿಗಳಿವೆ. ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ವಿಧಾನ ಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಹಿಂದುತ್ವವಾದಿ ಶಕ್ತಿಗಳು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ತಯಾರಿ ನಡೆಸಿವೆ ಎಂಬುದು ಸ್ಪಷ್ಟವಿದೆ.

## ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು

ಬಿಜೆಪಿ ಸರಕಾರವು ನಾನಾ ರೀತಿಯಲ್ಲಿ ನಾನಾ ನೆಲೆಗಳಿಂದ ತಮ್ಮ ಮೇಲೆ ದಾಳಿ–ದೌರ್ಜನ್ಯಗಳನ್ನು ನಡೆಸುತ್ತಿರುವವರಿಗೆ ಪೋಷಣೆ ಮತ್ತು ಪ್ರೋತ್ಸಾಹ ನೀಡುತ್ತಿರುವುದರ ವಿರುದ್ದ ದೇಶವ್ಯಾಪಿಯಾಗಿ ದಲಿತರ ನಡುವೆ ಆಕ್ರೋಶ ಬೆಳೆಯುತ್ತಿದೆ. ಮುಂಬೈ ನಗರದಲ್ಲಿ ಅಂಬೇಡ್ಕರ್ ಭವನವನ್ನು ಕೆಡವಿದ್ದರ ವಿರುದ್ದ ದೊಡ್ಡ ಸಂಖ್ಯೆಯಲ್ಲಿ ದಲಿತರು ಅಣಿನೆರೆದಿದ್ದರು. ಊನಾ ಘಡಿ ಪ್ರಕರಣಕ್ಕೆ ಪ್ರತಿರೋಧವಾಗಿ ದೊಡ್ಡ ಸಂಖ್ಯೆಯಲ್ಲಿ ದಲಿತರು ಅಣಿನೆರೆದಿದ್ದಾರೆ. ಬಿಜೆಪಿ ರಾಜ್ಯ ಸರಕಾರವು ಇದನ್ನು ತಡೆಯಲು ಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಈ ಜಾಥಾ ಮತ್ತು ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ನಮ್ಮ ಸಂಗಾತಿಗಳು ದಲಿತರು, ಕೃಷಿಕೂಲಿಕಾರರು, ಮಹಿಳಾ ಮುಂತಾದ ನಾನಾ ರಂಗಗಳ ಮೂಲಕ ಭಾಗವಹಿಸಿದರು. ವಿವಿಧ ದಲಿತ ಗುಂಪುಗಳು ಮತ್ತು ಪಕ್ಷದ ನಡುವೆ ಸಂಯೋಜನೆಯ ಕೆಲಸವು ನಡೆಯುತ್ತಿದೆ. ಸೆಪ್ಟೆಂಬರ್ 16 ರಂದು 'ದಲಿತ ಸ್ವಾಭಿಮಾನಿ ಸಂಘರ್ಷ'ದ ಬ್ಯಾನರ್ ಅಡಿಯಲ್ಲಿ ದೆಹಲಿಯಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು. ಇಂತಹ ಸಂಯೋಜನೆಗಳು ಹೆಚ್ಚಬೇಕು. ಮತ್ತು ಈ ರೀತಿಯಾಗಿ ಸಾಮಾಜಿಕ ದಮನದ ಪ್ರಶ್ನೆಯನ್ನು ಆರ್ಥಿಕ ಶೋಷಣೆಯ ಪ್ರಶ್ನೆಗಳೊಂದಿಗೆ ಕೈಗೆತ್ತಿಕೊಳ್ಳುವ ಪಕ್ಷದ ಮಹಾಧಿವೇಶನದ ತೀರ್ಮಾನವನ್ನು ಬಲಪಡಿಸಬೇಕು.

## ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು

ಈ ಅವಧಿಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಅದರಲ್ಲೂ ನಿರ್ದಿಷ್ಟವಾಗಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದಾಳಿಗಳು ತೀವ್ರಗೊಂಡಿವೆ. ಮತ್ತು ನರೇಂದ್ರ ಮೋದಿಯವರ ಚುನಾವಣಾ ಭರವಸೆಯಾದ **'ಎಲ್ಲರೊಂದಿಗೆ ಎಲ್ಲರ ಅಭಿವೃದ್ಧಿ'** ಪ್ರಾಮಾಣಿಕವಾದದ್ದು, ಅವರ ಈ ಹಿಂದಿನ ದಾಖಲೆ ಆರೆಸ್ಸೆಸ್–ಬಿಜೆಪಿಯ ಹೆಸರಿನೊಂದಿಗೆ ಅಂಟಿಕೊಂಡಿರುವ ಕೋಮುವಾದಿ ಪ್ರಚಾರವನ್ನು ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಅಡ್ಡಿಯಾಗದು ಎಂಬ ದೇಶದ ಕೋಟ್ಯಂತರ ಜನರ ನಿರೀಕ್ಷೆಗಳಿಗೆ ವಿರುದ್ಧವಾಗಿ  ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಚುನಾವಣಾ ಸಂದರ್ಭದಲ್ಲಿಯೇ ಕೋಮು ಧ್ರುವೀಕರಣ ತರಲು ಮುಜಫ್ಫರ್ ನಗರ ಕೋಮುಗಲಭೆ ಮತ್ತು ದೊಡ್ಡ ಸಂಖ್ಯೆಯಲಲಿ ಕೋಮುಗಲಭೆಗಳು ನಡೆದರೂ ಜನ ಈ ನಿರೀಕ್ಷೆ ಇಟ್ಟುಕೊಂಡಿದ್ದರು.

ಈ ಕಳೆದ ಎರಡು ವರ್ಷಗಳ ದಾಖಲೆಗಳು ವಾಸ್ತವವಾಗಿ ಕೋಮುಗಲಭೆಗಳು ಹೆಚ್ಚಾಗಿರುವುದನ್ನು ತೋರಿಸುತ್ತಿವೆ. ಕೇಂದ್ರ ಸರಕಾರದ ಮಾಹಿತಿಗಳ ಪ್ರಕಾರ ಕೋಮುಗಲಭೆಗಳಿಂದ ಆದ ಸಾವುಗಳು ಮತ್ತು ಗಾಯಾಳುಗಳ ಸಂಖ್ಯೆ 2014 ರಲ್ಲಿ 95 ಮತ್ತು 1921 ಇದ್ದದ್ದು ಕಳೆದ ವರ್ಷ 97 ಮತ್ತು 2246 ಕ್ಕೆ ಏರಿದೆ.  ಅಂದರೆ 17 ಶೇ. ಏರಿಕೆ– 2014ರಲ್ಲಿ 644 ಕೋಮುಗಲಭೆಗಳ ಪ್ರಕರಣ ದಾಖಲಾಗಿದ್ದರೆ 2015ರಲ್ಲಿ 751 ಕೋಮುಗಲಭೆಗಳು ದಾಖಲಾಗಿವೆ. ಆರೆಸ್ಸೆಸ್ ಮತ್ತು ಅದರ ಅಂಗ ಸಂಘಟನೆಗಳ  ಕುಮ್ಮಕ್ಕಿನ ಈ ಕೋಮುವಾದಿ ಆಕ್ರಮಣಗಳಲ್ಲದೇ ರಾಜಕೀಯ ವ್ಯವಸ್ಥೆ  ಮತ್ತು ಆಡಳಿತದಲ್ಲಿ ಕೋಮುವಾದಿ ವಿಷಾಣುವಿನ ನುಸುಳಿಕೆ ಪ್ರಧಾನ ಅಂಶವಾಗಿ ಕಾಣುತ್ತಿದೆ, ಅಲ್ಪಸಂಖ್ಯಾತರ ವಿರುದ್ಧ ನ್ಯಾಯದಾನ ವ್ಯವಸ್ಥೆಯಲ್ಲಿ ಕೂಡ ಪಕ್ಷಪಾತ ತೀವ್ರವಾಗಿ ಗಮನ ಸೆಳೆದಿದೆ.

## ಕಾಶ್ಮೀರ

ಬುರ್‌ಹಾನ್ ವಾನಿ ಹತ್ಯೆಯ ನಂತರದ ಕಳೆದ ಒಂಭತ್ತು ವಾರಗಳಲ್ಲಿ ಕಾಶ್ಮೀರದ ಜನರು ಬೀದಿಗಳಲ್ಲಿ ಸಾಮೂಹಿಕ ಪ್ರತಿಭಟನೆಗಳಲ್ಲಿ ತೊಡಗಿದ್ದಾರೆ. 70 ಕ್ಕೂ ಹೆಚ್ಚು ಜನರು ಭದ್ರತಾ ಪಡೆಗಳ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ. ಕೆಲವು ಸಾವಿರ ಜನರು ಗಾಯಗೊಂಡಿದ್ದಾರೆ. ಭದ್ರತಾ ಪಡೆಗಳು ಬಳಸಿರುವ ಪೆಲೆಟ್ ಗನ್‌ಗಳು ಹಲವರನ್ನು ಜೀವನ ಪರ್ಯಂತ ಅಂಗವಿಕಲರಾಗಿಸಿದೆ. ಈ ಬಾರಿ ಪ್ರತಿಭಟನೆಗಳು ನಗರ ಪಟ್ಟಣ ಪ್ರದೇಶಗಳಿಗಷ್ಟೆ ಸೀಮಿತವಾಗದೇ ಗ್ರಾಮೀಣ ಪ್ರದೇಶಗಳಿಗೂ ಹರಡಿರುವುದು ಜನಗಳ ನಡುವೆ  ಪರಕೀಯ ಭಾವನೆ ಆಳಗೊಂಡಿರುವುದನ್ನು ತೋರಿಸುತ್ತದೆ. ಭಾರತದ ಪ್ರಭುತ್ವ ಮತ್ತು ಕಾಶ್ಮೀರದ ಜನರ ನಡುವೆ ಹಿಂದೆಂದೂ ಇಂತಹ ಕಂದರ ಕಂಡಿರಲಿಲ್ಲ. ಈ ಗಲಭೆಗಳು ಆರಂಭಗೊಂಡಂದಿನಿಂದಲೂ ನಮ್ಮ ಪಕ್ಷವು ಒಂದು ಸರ್ವಪಕ್ಷ ನಿಯೋಗ ಈ ರಾಜ್ಯಕ್ಕೆ ಭೇಟಿ ನೀಡಬೇಕು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಎಲ್ಲರೊಂದಿಗೆ ಬೇಷರತ್  ಸಂವಾದವನ್ನು ಆರಂಭಿಸಬೇಕೆಂದು ಒತ್ತಾಯಿಸುತ್ತಿದೆ.  ಎರಡು ತಿಂಗಳ ದೀರ್ಘ ಕಾಲದ ಕರ್ಫ್ಯೂ ಮತ್ತು ಪಾರ್ಲಿಮೆಂಟಿನಲ್ಲಿ ಮೂರು ಚರ್ಚೆಗಳ ನಂತರ ಸರಕಾರವು ಕೊನಗೂ ಸರ್ವಪಕ್ಷ ನಿಯೋಗವನ್ನು ಕಳುಹಿಸಲೇ ಬೇಕಾಗಿ ಬಂತು.

ಪಕ್ಷವು ಜಮ್ಮು ಮತ್ತು ಕಾಶ್ಮೀರಕ್ಕೆ 370 ವಿಧಿಯ ಪ್ರಕಾರ ನೀಡಲಾದ ವಿಶೇಷ ಸ್ಥಾನಮಾನವನ್ನು ಕಾಯ್ದುಕೊಳ್ಳಬೇಕು ಮತ್ತು ಸಾಧ್ಯವಾದಷ್ಟು ಗರಿಷ್ಟವಾದ ಸ್ವಾಯತ್ತತೆಯನ್ನು ನೀಡಬೇಕೆಂದು ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ಸರ್ವಪಕ್ಷಗಳ ಭೇಟಿಯ ಮೊದಲು ಸಿಪಿಐ(ಎಂ) ಮತ್ತು ಸಿಪಿಐ  ಜಂಟಿಯಾಗಿ ತಕ್ಷಣವೇ ಐದು ಭರವಸೆ ಮೂಡಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು

ಒತ್ತಾಯಿಸಿದವು. ಅವೆಂದರೆ, ಪೆಲೆಟ್ ಗನ್‌ಗಳ ಬಳಕೆಯನ್ನು ನಿಲ್ಲಿಸುವುದು, ಎಎಫ್‌ಎಸ್‌ಪಿಎ(ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ)ಯನ್ನು ಮತ್ತು ನಾಗರಿಕ ಪ್ರದೇಶಗಳಿಂದ ಸೈನ್ಯವನ್ನು ಹಿಂತೆಗೆದುಕೊಳ್ಳುವುದು, ಸಶಸ್ತ್ರ ಪಡೆಗಳು ನಡೆಸಿದ ಅತಿ–ಆಚರಣೆಗಳ ಎಲ್ಲ ಪ್ರಕರಣಗಳ ಒಂದು ನ್ಯಾಯಾಂಗ ತನಿಖೆ, ಎಲ್ಲ ಸಾವಿಗೀಡಾದವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಪುನರ್ವಸತಿ ಹಾಗೂ ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯ ಸಮಯಬದ್ಧ ಪ್ರಾಜೆಕ್ಟ್‌ಗಳು–ಇವುಗಳಲ್ಲಿ ದುಲ್ಹಸ್ತಿ ಮತ್ತು ಉರಿ ಯೋಜನೆಗಳ ವರ್ಗಾವಣೆ, ಮತ್ತು ಶ್ರೀನಗರದಲ್ಲಿ ಐಎಂಎಂ ಮತ್ತು ಐಐಟಿಗಳ ಆರಂಭವೂ ಸೇರಿದೆ.

ಎಡಪಕ್ಷಗಳು ಸಂವಿಧಾನದ ದುರ್ಬಲಗೊಳಿಸಲಾಗಿರುವ 370 ವಿಧಿಯನ್ನು ಮತ್ತೆ ಮೊದಲಿನ ಸ್ಥಿತಿಗೆ ತರಬೇಕೆಂಬ ಆಧಾರದಲ್ಲಿ ಸಂವಾದವನ್ನು ಇದಕ್ಕೆ ಸಂಬಂಧವಿರುವ ಎಲ್ಲರೊಂದಿಗೆ ನಡೆಸಬೇಕೆಂದು ಕೂಡ ಸೂಚಿಸಿದ್ದವು. ರಾಜ್ಯದ ಮೂರು ಪ್ರದೇಶಗಳಾದ ಜಮ್ಮು, ಕಣಿವೆ ಮತ್ತು ಲಡಾಖ್ ಜಮ್ಮು ಮತ್ತು ಕಾಶ್ಮೀರ ರಾಜ್ಯದೊಳಗೆ ಸ್ವಾಯತ್ತತೆ ಹೊಂದಿರಬೇಕು. ಇದು ಸಾಂವಿಧಾನಿಕ ಮತ್ತು ಕಾನೂನಾತ್ಮಕ ವಿಷಯಗಳಲ್ಲಿ ಬದಲಾವಣೆಗಳನ್ನು ಬಯಸುವಂತದ್ದು. ಈಗಿರುವ ಆದೇಶಗಳನ್ನು ಮತ್ತು ಕಾಯ್ದೆಗಳನ್ನು ಪರಿಷ್ಕರಿಸುವುದರೊಂದಿಗೆ ಇದನ್ನು ಆರಂಭಿಸಬಹುದು. ಅದೇ ಸಮಯದಲ್ಲಿ ಪಾಕಿಸ್ತಾನದ ಜೊತೆಗೆ ಕಾಶ್ಮೀರ ಸೇರಿದಂತೆ ಎಲ್ಲ ವಿಷಯಗಳ ಕುರಿತು ಮಾತುಕತೆ ಆರಂಭಿಸಬೇಕು. 2014 ರಿಂದ ಭಾರತವು ಪಾಕಿಸ್ತಾನದೊಂದಿಗಿನ ಸಮಗ್ರ ಸಂವಾದವನ್ನು ಮುಂದೊಯ್ಯುವಲ್ಲಿ ಕೆಲವೊಮ್ಮ ಭಾರೀ ಉತ್ಸಾಹದ, ಕೆಲವೊಮ್ಮೆ ತಿರಸ್ಕಾರದ ತೀವ್ರ ಏರಿಳಿತದ ಧೋರಣೆಯನ್ನು ಅನುಸರಿಸುತ್ತಿದೆ. ದೀರ್ಘಕಾಲ ಉಳಿಯುವಂತಹ ಒಂದು ಪರಿಹಾರವನ್ನು ರೂಪಿಸುವ ನಿಟ್ಟಿನಲ್ಲಿ ಭಾರತದ ಹಿತಾಸಕ್ತಿಗಳನ್ನು ಕಾಯುವಂತಹ ಚೌಕಟ್ಟಿನಲ್ಲಿ ಮಾತುಕತೆಗಳು ನಡೆಯುವುದು ಅಗತ್ಯ.

ಸರ್ವಪಕ್ಷ ನಿಯೋಗ ಸಪ್ಟಂಬರ್ 4ಮತ್ತು 5ರಂದು ರಾಜ್ಯಕ್ಕೆ ಭೇಟಿ ನೀಡಿತು. ಆದರೆ ಸರಕಾರ ನಿರ್ದಿಷ್ಟ ಪ್ರಶ್ನೆಗಳ ಯಾವುದೇ ಮೂರ್ತ ಕಾರ್ಯಸೂಚಿಯ ಪ್ರಸ್ತಾವವನ್ನು ಇಡಲಿಲ್ಲ, ಅಥವ ನಿಯೋಗ ಭೇಟಿ ಮಾಡಬೇಕಾದ ಜನಗಳು, ಪಕ್ಷಗಳು, ನಾಗರಿಕ ಸಮಾಜದ ಸಂಘಟನೆಗಳು ಇತ್ಯಾದಿಗಳ ಬಗ್ಗೆಯೂ ಪ್ರಸ್ತಾಪಿಸಲಿಲ್ಲ. ನಿಯೋಗದ ಭಾಗವಾಗಿದ್ದ ಸಿಪಿಐ(ಎಂ) ಮತ್ತು ಸಿಪಿಐ ಈ ನಿಯೋಗ ಈ ಪ್ರಶ್ನೆಗಳ ಪರಿಹಾರದಲ್ಲಿ ಭಾಗವಿರುವ ಎಲ್ಲರೊಡನೆಯೂ, ಹುರಿಯತ್ ಮುಖಂಡರೊಡನೆ ಕೂಡ ಸಂವಾದ ನಡೆಸಬೇಕು ಎಂಬ ನಿಲುವನ್ನು ತಳೆದವು.

ನಮ್ಮ ಮುತುವರ್ಜಿಯಿಂದ ಸರ್ವ ಪಕ್ಷ ನಿಯೋಗದ ಸಿಪಿಐ(ಎಂ), ಸಿಪಿಐ, ಜೆಡಿ(ಯು) ಮತ್ತು ಆರ್‌ಜೆಡಿ ಸದಸ್ಯರಿದ್ದ ಒಂದು ನಿಯೋಗ ಐವರು ಹುರಿಯತ್ ಮುಖಂಡರನ್ನು ಭೇಟಿ ಮಾಡಲು ಹೋಯಿತು. ಒಬ್ಬರು, ಗೀಲಾನಿ ಭೇಟಿಯಾಗಲಿಲ್ಲ, ಉಳಿದವರ ಭೇಟಿಯಾಯಿತು, ಭಾರತೀಯ ಸಂಸತ್ತಿನಲ್ಲಿ ಹೀಗೆ ಮುಂದೆ ಬಂದು ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ತರಲು ಹಿತಾಸಕ್ತಿ ಹೊಂದಿರುವ ಎಲ್ಲರೊಂದಿಗೂ ಮಾತಾಡಲು ಸಿದ್ಧವಿರುವ ಶಕ್ತಿಗಳು ಇವೆ ಎಂದು ಕಾಶ್ಮೀರದ ಜನತೆಗೆ ತಿಳಿಸಲು ನಮಗೆ ಸಾಧ್ಯವಾಯಿತು. ಕಾಶ್ಮೀರದ ಜನತೆಗೆ ಹೀಗೆ ಭಾರತೀಯ ಸಂಸತ್ತಿನಲ್ಲಿ ಕಾಶ್ಮೀರಿ ಜನತೆಯ ಹೆಚ್ಚು ಅರ್ಥಪೂರ್ಣವಾದ ಮತ್ತು ಚೈತನ್ಯಶೀಲ ಸಮಗ್ರೀಕರಣಕ್ಕೆ ಯತ್ನಿಸುವ ಒಂದು ವಿಭಾಗವೂ ಇದೆ ಎಂಬ ಬಲವಾದ ಸಂಕೇತವನ್ನು ಕಳಿಸಲಾಯಿತು.

ಸರ್ವ ಪಕ್ಷ ನಿಯೋಗ ದಿಲ್ಲಿಗೆ ಮರಳಿ "ಕೇಂದ್ರ ಮತ್ತು ರಾಜ್ಯ ಸರಕಾರಗಳು ತಕ್ಷಣವೇ ಹಿತಾಸಕ್ತಿಗಳಿರುವ ಎಲ್ಲರೊಂದಿಗೂ ಒಂದು ರಾಜಕೀಯ ಸಂವಾದ ನಡೆಸಲು ಮುತುವರ್ಜಿ ವಹಿಸಬೇಕು" ಎಂದು ಒಂದು ಹೇಳಿಕೆಗೆ ಒಪ್ಪಿಕೊಂಡರೂ, ಈ ಬಿಜೆಪಿ ಸರಕಾರ ಅದರ ಮೇಲೆ

ಕ್ರಿಯೆಗಿಳಿಯಲಿಲ್ಲ. ತದ್ವಿರುದ್ಧವಾಗಿ, ಕಣಿವೆಯಲ್ಲಿ ಕೇಂದ್ರೀಯ ಪಡೆಗಳಿಗೆ ಇನ್ನಷ್ಟು ತುಕಡಿಗಳನ್ನು ಸೇರಿಸಿದೆ. ಈದ್‌ನ ದಿನ ಶ್ರೀನಗರದ ಎಲ್ಲ ಪ್ರಮುಖ ಮಸೀದೆಗಳನ್ನು ಮುಚ್ಚಿದ್ದು ಒಂದು ಅಭೂತಪೂರ್ವ ಬೆಳವಣಿಗೆ. ಈದ್‌ಗಾಗಳಲ್ಲಿ ಕೂಡ ನಂಬಿಕೆಯಿರುವವರು ಪ್ರಾರ್ಥನೆ ಸಲ್ಲಿಸಲು ಬಿಡಲಿಲ್ಲ. ಶ್ರೀನಗರದ ಪ್ರಸಿದ್ಧ ಜಾಮಿಯಾ ಮಸೀದಿ ಈ ಹಿಂದೆ ಮುಚ್ಚಿದ್ದು 1821ರಲ್ಲಿ, ಒಂದು ನೈಸರ್ಗಿಕ ಪ್ರಕೋಪದ ಸಂದರ್ಭದಲ್ಲಿ. ಈದ್ ಪ್ರಾರ್ಥನೆಗಳಿಗೆ ಅದನ್ನು ಮುಚ್ಚಿರುವುದು ಇದೇ ಮೊದಲ ಬಾರಿ. ಆದಿನದ ಸಂಘರ್ಷದಲ್ಲಿ ಮತ್ತಿಬ್ಬರು ಮೃತರಾದರು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

ಇದೊಂದು ಅಪಾಯಕಾರಿ ಸನ್ನಿವೇಶ. ಕೇಂದ್ರ ಸರಕಾರ ಮತ್ತು ಹಿಂದುತ್ವ ಶಕ್ತಿಗಳು ಒಂದು ಕರ್ಕಶ ಪಾಕಿಸ್ತಾನ-ವಿರೋಧಿ ನಿಲುವು ಮತ್ತು ಕಣಿವೆಯಲ್ಲಿ ಭದ್ರತಾ ಪಡೆಗಳ ಮೂಲಕ ದಮನ ಕ್ರಮಗಳನ್ನು ಕೈಗೊಂಡರೆ ಅದರಿಂದ ಕೋಮು ಧ್ರುವೀಕರಣ ಹರಿತಗೊಂಡು ಮುಂಬರುವ ಚುನಾವಣಾಗಳಲ್ಲಿ ಬಿಜೆಪಿಗೆ ಚುನಾವಣಾ ಪ್ರಯೋಜನಗಳನ್ನು ಒದಗಿಸ ಬರಬಹುದು ಎಂದು ಲೆಕ್ಕಾಚಾರ ಹಾಕುತ್ತಿವೆ. ಇದೊಂದು ಅಪಾಯಕಾರಿ ಆಟ. ನಾವು ಈ ಅಪಾಯದ ಬಗ್ಗೆ ಭಾರತದ ಜನತೆಯನ್ನು ಜಾಗೃತಗೊಳಿಸಬೇಕು ಮತ್ತು ಸರಕಾರ ತಕ್ಷಣವೇ ಎಲ್ಲ ಹಿತಾಸಕ್ತರೊಂದಿಗೆ ಒಂದು ರಾಜಕೀಯ ಸಂವಾದದ ಮುತುವರ್ಜಿಗಳನ್ನು ಜಾರಿಗೊಳಿಸುವಂತೆ ಬಲವಂತ ತರಲು ಕಾರ್ಯಾಚರಣೆಗಳನ್ನು ಸಂಘಟಿಸಬೇಕು.

## ಸಾಮ್ರಾಜ್ಯಶಾಹಿಯ ಕಿರಿಯ ಭಾಗೀದಾರ

ನಾವು ಕಳೆದ ಸಭೆಯಲ್ಲಿ ಗಮನಿಸಿದ ಸಂಗತಿ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಯ ಒಂದು ಸಆಮರಿಕ ಕಿರಿಯ ಭಾಗೀದಾರನಾಗಿ ಭಾರತದ ಪಾತ್ರವನ್ನು ಗಟ್ಟಿಗೊಳಿಸುವ ಕೆಲಸವನ್ನು ಮೋದಿ ಸರಕಾರ ಬಲಪಡಿಸುತ್ತಲೇ ಇದೆ.

### ಸಮರ ಸಾಗಾಣಿಕೆ ವಿನಿಮಯ ಒಪ್ಪಂದದ ಸ್ಮರಣಪತ್ರ

ಕೇಂದ್ರ ಸಮಿತಿಯ ಹಿಂದಿನ ಸಭೆಯಲ್ಲಿ ನಾವು, ಮೋದಿ ಸರಕಾರ ಸಮರ ಸಾಗಾಣಿಕೆ ಬೆಂಬಲ ಒಪ್ಪಂದದತ್ತ ಸಾಗುತ್ತಿದೆ ಎಂದು ಗಮನಿಸಿದ್ದೆವು. ಇದು ಮಿಲಿಟರಿಗಳು ಪರಸ್ಪರ ಸಮರ ಸಾಗಾಣಿಕೆ ಬೆಂಬಲದ ಸೌಲಭ್ಯಗಳನ್ನು-ಇಂಧನ, ಬಿಡಿ ಭಾಗಗಳು, ಮೆಕ್ಯಾನಿಕ್‌ಗಳು ಇತ್ಯಾದಿ- ಜಂಟಿ ತರಬೇತಿಯ ವೇಳೆಗೆ ಪಡೆಯಲು ಅವಕಾಶ ಮಾಡಿಕೊಡುವಂತ ಒಪ್ಪಂದ.

ಸರಕಾರ ಈಗ ಅಮೆರಿಕಾದೊಂದಿಗೆ ಔಪಚಾರಿಕವಾಗಿ 'ಸಮರ ಸಾಗಾಣಿಕೆ ವಿನಿಮಯ ಒಪ್ಪಂದದ ಸ್ಮರಣಪತ್ರ' (ಐಇಒಔಂ-ಐಅಝಘಿಬೀ ಇಥೆಘಿಚಿಟಿಂಜ ಒಜಟಅಡಿಚಿಟಿಜಣಾಟ ಅಜಿ ೦ಂಡಿಜಜಟಜಟಣ) ಎಂದು ಹೆಸರಿಸಿರುವ ಸಮರ ಸಾಗಾಣಿಕೆ ಒಪ್ಪಂದಕ್ಕೆ ರಕ್ಷಣಾ ಮಂತ್ರಿ ಮನೋಹರ ಪರಿಕ್ಕರ್‌ರವರ ಭೇಟಿ ವೇಳೆಯಲ್ಲಿ ಸಹಿ ಹಾಕಿದೆ.

ಇಂತಹ ಒಂದು ಒಪ್ಪಂದಕ್ಕೆ ಸಹಿ ಹಾಕಿ ಭಾರತ ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ಮಿಲಿಟರಿ ಮಿತ್ರ ಎಂಬ ಔಪಚಾರಿಕ ಸ್ಥಾನವನ್ನು ಪಡೆದಿದೆ. ಈ ಒಪ್ಪಂದದ ಅಡಿಯಲ್ಲಿ ಅಮೆರಿಕನ್ ವಿಮಾನ ಪಡೆ ಮತ್ತು ನೌಕಾಪಡೆ ಭಾರತೀಯ ನೌಕಾ ಮತ್ತು ವಾಯುನೆಲೆಗಳನ್ನು ಸಮರ ಸಾಗಾಣಿಕೆ ಬೆಂಬಲಕ್ಕೆ, ಇಂಧನಕ್ಕೆ ಮತ್ತು ಸೇವೆಗಳಿಗೆ ನಿಯಮಿತ ಆಧಾರದಲ್ಲಿ ಬಳಸಿಕೊಳ್ಳಬಹುದು. ಅಮೆರಿಕನ್ ಸಶಸ್ತ್ರ ಪಡೆಗಳು ಮೂರನೇ ದೇಶಗಳಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸುವಾಗ ಭಾರತೀಯ ಮಿಲಿಟರಿ ನೆಲೆಗಳನ್ನು ಬಳಸಿಕೊಳ್ಳಬಹುದು.

ಹೀಗೆ ಮೋದಿ ಸರಕಾರ ಭಾರತೀಯ ಸಾರ್ವಭೌಮತೆಯನ್ನು ಕುಂಠಿತಗೊಳಿಸಿದೆ ಮತ್ತು ದೇಶದ ಸಾಮರಿಕ ಸ್ವಾಯತ್ತತೆಯನ್ನು ಬಿಟ್ಟುಕೊಟ್ಟಿದೆ.

ಭಾರತ ಪಡೆದಿರುವ ಈ ಹೊಸ ಸ್ಥಾನಕ್ಕೆ ಅನುಗುಣವಾಗಿ ಭಾರತೀಯ ನೌಕಾಪಡೆಯ ನೌಕೆಗಳನ್ನು ದಕ್ಷಿಣ ಚೀನಾ ಸಮುದ್ರ ಪ್ರದೇಶದಲ್ಲಿ ಅಮೆರಿಕಾದ ಸಾಮರಿಕ ಗುರಿಗಳ ಭಾಗವಾಗಿ ಆ ಸಮುದ್ರದಲ್ಲಿ ಕಾವಲಿಗಾಗಿ ಕಳಿಸಿಕೊಟ್ಟಿದೆ.

## ವಿದೇಶಾಂಗ ಧೋರಣೆಯಲ್ಲಿ ಪಲ್ಲಟಗಳು

ಈ ಮೋದಿ ಸರಕಾರ ಭಾರತಕ್ಕೆ ಕೊಟ್ಟಿರುವ ಈ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಭಾಗೀದಾರನೆಂಬ ಹೊಸ ಸ್ಥಾನದ ಒತ್ತಡಗಳನ್ನು ಈಗ ಭಾರತದ ವಿದೇಶಾಂಗ ಧೋರಣೆಯಲ್ಲಿನ ಪಲ್ಲಟಗಳಲ್ಲಿ ಕಾಣಬಹುದು. ಪ್ರಧಾನ ಮಂತ್ರಿ ಮೋದಿ ವೆನೆಝುವೆಲಾದಲ್ಲಿ ನಡೆಯುವ ಅಲಿಪ್ತ ಶೃಂಗ ಸಭೆಯಲ್ಲಿ ಭಾಗವಹಿಸದ ಮೊದಲ ಪ್ರಧಾನ ಮಂತ್ರಿಯಾಗುತ್ತಾರೆ. ಜವಹರಲಾಲ್ ನೆಹರೂರಿಂದ ಆರಂಭಿಸಿ ಇತರ ಎಲ್ಲ ಭಾರತೀಯ ಪ್ರಧಾನ ಮಂತ್ರಿಗಳು(ತಾತ್ಕಾಲಿಕ ಪ್ರಧಾನ ಮಂತ್ರಿ ಚರಣ್‌ಸಿಂಗ್ ಬಿಟ್ಟು) ಈ ಶೃಂಗ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಅಮೆರಿಕನ್ ಮಿತ್ರನೆಂಬ ಸ್ಥಾನವನ್ನು ಪಡೆದ ಮೇಲೆ ಈ ಮೋದಿ ಸರಕಾರ ಭಾರತದ ವಿದೇಶಂಗ ಧೋರಣೆಯ ದೀರ್ಘಕಾಲದ ಆಧಾರಗೂಟವನ್ನು ಸಂಪೂರ್ಣವಾಗಿ ಕೈನಬಿಡುವತ್ತ ಸಾಗಬೇಕೆಂದಿದೆ ಎಂಬುದು ಸ್ಪಷ್ಟವಾಗಿದೆ.

## ಪ್ರವಾಹಗಳು

ಬಿಹಾರ ಮತ್ತು ಇತರ ಹಲವು ರಾಜ್ಯಗಳಲ್ಲಿ ಪ್ರವಾಹಗಳಿಂದಾಗಿ ವ್ಯಾಪಕ ಧ್ವಂಸ ಮತ್ತು ಪ್ರಾಣಹಾನಿಗಳಾಗಿವೆ. ಬಿಹಾರವೊಂದರಲ್ಲೇ ಪ್ರವಾಹಪೀಡಿತ 12 ಜಿಲ್ಲೆಗಳಲ್ಲಿ 135ಕ್ಕೂ ಹೆಚ್ಚು ಮಂದಿ ಕೊಲ್ಲಲ್ಪಟ್ಟಿದ್ದಾರೆ.

ರಾಜ್ಯ ಸರಕಾರಗಳು ಈ ಪ್ರಕೋಪಗಳಿಗೆ ತುತ್ತಾದವರಿಗೆ ತಕ್ಷಣ ಪರಿಹಾರ ಮತ್ತು ನಷ್ಟಭರ್ತಿಗೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳುವಲ್ಲಿ ಹಿಂದೆ ಬಿದ್ದಿವೆ. ಮತ್ತೆ–ಮತ್ತೆ ಸಂಭವಿಸುವ ಈ ಪ್ರವಾಹಗಳ ಹಿನ್ನೆಲೆಯಲ್ಲಿ ದೀರ್ಘಕಾಲೀನ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ.

## ಸಿಂಗೂರ್ ತೀರ್ಪು

ಸಿಂಗೂರಿನಲ್ಲಿ ಟಾಟಾ ಕಾರ್ ಯೋಜನೆಗೆಂದು ಮಾಡಿದ್ದ 997 ಎಕರೆ ಭೂಮಿಯ ಸ್ವಾಧೀನವನ್ನು ಸರ್ವೋಚ್ಚ ನ್ಯಾಯಾಲಯ ರದ್ದು ಮಾಡಿದೆ.

ಅಂದಿನ ಎಡರಂಗ ಸರಕಾರ ಈ ಯೋಜನೆ ಮೂಲಕ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಿ ಆ ಮೂಲಕ ರಾಜ್ಯದಲ್ಲಿ ಉದ್ಯೋಗ ಸೃಷ್ಠಿಸುವ ಆಶಯ ಹೊಂದಿತ್ತು.

ಆದರೆ,ಅಂದಿನ ಸಂದರ್ಭದಲ್ಲಿ ಲಭ್ಯವಿದ್ದ ಏಕೈಕ ಕಾನೂನು ಸಲಕರಣೆಯಾದ 1894ರ ಭೂ ಸ್ವಾದೀನಕಾಯ್ದೆಯ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಬೇಕಿತ್ತು. ಇದು ರೈತರ ಹಿತಾಸಕ್ತಿಯನ್ನು ಸಮರ್ಪಕವಾಗಿ ಕಾಪಾಡದ ಒಂದು ಕಾಯ್ದೆಯಾಗಿತ್ತು. ಭೂಸ್ವಾಧೀನದ ವಿಷಯದಲ್ಲಿ, “ಆಡಳಿತಾತ್ಮಕ ಮತ್ತು ರಾಜಕೀಯ ತಪ್ಪುಗಳಿಗೆ ದುಬಾರಿ ಬೆಲೆ ತೆರಬೇಕಾಯಿತು” ಎಂದು ಸಿ.ಪಿ.ಐ(ಎಂ) ತನ್ನ ಕೇಂದ್ರ ಸಮಿತಿಯ 2011ರ ವಿಧಾನಸಭಾ ಚುನಾವಣೆಯ ಪರಾಮರ್ಶೆಯ ವರದಿಯಲ್ಲಿ ಈ ಹಿಂದೆ ಒಪ್ಪಿಕೊಂಡಿತ್ತು.

ಯೋಜನೆಯನ್ನು ತೊರೆದ ಮೇಲೆ ಟಿ.ಎಂ.ಸಿ ಸರಕಾರ ವಿಧಾನ ಸಭೆಯಲ್ಲಿ ಯಾರೆಲ್ಲ ಪರಿಹಾರವನ್ನು ತೆಗೆದುಕೊಳ್ಳಲು ನಿರಾಕರಿಸಿದ್ದರೋ ಅವರಿಗೆ ಭೂಮಿಯನ್ನು ಹಿಂತಿರುಗಿಸಬೇಕೆಂಬ

ಒಂದು ಮಸೂದೆಯನ್ನು ತಂದಿತು. ಸಿಪಿಐ(ಎಂ) ಈಗ ಎಲ್ಲ ಮೂಲ ಮಾಲಿಕರಿಗೆ ಆ ಭೂಮಿಯನ್ನು ಹಿಂದಿರುಗಿಸಬೇಕೆಂದು ಹೇಳಿತು. ಪರಿಹಾರ ಸ್ವೀಕರಿಸಿದವರು ಮತ್ತು ಸ್ವೀಕರಿಸದವರ ನಡುವೆ ಯಾವುದೇ ತಾರತಮ್ಯ ಎಸಗಬಾರದೆಂದು ಅದು ಹೇಳಿತು.

ಈಗ ಸರ್ವೋಚ್ಚ ನ್ಯಾಯಾಲಯದ ತೀರ್ಪು ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನೆಲ್ಲ ಮೂಲ ಮಾಲೀಕರಿಗೆ ಅವರಿಗೆ ಸಲ್ಲಬೇಕಾದ ಪರಿಹಾರದೊಂದಿಗೆ ವಾಪಸ್ ನೀಡಬೇಕು ಎಂದು ಆದೇಶಿಸಿದೆ.

ದಶಕಗಳಿಂದ ಸಿ.ಪಿ.ಐ (ಎಂ) 1894ರ ಹಳಸಲಾದ ಕಾನೂನಿನ ಜಾಗದಲ್ಲಿ ರೈತರಿಗೆ ಸಾಕಷ್ಟು ಭದ್ರತೆ ಒದಗಿಸುವ ಕಾನೂನನ್ನು ತರಬೇಕು ಎಂದು ಆಗ್ರಹಿಸುತ್ತ ಬಂದಿದೆ. ಅಂತಿಮವಾಗಿ, 2013 ರಲ್ಲಿ ಸಂಸತ್ತು 'ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್‌ವಾಸ್ತವ್ಯದ ಕಾಯ್ದೆ' ಎಂಬುದನ್ನು ಅಂಗೀಕರಿಸಿತು. ಸಿ.ಪಿ.ಐ (ಎಂ) ರೈತರ ಹಿತದೃಷ್ಟಿಯಿಂದ ಈ ಕಾನೂನನ್ನು ಉತ್ತಮಗೊಳಿಸುವ ತನ್ನ ಪ್ರಯತ್ನಗಳನ್ನು ಮುಂದುವರೆಸುತ್ತದೆ. ತದ್ವಿರುದ್ಧವಾಗಿ ಪ್ರಸಕ್ತ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ. ಸರಕಾರ ಈ ಕಾನೂನನ್ನು ದುರ್ಬಲಗೊಳಿಸುವ ಸುಗ್ರೀವಾಜ್ಞೆ ತರಲು ಪ್ರಯತ್ನಿಸಿದೆ, ಈ ಕಾನೂನನ್ನು ಬುಡಮೇಲು ಮಾಡುವ ಪ್ರಯತ್ನವನ್ನು ಮುಂದುವರೆಸಿದೆ. ಸಿಪಿಐ (ಎಂ) ಈ ಕಾನೂನನ್ನು ದುರ್ಬಲಗೊಳಿಸುವ ಎಲ್ಲ ಪ್ರಯತ್ನಗಳನ್ನು ವಿರೋಧಿಸುತ್ತದೆ ಮತ್ತು ಪ್ರಸ್ತುತ ಹಲವು ರಾಜ್ಯ ಸರಕಾರಗಳು ಈ ರೀತಿ ದುರ್ಬಲಗೊಳಿಸುತ್ತಿರುವುದನ್ನು ವಿರೋಧಿಸುತ್ತದೆ.

## ಕೊಖ್ರಾಜಾರ್ ಭಯೋತ್ಪಾದಕ ದಾಳಿ

ಬೋಡೋಲ್ಯಾಂಡ್ ಪ್ರಾದೇಶಿಕ ವಲಯ ಜಿಲ್ಲೆಯ ಆಡಳಿತದ ಮುಖ್ಯಾಲಯವಿರುವ ಕೊಖ್ರಾಜಾರ್ ಪಟ್ಟಣದ ಬಳಿಯ ಬಾಲಾಜನ್ ತಿನಿಯಲಿ ಬಾಝಾರ್‌ನಲ್ಲಿ ವಾರದ ಸಂತೆ ನಡೆಯುತ್ತಿದ್ದ ಸಂದರ್ಭದಲ್ಲಿ ಅಪರಿಚಿತ ಬಂದೂಕುಧಾರಿಯೊಬ್ಬ ಗುಂಡು ಹಾರಿಸಿದುವದರ ಪರಿಣಾಮವಾಗಿ ಕನಿಷ್ಠ 14 ಜನ ಕೊಲ್ಲಲ್ಪಟ್ಟಿದ್ದು, ಇನ್ನೂ 20 ಜನ ಗಂಭಿರವಾಗಿ ಗಾಯಗೊಂಡಿದ್ದಾರೆ. ಈ ಪ್ರದೇಶ ಬಹಳ ಕಾಲದಿಂದಲೂ ಭಯೋತ್ಪಾದಕತೆಗೆ ತುತ್ತಾಗುತ್ತಿದ್ದಾಗ್ಯೂ ಪೋಲೀಸ್ ಆಢಳಿತ ಮತ್ತು ರಾಜ್ಯದ ಬಿ.ಜೆ.ಪಿ ಸರಕಾರ ಜನರ ಜೀವ ಮತ್ತು ಆಸ್ತಿಗಳ ರಕ್ಷಣೆಗೆ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿಲ್ಲ.

ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್‌ನೊಂದಿಗೆ ಬಿಜೆಪಿ ಮೈತ್ರಿ ಸರಕಾರ ನಡೆಸುತ್ತಿದೆ, ಆದ್ದರಿಂದ ಈ ರೀತಿಯ ಭಯೋತ್ಪಾದಕ ದಾಳಿಗೆ ಅನುವು ಮಾಡಿಕೊಡುವಲ್ಲಿ ಅದೂ ಶಾಮೀಲಾಗಿದೆ. ಈ ದಾಳಿಯನ್ನು ಒಂದು ಎಚ್ಚರಿಕೆಯನ್ನಾಗಿ ತೆಗೆದುಕೊಳ್ಳಬೇಕು ಮತ್ತು ರಾಜ್ಯ ಸರಕಾರ ಜನರ ಸುರಕ್ಷಿತತೆ ಮತ್ತು ಭದ್ರತೆಯನ್ನು ಕಾಪಾಡಬೇಕು.

## ಕಾವೇರಿ ನೀರು ವಿವಾದ

ಕರ್ನಾಟಕ ಮತ್ತು ತಮಿಳುನಾಡಿನ ಕೆಲಭಾಗಗಳಲ್ಲಿ ಕಾವೇರಿ ನೀರಿನ ಹಂಚಿಕೆಗೆ ಸಂಬಂದಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಹಿಂಸಾಚಾರ ಮತ್ತು ಬೆಂಕಿ ಹಚ್ಚಿದ ವರದಿ ಬಂದಿದೆ.

ಕಾವೇರಿ ನೀರಿನ ವಿಷಯಕ್ಕೆ ಸಂಬಂದಪಟ್ಟಂತೆ ನ್ಯಾಯಮಂಡಳಿ ಐತೀರ್ಪನ್ನು ಜಾರಿಗೆ ತರಬೇಕೆಂದು ತಮಿಳುನಾಡು ಸರಕಾರ ದಾಖಲಿಸಿದ್ದ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ 10 ದಿನಗಳ ತನಕ ಪ್ರತಿದಿನ 15,000 ಕ್ಯೂಸೆಕ್ ನೀರನ್ನು ಬಿಡಬೇಕೆಂದು ಆದೇಶ ನೀಡಿದೆ. ಈ ಬಗ್ಗೆ

ಸಮಾಧಾನ ಇಲ್ಲದಿದ್ದರೂ ಕರ್ನಾಟಕ ಸರಕಾರ ನೀರು ಬಿಡುಗಡೆ ಮಾಡಿತು. ಆದರೆ ಅದು ಈ ತೀರ್ಪಿನ ವಿರುದ್ಧ ಮನವಿಯನ್ನು ಸಲ್ಲಿಸಿತು. ಸರ್ವೋಚ್ಚ ನ್ಯಾಯಾಲಯ ತನ್ನ ಆದೇಶವನ್ನು ಪರಿಷ್ಕರಿಸಿ, 15 ದಿನಗಳ ತನಕ ಪ್ರತಿದಿನ 12,000 ಕೂಸೆಕ್ ನೀರನ್ನು ಬಿಡುಗಡೆ ಮಾಡಬೇಕೆಂದು ಕರ್ನಾಟಕಕ್ಕೆ ಹೇಳಿತು. ಅದು ನೀರಿನ ಪ್ರಮಾಣವನ್ನು ಕಡಿಮೆ ಮಾಡಿತು, ಆದರೆ ಅವಧಿಯನ್ನು 15 ದಿನಗಳಿಗೆ ಹೆಚ್ಚಿಸಿತು. ಇದರಿಂದ ಕರ್ನಾಟಕ ಮೊದಲಿಗಿಂತ ಹೆಚ್ಚು ನೀರನ್ನು ಬಿಡಬೇಕಾಗಿ ಬಂತು. ಇದು ಕರ್ನಾಟಕದಲ್ಲಿ ಭಾವನೆಗಳನ್ನು ಕೆರಳಿಸಿತು ಎಂದು ವರದಿಯಾಗಿದೆ.

ಕಾವೇರಿ ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ತಮಿಳುನಾಡು ಮತ್ತು ಕರ್ನಾಟಕದ ನಡುವಿನ ವಿವಾದ ತುಂಬಾ ದೀರ್ಘಕಾಲದ್ದು. ಮಳೆಯ ಕೊರತೆಯ ಸಂಕಟದ ಪರಿಸ್ಥಿತಿಗಳಲ್ಲಿ ಇರುವ ನೀರನ್ನು ಹೇಗೆ ಹಂಚಿಕೊಳ್ಳಬಹುದು ಎಂಬುದನ್ನು ಮಾತುಕತೆಗಳು ಮತ್ತು ಪರಸ್ಪರ ಒಪ್ಪಂದದ ಮೂಲಕ ಮಾತ್ರವೇ ತೀರ್ಮಾನಿಸಲು ಸಾಧ್ಯ. ಈ ರೀತಿಯ ವಿವಾದಗಳ ಸಂದರ್ಭದಲ್ಲಿ ಉಭಯ ರಾಜ್ಯಗಳ ಜನರ ನಡುವೆ ಭಾವೋದ್ರೇಕವನ್ನು ಕೆರಳಿಸುವುದರಿಂದ ಮತ್ತು ಪರಸ್ಪರರ ವಿರುದ್ಧ ಎತ್ತಿ ಕಟ್ಟುವುದರಿಂದ ವಿವಾದಗಳನ್ನು ಪರಿಹರಿಸಲು ಸಾಧ್ಯವಿಲ್ಲ.

## ಹೊಸ ಶಿಕ್ಷಣ ಧೋರಣೆ

ಸಂಸತ್ತಿನಲ್ಲಿ ಹೊಸ ಶಿಕ್ಷಣ ಧೋರಣೆ ಬಗ್ಗೆ ಒಂದು ಚರ್ಚೆ ನಡೆಯುವಂತೆ ಬಲವಂತ ಮಾಡಿದೆವು. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಪ್ರಸಕ್ತ ಕರಡು ಕೇವಲ ಸಮಾಲೋಚನೆಗೆ ಮಾತ್ರ, ಸಮಾಲೋಚನೆ ಪ್ರಕ್ರಿಯೆಯ ನಂತರ ಮತ್ತು ಸಂಸತ್ತಿನಲ್ಲಿ ಚರ್ಚೆಯ ನಂತರವೇ ಧೋರಣೆಯನ್ನು ರೂಪಿಸಲಾಗುವದು ಎಂದು ಭರವಸೆ ನೀಡಬೇಕಾಯಿತು. ಎಷ್ಟರ ಮಟ್ಟಿದೆ ಅವರು ಈ ಭರವಸೆಗೆ ಬದ್ಧರಾಗಿರುತ್ತಾರೆಂದು ನೋಡಬೇಕಾಗಿದೆ.

ಆದರೆ, ಪ್ರಸ್ತುತ ಕರಡು ಭಾರತೀಯ ಶಿಕ್ಷಣದ ಕೇಂದ್ರೀಕರಣ, ಕೋಮುವಾದೀಕರಣ, ಮತ್ತು ವಾಣಿಜ್ಯೀಕರಣದ ಪಾಕವಾಗಿದೆ. ಅದು ಹಲವಾರು ಗಂಭೀರ ತೊಡಕುಗಳನ್ನು ಹೊಂದಿದೆ. ಅವೆಲ್ಲವನ್ನು ಶಿಕ್ಷಕರು, ವಿದ್ಯಾರ್ಥಿಗಳು, ಜನಪ್ರಿಯ ವಿಜ್ಞಾನ ಚಳುವಳಿ, ಮಾಹಿತಿ ತಂತ್ರಜ್ಞಾನ, ಮುಕ್ತ ತಂತ್ರಾಂಶ ಚಳುವಳಿ ಮುಂತಾದ ನಮ್ಮ ವಿವಿಧ ರಂಗಗಳಲ್ಲಿ ಪ್ರತ್ಯೇಕವಾಗಿ ಮತ್ತು ಜೊತೆಗೂಡಿ ಅಧ್ಯಯನ ಮಾಡಲಾಗುತ್ತಿದೆ ಮತ್ತು ಒಂದು ಪರ್ಯಾಲೋಚಿಸಿದ ಪ್ರತಿಸ್ಪಂದನವನ್ನು ರೂಪಿಸಲಾಗುತ್ತಿದೆ.

ಆದರೆ ಕರಡಿನ ದಿಕ್ಕನ್ನು ಗಮನಿಸಿದರೆ ಸಮಸ್ತ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದೀಕರಿಸುವ ಒಂದು ಪ್ರಯತ್ನ ಇದು ಎಂಬುದು ಸ್ಪಷ್ಟವಾಗುತ್ತದೆ. ಈಗಾಗಲೇ ಬಿಜೆಪಿ ನೇತೃತ್ವದ ರಾಜ್ಯಗಳಲ್ಲಿ ಶಾಲಾಮಟ್ಟಗಳಲ್ಲಿ ಪಠ್ಯಕ್ರಮವನ್ನು ತೀವ್ರವಾಗಿ ಬದಲಿಸಲಾಗಿದೆ. ಉನ್ನತ ಶಿಕ್ಷಣವನ್ನು ಹಿಂದುತ್ವದ ತತ್ವ ಮತ್ತು ಕಾರ್ಯಸೂಚಿಯೊಳಕ್ಕೆ ಅಡಕಗೊಳಿಸುವ ಪ್ರಯತ್ನ ನಡೆದಿದೆ. ಒಟ್ಟಾರೆಯಾಗಿ, ಇನ್ನು ಮುಂದೆ ಭಾರತದ ಇತಿಹಾಸದ ಅಧ್ಯಯನವನ್ನು ಹಿಂದೂ ಪುರಾಣಗಳ ಅಧ್ಯಯನದ ಮಟ್ಟಕ್ಕೆ ಇಳಿಸುವ ಮತ್ತು ಭಾರತೀಯ ತತ್ವಶಾಸ್ತ್ರದ ಶ್ರೀಮಂತ ಪರಂಪರೆಯನ್ನು ಕೇವಲ ಹಿಂದುತ್ವ ಧರ್ಮಶಾಸ್ತ್ರವಾಗಿ ಪರಿವರ್ತಿಸುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಬದಲಿಸುವ ಪ್ರಯತ್ನವಿದು.

ಇದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಸ್ವರೂಪವನ್ನು ಮತ್ತು ನಮ್ಮ ಮೌಲ್ಯಗಳ, ಸಮ್ಮಿಶ್ರ ಸಂಸ್ಕೃತಿಯ ಅಡಿಪಾಯಗಳನ್ನು, ವಿವಿಧ ಧರ್ಮಗಳು, ಭಾಷೆಗಳು, ಅಭ್ಯಾಸಗಳು ಮತ್ತು ಪದ್ಧತಿಗಳು ಮತ್ತು ಸಂಸ್ಕೃತಿಗಳ ಸಹಬಾಳ್ವೆಯನ್ನು ಬದಲಾಯಿಸುವ ಗಂಭೀರ ಪ್ರಯತ್ನವಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ತನ್ನ ಜಾಲತಾಣದ ಮೂಲಕ ಕೈಗೊಳ್ಳುತ್ತಿರುವ ಶಿಕ್ಷಣದ ಧೋರಣೆಯ ಮೇಲಿನ ಈ ಚರ್ಚೆಯಲ್ಲಿ ನಮ್ಮ ಘಟಕಗಳು ಭಾಗವಹಿಸಬೇಕು. ನಮ್ಮ ವಿವಿಧ ರಂಗಗಳು ತಮ್ಮ ಸ್ವತಂತ್ರ ಕಾರ್ಯಚಟುವಟಿಕಗಳನ್ನು ರೂಪಿಸುತ್ತಿವೆ; ಅವುಗಳ ಗುರಿ ಅಂತಿಮವಾಗಿ ಇತರರ ಪ್ರಯತ್ನಗಳೊಂದಿಗೆ ಸಂಯೋಜಿಸಿಕೊಂಡು ಸಂಸತ್ತಿನ ಮುಂದೆ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಮಧ್ಯಪ್ರವೇಶ ನಡೆಸುವುದು. ಏಕೆಂದರೆ ಆ ವೇಳೆಗೆ ಅಂತಿಮ ಕರಡು ಅನುಮೋದನೆಗೆ ಬರುವ ನಿರೀಕ್ಷೆಯಿದೆ.

## ಅಗರ್ತಲಾದಲ್ಲಿ ಹಿಂಸಾಚಾರ

ಐಪಿಎಫ್‌ಟಿ ತ್ರಿಪುರಾದಲ್ಲಿ ಬುಡಕಟ್ಟು ಜನರಿಗಾಗಿ ಒಂದು ಪ್ರತ್ಯೇಕ ರಾಜ್ಯದ ಆಗಬೇಕೆಂದು ಐಪಿಎಫ್‌ಟಿ ಒಂದು ವಿಭಜನಕಾರಿ ಪ್ರಚಾರ ನಡೆಸುತ್ತಿದೆ. ಅವರು ಅಗಸ್ಟ 23 ರಂದು ಒಂದು ರ್‍ಯಾಲಿಯನ್ನು ನಡೆಸಿ ಹಿಂಸಾಚಾರದಲ್ಲಿ ತೊಡಗಿದರು. ನಗರದ ಒಂದು ಭಾಗದಲ್ಲಿ ಆರಂಭವಾದ ಘಟನೆ ಕ್ಷಿಪ್ರವಾಗಿ ಇತರ ಭಾಗಗಳಿಗೂ ಹರಡಿ ಸುಮಾರು 20 ಜನ ಗಾಯಗೊಂಡರು, ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂತು. ಟಿಎಂಸಿಯ ವಿಭಾಗಗಳು ಮತ್ತು ಬಿಜೆಪಿ ಕೂಡ ಸನ್ನಿವೇಶದ ಲಾಭ ಪಡೆದುಕೊಂಡರು, ಗಲಭೆಯಲ್ಲಿ ತೊಡಗಿದ್ದವರ 'ಜೊತೆ ಕೈಜೊಡಿಸಿದರು. ಆದಾಗ್ಯೂ ಐಎನ್‌ಪಿಟಿ ಮತ್ತು ಹಿಂದಿನ ಟಿಯುಜೆಎಸ್ ನ ಮೂರು ಬುಡಕಟ್ಟು ಗುಂಪುಗಳು ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಮರು ಸ್ಥಾಪಿಸಬೇಕೆಂದು ಕರೆ ನೀಡಿದವು

ಎಡರಂಗ ಮತ್ತು ನಮ್ಮ ಪಕ್ಷ ಮಧ್ಯಪ್ರವೇಶ ಮಾಡಿ ಶಾಂತಿ ಕಾಪಾಡಲು ಮತ್ತು ಈ ರೀತಿಯ ಧಾಳಿಗಳನ್ನು ಪ್ರತಿಭಟಿಸಲು ಜನರನ್ನು ಅಣಿನೆರೆಸಿತು. ಅಗಸ್ಟ 28ರಂದು ಎಡರಂಗ ಶಾಂತಿ ರ್‍ಯಾಲಿಯೊಂದನ್ನು ಏರ್ಪಡಿಸಿ ಜನತೆಯಲ್ಲಿ ಶಾಂತಿ ಮತ್ತು ಸಾಮರಸ್ಯ ಕಾಯ್ದುಕೊಳ್ಳಬೇಕೆಂದು ಮನವಿ ಮಾಡಿತು. ತ್ರಿಪುರಾದ ಜನತೆ ಬುಡಕಟ್ಟು ಮತ್ತು ಬುಡಕಟ್ಟೇತರರ ಐಕ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ಮಾದರಿ ದಾಖಲೆಯನ್ನು ಹೊಂದಿದ್ದಾರೆ. ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಚ್ಚರದಿಂದಿದ್ದು ಎಡರಂಗ ಸರಕಾರವನ್ನು ಅಸ್ಥಿರಗೊಳಿಸುವ ಈ ವಿಭಜಕ ಶಕ್ತಿಗಳ ದುಷ್ಟ ತಂತ್ರಗಳು ವಿಫಲವಾಗುವಂತೆ ನೋಡಿಕೊಳ್ಳಬೇಕು ಮತ್ತು ಶಾಂತಿ ಮತ್ತು ಸಾಮರಸ್ಯ ಕಾಯ್ದುಕೊಳ್ಳಬೇಕೆಂದು ಸಿಪಿಐ(ಎಂ) ಮನವಿ ಮಾಡುತ್ತದೆ.

### ಎ.ಡಿ.ಸಿ ಯ ಉಪ ಚುನಾವಣೆಯಲ್ಲಿ ವಿಜಯ

ಎ.ಡಿ.ಸಿ.(ಸ್ವಾಯತ್ತ ಜಿಲ್ಲಾ ಸಮಿತಿ)ಯ ಸಿಮ್ನ–ತಮಕರ್(ಎಸ್‌ಟಿ) ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಎಡರಂಗ ಪ್ರಾಯೋಜಿತ ಸಿ.ಪಿ.ಐ(ಎಂ) ಅಭ್ಯರ್ಥಿ ಗೆದ್ದಿದ್ದಾರೆ. ಅವರು ತನ್ನ ಹತ್ತಿರದ ಐ.ಪಿ.ಎಫ್.ಟಿ. ಅಭ್ಯರ್ಥಿಯನ್ನು ಸೋಲಿಸಿದ್ದಾರೆ. ನಮ್ಮ ಅಭ್ಯರ್ಥಿ ಪಡೆದ ಮತ ಈ ಬಾರಿ ಕಳೆದ ಸಾರ್ವತ್ರಿಕ ಚುನಾವಣೆಗಿಂತ 5.6 ಶೇ. ಹೆಚ್ಚಿದೆ, ಅದೇ ಸಂರ್ಭದಲ್ಲಿ ಐ.ಪಿ.ಎಫ್.ಟಿ ಅಭ್ಯರ್ಥಿ ಪಡೆದ ಮತಗಳೂ ಸಹ 5.3 ಶೇ.ದಷ್ಟು ಹೆಚ್ಚಿದೆ. ಎಲ್ಲಾ ವಿರೋಧ ಪಕ್ಷಗಳಿಂದಲೂ ಐ.ಪಿ.ಎಫ್.ಟಿ ಗೆ ನೇರ ಮತ್ತು ಪರೋಕ್ಷ ಬೆಂಬಲ ದೊರೆತಿತ್ತು. ತೃಣಮೂಲ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂದಕ್ಕೆ ತೆಗೆದುಕೊಂಡು ಐ.ಪಿ.ಎಫ್.ಟಿ ಅಭ್ಯರ್ಥಿಗೆ ಬಹಿರಂಗವಾಗಿಯೇ ಬೆಂಬಲ ನೀಡಿತ್ತು.

## ಕೇರಳ: ಎಲ್.ಡಿ.ಎಫ್ ಸರಕಾದ 100 ದಿನಗಳು

ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ಸರಕಾರ 100 ದಿನಗಳನ್ನು ಪೂರ್ಣಗೊಳಿಸಿದೆ. ಚುನಾವಣೆ ಸಂದರ್ಭದಲ್ಲಿ ನೀಡಿದ ಕೆಲವು ಭರವಸೆಗಳನ್ನು ಅದು ಈಡೇರಿಸಿದೆ.

ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಪೆರಂಬಾವೂರು ಕೊಲೆಗೀಡಾದ ಜಿಶಾಳ ತಾಯಿಗೆ ಮನೆ ನಿರ್ಮಿಸಿ ಮಾತು ನೀಡಿದ ದಿನಾಂಕದ ಮೊದಲೇ ಅವರ ಕೈಗೊಪ್ಪಿಸಲಾಗಿದೆ, ಕಲ್ಯಾಣ ಪಿಂಚಣಿ ದರವನ್ನು ಏರಿಸಲಾಗಿದೆ, ಮುಚ್ಚಲ್ಪಟ್ಟಿದ್ದ ಗೊಡಂಬೀ ಕಾರ್ಖಾನೆಗಳನ್ನು ತೆರೆಯಲಾಗಿದೆ. 37 ಲಕ್ಷ ಜನರಿಗೆ ಅವರ ಮನೆಗಳಿಗೆ ಪಿಂಚಣಿಯನ್ನು ತಲುಪಿಸುವ ಕೆಲಸ ಮಾಡಲಾಗಿದೆ. ಅಲ್ಲದೆ ಸಮಗ್ರ ಸಾಲ ಮನ್ನಾ ಯೋಜನೆಯನ್ನು ಪ್ರಾರಂಭಿಸಲು ಸರಕಾರಕ್ಕೆ ಸಾಧ್ಯವಾಗಿದೆ. ಇವೆಲ್ಲ ಎಲ್‌ಡಿಎಫ್ ಭರವಸೆ ನೀಡಿರುವಂತೆ ನಮ್ಮ ಸಮಾಜದ ದುರ್ಬಲ ವಿಭಾಗಗಳ ಬಗ್ಗೆ ಕಾಳಜಿ ಮತ್ತು ಬದ್ಧತೆಯನ್ನು ಬಿಂಬಿಸುತ್ತವೆ.

## ಆರ್.ಎಸ್.ಎಸ್ ದಾಳಿಗಳು

ಚುನಾವಣಾ ಫಲಿತಾಂಶಗಳ ಘೋಷಣೆಯಾಗುತ್ತಿದ್ದಂತೆಯೇ ಸಿ.ಪಿ.ಐ (ಎಂ) ಕಛೇರಿಗಳು ಮತ್ತು ಕಾರ್ಯಕರ್ತರ ಮೇಲೆ ಆರ್.ಎಸ್.ಎಸ್ ನಿಂದ ಧಾಳಿ ಆರಂಭವಾಗಿದ್ದು ಈ ವರೆಗೆ ನಮ್ಮ ನಾಲ್ಕು ಸಂಗಾತಿಗಳ ಜೀವವನ್ನು ಬಲಿಪಡೆದು ರಾಜ್ಯದಾದ್ಯಂತ ತೀವ್ರ ಸ್ವರೂಪಕ್ಕೆ ತಿರುಗಿದೆ. ಆ ದಾಳಿಗಳ ವಿವರಣೆಯನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಅವರು ಈ ದಾಳಿಗಳನ್ನು ಹೆಚ್ಚಿಸುತ್ತಿರುವಾಗಲೇ ಆರ್.ಎಸ್.ಎಸ್–ಬಿಜೆಪಿ ವಕ್ತಾರರು ಈ ದಾಳಿಗಳನ್ನು ಸಿ.ಪಿ.ಐ (ಎಂ) ತಮ್ಮ ವಿರುದ್ಧ ಮಾಡುತ್ತಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಕೇಂದ್ರ ಗೃಹ ಸಚಿವರು ಕೇರಳ ಮುಖ್ಯಮಂತ್ರಿಗಳಿಗೆ ಆರ್.ಎಸ್.ಎಸ್ ಕಾರ್ಯಕರ್ತರ ರಕ್ಷಣೆ ಮಾಡಬೇಕೆಂದು ಹೇಳಿದ್ದಾರೆ. ಸತ್ಯ ಸಂಗತಿ ತದ್ವಿರುದ್ಧವಾಗಿದೆ. ಕಳೆದ ಚುನಾವಣೆಗಳಲ್ಲಿ ತನ್ನ ಚುನಾವಣಾ ಬೆಂಬಲದಲ್ಲಿ ತೀವ್ರ ಏರಿಕೆಯಾಗಿರುವ ಸಂದರ್ಭದಲ್ಲಿ ಬಿಜೆಪಿ ಕೇರಳದಲ್ಲಿ ರಾಜಕೀಯ ಗಳಿಕೆಗೆ ಈ ರೀತಿಯ ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯದ ಮೂಲಕ ಪ್ರಯತ್ನಿಸುತ್ತಿದೆ. ಜತೆಗೆ ಮುಸ್ಲೀಂ ಸಮುದಾಯದ ಪ್ರಾಬಲ್ಯದ ಪ್ರದೇಶಗಳಲ್ಲಿ ಕೋಮು ಧ್ರುವೀಕರಣವನ್ನು ಹರಿತಗೊಳಿಸಲು ಪ್ರಯತ್ನಿಸುತ್ತಿದೆ. ಸಿ.ಪಿ.ಐ (ಎಂ) ಮತ್ತು ಎಲ್‌ಡಿಎಫ್ ನ ಮೇಲೆ ಆರ್.ಎಸ್.ಎಸ್–ಬಿಜೆಪಿ ಸ್ಪಷ್ಟವಾಗಿ ಹೆಚ್ಚಿಸುತ್ತಿರುವ ದಾಳಿಗಳನ್ನು ಎದುರಿಸಲು ನಮ್ಮ ಪಕ್ಷ ಸಿದ್ಧವಾಗಿರಬೇಕಿದೆ.

## ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ನಮ್ಮ ಹಿಂದಿನ ಸಭೆಯಲ್ಲಿ ಗಮನಿಸಿದಂತೆ ಮುಂದುವರೆದಿದೆ. ಆದರೆ, ತೃಣಮೂಲ ಕಾಂಗ್ರೆಸ್ ಅಂಗೀಕರಿಸಿರುವ ವಿಧಾನದಲ್ಲಿ ಒಂದು ಪಲ್ಲಟವಾಗಿದೆ. ಭಯೋತ್ಪಾದನೆ ಮತ್ತು ಬೆದರಿಕೆಯೊಂದಿಗೆ ಅವರು ದಬ್ಬಾಳಿಕೆ ಮತ್ತು ಆಮಿಷ(ಲಂಚ)ದ ತಂತ್ರವನ್ನೂ ಸಹ ಉಪಯೋಗಿಸಿ ವಿಧಾನಸಭಾ ಚುನಾವಣೆಗೆ ಮೊದಲು ಎಡರಂಗ ಗೆದ್ದಿದ್ದ ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಹೊಸ ರೀತಿಯ ಬೆದರಿಕಯ ತಂತ್ರಗಳನ್ನು ಉಪಯೋಗಿಸಲಾಗುತ್ತಿದೆ, ಗಂಡ ಎಡಪಕ್ಷದ ಕಾರ್ಯಕರ್ತನಾಗಿರುವುದನ್ನು ಬಿಡದಿದ್ದರೆ ಹೆಂಡತಿ ವಿಧವೆಯಾಗಿಯೇ ಬದುಕಬೇಕಾಗುತ್ತದೆ ಎಂದೋ, ಕಾಲೇಜಿಗೆ ಹೊಗುವ ಹೆಣ್ಣುಮಗಳು ಮನೆಯಲ್ಲಿದ್ದರೆ ಟಿಎಂಸಿಗೆ ಬೆಂಬಲ ನೀಡದಿದ್ದರೆ ಅತ್ಯಾಚಾರದಂತಹ ಗಂಭಿರ ಪರಿಣಾಮ ಎದುರಿಸಬೇಕಾಗುತ್ತದೆ ಎಂದೋ ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ಇಂತಹ ಎಲ್ಲಾ ವಿಧಾನಗಳ ಮೂಲಕ ಸ್ಥಳೀಯ ಚುನಾಯಿತ ಸಂಸ್ಥೆಗಳ ಕಚೇರಿಗಳನ್ನು ತಮ್ಮ ವಶಕ್ಕೆ ತಗೊಳ್ಳುತ್ತಿದ್ದಾರೆ. ಎಡರಂಗ ಗೆದ್ದಿರುವ ಒಟ್ಟು 79 ಪಂಚಾಯತ್ ಸಮಿತಿಗಳಲ್ಲಿ ಇದುವರೆಗೆ 43ನ್ನು ಬಲವಂತದಿಂದ ವಶಪಡಿಸಿಕೊಂಡಿದ್ದಾರೆ, 36ರಲ್ಲಿ ಮಾತ್ರ ಎಡರಂಗದ ಹತೋಟಿ ಇದೆ. ಗ್ರಾಮ ಪಂಚಾಯತ್‌ಗಳಲ್ಲಿ 857ರಲ್ಲಿ ಎಡರಂಗ ಬಹುಮತವನ್ನು ಪಡೆದಿತ್ತು. ಇಂತಹ

ವಿಧಾನಗಳ ಮೂಲಕ  ತೃಣಮೂಲ ಕಾಂಗ್ರೆಸ್ 416ನ್ನು ವಶಪಡಿಸಿಕೊಂಡು  ಇಂದು 427 ಮಾತ್ರ ಎಡರಂಗದ  ಹತೋಟಿಯಲ್ಲಿ ಉಳಿದಿವೆ. ಅದೇ ರೀತಿ ನಗರಸಭೆಗಳಲ್ಲಿ ಎಡರಂಗ 9ರಲ್ಲಿ ಬಹುಮತ ಪಡೆದು  ಮುನಿಸಿಪಲ್ ಮಂಡಳಿಗಳನ್ನು ರಚಿಸಿತ್ತು. ಇವುಗಳಲ್ಲಿ ಈಗ ತೃಣಮೂಲ ಕಾಂಗ್ರೆಸ್ 6 ನ್ನು ಬಲವಂತದಿಂದ ವಶಪಡಿಸಿಕೊಂಡಿದೆ, ಎಡರಂಗದ ಬಳಿ 3 ಮಾತ್ರ ಉಳಿದಿವೆ.

ಹೀಗಿವೆ ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ತೃಣಮೂಲ ಕಾಂಗ್ರೆಸ್ ಬಳಸುತ್ತಿರುವ ಹೊಸ ತಂತ್ರಗಳು. ದಾಳಿಗಳು, ಪ್ರಾಣ ಕಳಕೊಂಡ ಸಂಗಾತಿಗಳ ಸಂಖ್ಯೆ, ಆಂತರಿಕವಾಗಿ ಸ್ಥಳಾಂತರಗೊಂಡಿರುವ ಕುಟುಂಬಗಳ ಸಂಖ್ಯೆ, ಎಷ್ಟು ಜನರ ಕೃಷಿ ಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಳ್ಳಲಾಗಿದೆ ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

## ಭವಿಷ್ಯದಲ್ಲಿ ನಮ್ಮ ಕರ್ತವ್ಯಗಳು

ಕಾಶ್ಮೀರದಲ್ಲಿ ಪರಿಸ್ಥಿತಿ ಬಹಳ ಗಂಭಿರವಾಗಿದೆ ಮತ್ತು ನಾವು ಪಕ್ಷದ ಕಾರ್ಯಕ್ರಮದಲ್ಲಿ ಹೇಳಿರುವಂತೆ ಈ ಪ್ರಶ್ನೆಯನ್ನು ನಿಭಾಯಿಸಿರುವ ರೀತಿ “ಬೂರ್ಜ್ವಾ-ಭೂಮಾಲಕ  ವರ್ಗಗಳು ರಾಷ್ಟ್ರೀಯ ಐಕ್ಯತೆಯ ಜೀವನ್ಮರಣ ಪ್ರಶ್ನೆಯನ್ನು ಒಂದು ಪ್ರಜಾಸತ್ತಾತ್ಮಕ ರೀತಿಯಲ್ಲಿ  ಪರಿಹರಿಸಲು ಸೋತಿರುವುದರ ದೃಷ್ಟಾಂತವಾಗಿದೆ.”. (ಪರಿಚ್ಛೇದ 5.5)

ಬಿ.ಜೆ.ಪಿ ಸರಕಾರ ಅನುಸರಿಸುತ್ತಿರುವ ಕೋಮುವಾದಿ ಅಜೆಂಡಾ ಇಲ್ಲಿನ ಪರಿಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸಿದೆ. ಕಾಶ್ಮೀರ ಪ್ರಶ್ನೆಯನ್ನು ನಿಭಾಯಿಸುವ ಇಂತಹ ರೀತಿ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹಾಗೂ ಭದ್ರತೆ ಮತ್ತು ಸಾರ್ವಭೌಮತ್ವಕ್ಕೂ ಒಡ್ಡಿರುವ ಅಪಾಯಗಳ ಕುರಿತಾಗಿ ನಮ್ಮ ಪಕ್ಷ ದೇಶದಾದ್ಯಂತ ಪ್ರಚಾರಾಂದೋಲನ ಸಂಘಟಿಸಬೇಕು. ನಾವು ನೀಡಿರುವ ಸಲಹೆ-ಸೂಚನೆಗಳು ಈ ಸಮಸ್ಯೆಯನ್ನು ಪರಿಹರಿಸಬಹುದಾದ ರೀತಿಯ ಒಂದು ಅಗತ್ಯ ಅಂಶ ಎಂಬುದನ್ನು ದೇಶದಲ್ಲಿ ಜನತೆಯ ನಡುವೆ ಒಯ್ಯಬೇಕು.

ಪಕ್ಷ ಚುನಾವಣಾ ಸುಧಾರಣೆಗಳು ಮತ್ತು ಕೇಂದ್ರ-ರಾಜ್ಯಗಳ ಸಂಬಂಧಗಳ ಪ್ರಶ್ನೆಗಳನ್ನು ಎತ್ತಲು ಮುತುವರ್ಜಿ ವಹಿಸಬೇಕು. ಒಂದು ಹೆಚ್ಚು ಪ್ರಾಮಾಣಿಕವಾದ ಪ್ರಜಾಸತ್ತಾತ್ಮಕ ಮತ್ತು ನ್ಯಾಯಪೂರ್ಣ ಚುನಾವಣಾ ಪದ್ಧತಿಯನ್ನು ಸೃಷ್ಟಿಸುವ ಅವಶ್ಯಕತೆ ಇದೆ ಎಂಬುದನ್ನು ಬೆಂಬಲಿಸುವ ವಿಶಾಲ ಜನವಿಭಾಗಗಳನ್ನು ಅಣಿನೆರೆಸಲು ಪ್ರಯತ್ನಗಳನ್ನು ನಾವು ಮಾಡಬೇಕು.  ಅದೇ ರೀತಿಯಲ್ಲಿ, ನಾವು ಪ್ರಾದೇಶಿಕ ಪಕ್ಷಗಳೊಂದಿಗೆ ಸಂಯೋಜಿಸಿಕೊಳ್ಳಬೇಕು ಮತ್ತು ಒಕ್ಕೂಟ ರಚನೆಯನ್ನು  ಹಾಗೂ ಕೇಂದ್ರ ರಾಜ್ಯಗಳ ಸಂಬಂಧಗಳನ್ನು ಕಾಪಾಡಿಕೊಳ್ಳುವ, ಉತ್ತಮಪಡಿಸುವ ಪ್ರಶ್ನೆಯನ್ನು ಎತ್ತಬೇಕು. ಮತ್ತು ಈ ವಿಷಯವನ್ನು ಸಾರ್ವಜನಿಕ ಪ್ರಚಾರಕ್ಕೆ ಎತ್ತಿಕೊಳ್ಳಬೇಕು.'

ನಮ್ಮ ಪಕ್ಷದ ಮಹಾಧಿವೇಶನ ಮತ್ತು ಸಂಘಟನಾತ್ಮಕ ಪ್ಲೀನಂನಲ್ಲಿ ನಾವು ಈಗಾಗಲೇ ನಿರ್ಧರಿಸಿರುವಂತೆ ನಮ್ಮ ರಾಜ್ಯ ಸಮಿತಿಗಳು ಜ್ಯಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಿ ಕೋಮುವಾದ-ವಿರೋಧಿ ವೇದಿಕಗಳನ್ನು ಕಟ್ಟಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಹಾಗೂ ಕೋಮು ಧೃವೀಕರಣದ ಪ್ರಯತ್ನಗಳನ್ನು  ಬಯಲಿಗೆಳೆಯಲು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಸಂಘಟಿಸಬೇಕು.

ನಮ್ಮ ರಾಜ್ಯ ಘಟಕಗಳು ರಾಜ್ಯದಲ್ಲಿನ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಗುರುತಿಸಬೇಕು ಹಾಗೂ ಪರ್ಯಾಯ ಧೋರಣೆಗಳು ಮತ್ತು ದುಡಿಯುವ ಜನರ ಬೇಡಿಕೆಗಳ ಒಂದು ವೇದಿಕೆಯ ಮೇಲೆ  ಈ ಎಲ್ಲ ಶಕ್ತಿಗಳನ್ನು ಅಣಿನೆರೆಸುವ ಯೋಜನೆಗಳನ್ನು ರೂಪಿಸಬೇಕು.

ಈ ಸನ್ನಿವೇಶದಲ್ಲಿ ಎಡ ಶಕ್ತಿಗಳು ಮತ್ತು ದಲಿತ ಚಳುವಳಿಯ ನಡುವೆ ಐಕ್ಯತೆಯ ಬಲವಾದ ಬಂಧಗಳನ್ನು ಬೆಸೆಯಲು ಈಗ ಲಭ್ಯವಾಗಿರುವ ಅವಕಾಶಗಳನ್ನು ಯೋಜಿತ ರೀತಿಯಲ್ಲಿ ಮುಂದೊಯ್ಯಬೇಕು. ರಾಜ್ಯ ಮಟ್ಟದಲ್ಲಿ ನಮ್ಮ ಘಟಕಗಳು ಮುತುವರ್ಜಿ ವಹಿಸಬೇಕು ಮತ್ತು ಕ್ರಿಯೆಯಲ್ಲಿ ಇಂತಹ ಐಕ್ಯತೆಯನ್ನು ಬೆಸೆಯಬೇಕು.

ಈ ಮೋದಿ ಸರಕಾರ ಅಮೇರಿಕನ್ ಸಾಮ್ರಾಜ್ಯಶಾಹಿಯ ಒಬ್ಬ ಕಿರಿಯ ಸಾಮರಿಕ ಭಾಗೀದಾರನಾಗುವ ಸ್ಥಾನವನ್ನು ಒಪ್ಪಿಕೊಂಡುದನ್ನು ವಿರೋಧಿಸುವ ಒಂದು ಸಾಮ್ರಾಜ್ಯಶಾಹಿ–ವಿರೋಧಿ ಪ್ರಚಾರಾಂದೋಲನವನ್ನು ಪಕ್ಷ ಎಲ್ಲಾ ಮಟ್ಟಗಳಲ್ಲಿ ನಡೆಸಬೇಕು.

ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಆಚರಿಸಬೇಕು ಎಂಬ ನಮ್ಮ 21ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯವನ್ನು ಜಾರಿಗೆ ತರಬೇಕು. ನವೆಂಬರ್ 7, 2016 ರಿಂದ ಆರಂಭಗೊಂಡು ನವಂಬರ್ 7, 2017 ರ ವರೆಗೆ ವರ್ಷಪೂರ್ತಿ ಪ್ರಚಾರಾಂದೋಲನ ನಡೆಸಲು ನಾವು ನಿರ್ಧರಿಸಿದ್ದೆವು. ರಾಜ್ಯ ಸಮಿತಿಗಳು ಈ ಕ್ರಾಂತಿಯ ವಿಜಯದ ಪ್ರಭಾವಗಳ ವಿವಿಧ ಆಯಾಮಗಳು ಮತ್ತು 20ನೇ ಶತಮಾನದಲ್ಲಿ ಮಾನವ ನಾಗರೀಕತೆಯ ಮುನ್ನಡೆಯ ರೂಪುರೇಷೆಗಳನ್ನು ಅದು ರೂಪಿಸಿದ ಬಗೆಯನ್ನು ಬಿಂಬಿಸುವ ಮೂರ್ತ ಮತ್ತು ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಬೇಕು.

**ಹೀಗೆ ಕೇಂದ್ರ ಸಮಿತಿ**

**1. ಜನತೆಯ ಮೇಲೆ ಹೆಚ್ಚೆಚ್ಚಾಗಿ ಹೇರುತ್ತಿರುವ ಹೊರೆಗಳು– ಹೆಚ್ಚುತ್ತಿರುವ ನಿರುದ್ಯೋಗ; ಬೆಲೆಯೇರಿಕೆ ; ಕೃಷಿ ಸಂಕಟ–ರೈತಾಪಿಗಳಿಗೆ ಪರಿಹಾರ; ಭೂಮಿಯ ಪ್ರಶ್ನೆ; ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಡಿತರಕ್ಕೆ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿಯ ಅಡಿಯಲ್ಲಿ ಕೂಲಿ ಪಡೆಯಲು ಮತ್ತು ಎಲ್ಲ ಕಲ್ಯಾಣ ಕ್ರಮಗಳ ಪ್ರಯೋಜನ ಪಡೆಯಲು ಆಧಾರ್ ನೋಂದಣಿಯನ್ನು ಕಡ್ಡಾಯಗೊಳಿಸಿರುವುದರಿಂದ ಇವುಗಳ ಫಲಾನುಭವಿಗಳಿಗೆ ಕಾನೂನು ಪ್ರಕಾರ ಸಿಗಬೇಕಾದ್ದನ್ನು ನಿರಾಕರಿಸಿರುವುದು ಮುಂತಾದವುಗಳ ವಿರುದ್ಧ ಪ್ರಚಾರಾಂದೋಲನಗಳನ್ನು, ಪ್ರತಿಭಟನೆಗಳನ್ನು ಮತ್ತು ಸಮರಧೀರ ಕಾರ್ಯಾಚರಣೆಗಳನ್ನು ತೀವ್ರಗೊಳಿಸಬೇಕು, ಇದರಲ್ಲಿ ಜನಗಳ ಸ್ಥಳೀಯ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಬೇಕು;**

**2. ಕಾಶ್ಮೀರದ ಸನ್ನಿವೇಶದ ಬಗ್ಗೆ ಎಲ್ಲ ರಾಜ್ಯಗಳಲ್ಲಿ ಪ್ರಚಾರಾಂದೋಲನ ನಡೆಸಬೇಕು;**

**3. ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಕೋಮುವಾದ–ವಿರೋಧಿ ವೇದಿಕೆಗಳನ್ನು ನಿರ್ಮಾಣ ಮಾಡಬೇಕು;**

**4. ದಲಿತ ಗುಂಪುಗಳೊಂದಿಗೆ ಜಂಟಿ ಚಟುವಟಿಕೆಗಳನ್ನು/ಕಾರ್ಯಾಚರಣೆಗಳನ್ನು ಬಲಪಡಿಸಬೇಕು;**

**5. ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದಾಳಿಗಳ ವಿರುದ್ಧ ಪ್ರಚಾರಾಂದೋಲನ ನಡೆಸಬೇಕು;**

**6. ಈ ಬಿಜೆಪಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ಎದುರು ಶರಣಾಗುವುದರ ವಿರುದ್ಧ ಪ್ರಚಾರ ನಡೆಸಬೇಕು.**

**7. ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವ ವನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕು**

**ಎಂದು ನಿರ್ಧರಿಸುತ್ತದೆ.**